ಜೂನ್ 15, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1989

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಸೂರ್ಯ ಸಿಟಿ ರೈಲ್ವೆ ಬ್ರಿಡ್ಜ್ ಕೆಳಗೆ

# ಸೂಟ್‌ಕೇಸ್‌ನಲ್ಲಿ ತರುಣಿ ಶವ ರಹಸ್ಯ ಸ್ಫೋಟ!



ಮರ್ಮಕ್ಕೆ ರಾಡ್ ತುರುಕಿ ಕಗ್ಗೊಲೆ!

## RCB

## 11 ಜನರ ಆಟಕ್ಕೆ 11 ಅಮಾಯಕರ ಬಲಿ!



## ಎಣ್ಣೆ ಪಾರ್ಟಿ ಫೈಟ್‌ನಲ್ಲಿ ಕೊಲೆ; ಫೈಟ್ ಮಾಸ್ಟರ್ ಅರೆಸ್ಟ್!

## ಗೆಣೆಕಾರನಿಗಾಗಿ ಹಟ ಹಿಡಿದವಳು ಮರ್ಡರ್!



## ಭಾರತಕ್ಕೆ ಬಾಂಗ್ಲಾ ಹುಡ್ಗೀರು ಬರೋದ್ಯಾಕೆ?

# ಮಿಂಡನೇ ಬೇಕು ಎಂದು ಹಟ ಹಿಡಿದವಳ ಕೊಚ್ಚಿ ಕೊಂದ ಗಂಡ!


ವಿದ್ಯಾ ಬದುಕಿದ್ದಾಗ

**ಆಕೆ ಮದುವೆಯಾಗಿ ಒಂದು ಗಂಡು, ಒಂದು ಹೆಣ್ಣು ಎರಡು ಮಕ್ಕಳಿರುವ ಗೃಹಿಣಿ ಅರ್ಥಾತ್ ಬೇರೊಬ್ಬನ ಹೆಂಡತಿ. ಆದರೆ ವಿವಾಹ ಪೂರ್ವದಲ್ಲಿ ಬೇರೆ ಗ್ರಾಮದ ವ್ಯಕ್ತಿಯೋರ್ವನನ್ನು ಪ್ರೀತಿಸುತ್ತಿದ್ದಳು. ಮದುವೆಯ ನಂತರ ಗಂಡನೊಟ್ಟಿಗೆ ಗಂಭೀರವಾಗಿ ಅನ್ಯೋನ್ಯ ಜೀವನ ನಡೆಸುತ್ತಿದ್ದವಳಿಗೆ ಆರು ವರ್ಷದ ನಂತರ ಮತ್ತೆ ಅದ್ಯಾಗೋ ಹಳೆಯ ಪ್ರೇಮಿಯ ಸಂಪರ್ಕ ಸಿಕ್ಕಿತೋ... ಕಳೆದೊಂದು ವರ್ಷದಿಂದೀಚೆಗೆ ಹಾದಿತಪ್ಪಿದ್ದ ಅವಳು ಆತನೊಡನೆ ಅಕ್ರಮ ಸಂಬಂಧ ಮುಂದುವರಿಸಿದ್ದಳು. ಪ್ರೀತಿ, ಪ್ರೇಮ, ಪ್ರಣಯ ಎಂದು ಆತನನ್ನು ಬಿಟ್ಟಿರಲಾರದಷ್ಟು ಗಾಢವಾಗಿ ಹಚ್ಚಿಕೊಂಡಿದ್ದಳು. ಆತನ ಮೇಲೆ ಅವಳಿಗೆ ಪ್ರೀತಿ ಎಷ್ಟಿತ್ತು ಎಂದರೆ ಕಳೆದ ಮೂರು ತಿಂಗಳ ಹಿಂದೆ ಆತನಿಗಾಗಿ ಕಟ್ಟಿಕೊಂಡ ಗಂಡ ಹಾಗೂ ಹೆತ್ತಮಕ್ಕಳನ್ನೇ ತೊರೆದು ಓಡಿ ಹೋಗಿದ್ದಳು. ಈ ವೇಳೆ ಪೊಲೀಸರು ಹುಡುಕಿ ಕರೆತಂದು ಗಂಡ-ಮಕ್ಕಳೊಂದಿಗೆ ಬಾಳ್ವೆ ನಡೆಸುವಂತೆ ಬುದ್ಧಿವಾದ ಹೇಳಲು ಮುಂದಾದಾಗ ಖಡಾ-ಖಂಡಿತವಾಗಿ ನಿರಾಕರಿಸಿದ್ದರಿಂದ ಪೊಲೀಸರು ಮಹಿಳಾ ಸ್ವಾಧರ ಕೇಂದ್ರಕ್ಕೆ ಬಿಟ್ಟಿದ್ದರು. ನನಗೂ ನನ್ನ ಮಕ್ಕಳಿಗೂ ಮೋಸ ಮಾಡಿ ಅನ್ಯಜಾತಿಯವನ ಜೊತೆ ಓಡಿ ಹೋಗಿದ್ದಲ್ಲದೆ ನನ್ನನ್ನು ತಿರಸ್ಕರಿಸಿ ಆತನೇ ಬೇಕೆಂದು ಹಠ ಹಿಡಿಯುತ್ತಿರುವ ಇವಳನ್ನು ಕೊಂದೆ ತೀರಬೇಕೆಂದು ತೀರ್ಮಾನಿಸಿದ್ದ ಗಂಡ ಅಂದು ನ್ಯಾಯ ಕೇಳುವ ನೆಪದಲ್ಲಿ ಪೊಲೀಸ್ ಠಾಣೆಗೆ ಕರೆಸಿಕೊಂಡು ಮುಗಿದ ನಂತರ ವಾಪಸ್ ಹೋಗುವ ವೇಳೆ ಮಾರ್ಗಮಧ್ಯ ಕುಡುಗೋಲಿನಿಂದ ದ್ರೋಹ ಮಾಡಿದ ಹೆಂಡತಿಯ ಕುತ್ತಿಗೆ ಕತ್ತರಿಸಿ ಮಟ-ಮಟ ಮಧ್ಯಾಹ್ನವೇ ಹೆಂಡತಿಯ ಹೆಣ ಉರುಳಿಸಿ ಪರಾರಿಯಾಗಿದ್ದ. ಪತ್ನಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಹಂತಕನನ್ನು ಪತ್ತೆಹಚ್ಚಿ ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಚಾಮರಾಜನಗರ ಪಟ್ಟಣ ಠಾಣೆ ಪ್ರಭಾರ ಪಿಐ ಸಾಗರ್ ನೇತೃತ್ವದ ತಂಡ ಯಶಸ್ವಿಯಾಗಿದೆ.**


ಆರೋಪಿ ಗಿರೀಶ್

**ಚಾಮರಾಜನಗರ**
✍ಎಸ್. ಸ್ವಾಮಿ

**ಚಾ**ಮರಾಜನಗರದ ಸೋಮವಾರಪೇಟೆ ನಿವಾಸಿ ಗಿರೀಶ್ ಎಂಬಾತನ ಪತ್ನಿ ವಿದ್ಯಾ ಕೊಲೆಯಾದವಳು. ಪತ್ನಿ ಹಂತಕ ಗಿರೀಶ್ ಕೊಲೆ ಮಾಡಿ ಈಗ ಜೈಲಿನಲ್ಲಿ ಹಳೆಯದನ್ನೆಲ್ಲಾ ನೆನೆಯುತ್ತಾ ವಿಶ್ರಾಂತಿ ಪಡೆಯುತ್ತಿದ್ದಾನೆ.


ಚಾಮರಾಜನಗರ ಪಟ್ಟಣದ ಕರಿನಂಜನಪುರದ ಸಿದ್ದೇಶ್ ಹಾಗೂ ಮಾಲಿದಿ ದಂಪತಿಗಳಿಗೆ ಇಬ್ಬರು ಮಕ್ಕಳು ದೊಡ್ಡವನು ಯೋಗಿಶ್, ಆತನ ತಂಗಿ ವಿದ್ಯಾ. ವಿದ್ಯಾ ಕಾಲೇಜು ದಿನಗಳಲ್ಲಿ ವ್ಯಾಸಂಗ ಮಾಡಲು ಚಾಮರಾಜನಗರಕ್ಕೆ ಬರುತ್ತಿದ್ದಳು. ಈ ವೇಳೆ ಶ್ರೀನಿವಾಸ ಎಂಬ ಯುವಕನನನ್ನು ವಿದ್ಯಾ ಪ್ರೀತಿಸುತ್ತಿದ್ದಳು.ತಾಲ್ಲೂಕಿನ ಗಡಿಗ್ರಾಮ ಕೋಳಿಪಾಳ್ಯದ ಬಳಿಯಿರುವ ದೊಡ್ಡಮೂಡಳ್ಳಿ ಯವನಾದ ಶ್ರೀನಿವಾಸ ವೃತ್ತಿಯಲ್ಲಿ ಜೆಸಿಬಿ ಚಾಲಕನಾಗಿದ್ದ. ಈಕೆ ವ್ಯಾಸಂಗ ಮಾಡುವ ವೇಳೆ ಆತ ಅದೇ ಕಾಲೇಜಿಗೆ ಕೆಲಸಕ್ಕೆ ಬರುತ್ತಿದ್ದ. ಈ ವೇಳೆ ಪರಸ್ಪರ ಇಬ್ಬರಿಗೂ ಪ್ರೇಮಾಂಕುರವಾಗಿತ್ತು. ಶ್ರೀನಿವಾಸ ಅನ್ಯಕೋಮಿನವನಾಗಿದ್ದರಿಂದ ಮದುವೆಯಾಗಲು ಇಬ್ಬರಿಗೂ ಜಾತಿ ಅಡ್ಡ ಬಂದಿತ್ತು. ಇತ್ತ ಮಗಳ ಪ್ರೇಮದ ವಿಚಾರ ತಿಳಿದ ವಿದ್ಯಾಳ ಮನೆಯವರು ಮದುವೆ ಮಾಡುವ ಆಲೋಚನೆಯಲ್ಲಿದ್ದರು. ವ್ಯಾಸಂಗ ಮುಗಿಯುತ್ತಿದ್ದಂತೆ ವಿದ್ಯಾಳಿಗೆ ಸಮೀಪದ ಸೋಮವಾರಪೇಟೆಯ ಗಿರೀಶ್ ಎಂಬಾತನೊಡನೆ ಮದುವೆ ಮಾಡಲಾಗಿತ್ತು.


ಕೊಲೆಯಾದ ವಿದ್ಯಾ

ಸೋಮವಾರಪೇಟೆಯ ಮಹದೇವಪ್ಪ ಕೊಂತ್ತಪ್ಪ ಎಂಬುವವರಿಗೆ ಇಬ್ಬರು ಹೆಂಡತಿಯರು ಹಾಗೂ ಇಬ್ಬರು ಮಕ್ಕಳು. ಮೊದಲ ಪತ್ನಿಯ ಮಗ ಮಹೇಶ, ಎರಡನೇ ಹೆಂಡತಿ ನೀಲಮ್ಮನ ಮಗನೇ ಈ ಗಿರೀಶ.ಮಹದೇವಪ್ಪನಿಗೆ ಗ್ರಾಮದಲ್ಲಿ ಒಂದಷ್ಟು ಜಮೀನಿದೆ.ಅದನ್ನು ಮಕ್ಕಳಿಬ್ಬರು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು. ಗಿರೀಶ ವ್ಯವಸಾಯದ ಜೊತೆಗೆ ಟ್ರ್ಯಾಕ್ಟರ್ ಕೆಲಸವನ್ನು ಮಾಡುತ್ತಿದ್ದ. ಆಗಾಗ ಒಂದಷ್ಟು ಸಮಾಜಮುಖಿ ಕೆಲಸವನ್ನು ಮಾಡುತ್ತಿದ್ದ ಎನ್ನಲಾಗಿದೆ. ಮದುವೆಯ ನಂತರ ವಿದ್ಯಾ ಕಾಲೇಜು ದಿನಗಳ ಪ್ರೀತಿ ಎಲ್ಲವನ್ನು ಮರೆತು ಗಂಡನೊಟ್ಟಿಗೆ ಗಂಭೀರವಾಗಿ ಅನ್ಯೋನ್ಯ ಜೀವನ ನಡೆಸುತ್ತಿದ್ದಳು. ಗಿರೀಶನು ಹೆಂಡತಿಯನ್ನು ಅಷ್ಟೇ ಯಾವುದಕ್ಕೂ ಕೊರತೆಯಾಗದ ಹಾಗೆ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಅದರ ಫಲವಾಗಿ ದಂಪತಿಗಳಿಗೆ ಒಂದು ಗಂಡು, ಒಂದು ಹೆಣ್ಣು ಎರಡು ಮಕ್ಕಳಿದಾವು. ಆರು ವರ್ಷಗಳ ಕಾಲ ತನ್ನದೆಯಾದ ಪ್ರಪಂಚದಲ್ಲಿ ಗಂಡ-ಮಕ್ಕಳೊಡನೆ ಸುಖವಾಗಿದ್ದಳು. ಇತ್ತ ಆಕೆಯ ಹಳೆಯ ಪ್ರೇಮಿ ಶ್ರೀನಿವಾಸನಿಗೂ ಮದುವೆಯಾಗಿ ಮಕ್ಕಳಿವೆ. ಆರು ವರ್ಷದ ನಂತರ ವಿದ್ಯಾಳಿಗೆ ಮತ್ತೆ ಅದ್ಯಾಗೋ ಹಳೆಯ ಪ್ರೇಮಿಯ ಸಂಪರ್ಕ ಸಿಕ್ಕಿಬಿಟ್ಟಿದೆ. ಕಳೆದೊಂದು ವರ್ಷದಿಂದೀಚೆಗೆ ಹಾದಿತಪ್ಪಿದ್ದ ಅವಳು ಗಂಡನ ಕಣ್ಣು ತಪ್ಪಿಸಿ ಅನ್ಯೆತಿಕವಾಗಿ ಆತನೊಡನೆ ಅಕ್ರಮ ಸಂಬಂಧ ಮುಂದುವರಿಸಿದ್ದಳು. ಪ್ರೀತಿ, ಪ್ರೇಮ, ಪ್ರಣಯ ಎಂದು ಆತನನ್ನು ಬಿಟ್ಟಿರಲಾರದಷ್ಟು ಗಾಢವಾಗಿ ಹಚ್ಚಿಕೊಂಡಿದ್ದಳು.ಆತನ ಮೇಲೆ ಅವಳಿಗೆ ಪ್ರೀತಿ ಎಷ್ಟಿತ್ತು ಎಂದರೆ ಕಳೆದ ಮೂರು ತಿಂಗಳ ಹಿಂದೆ ಆತನಿಗಾಗಿ ಕಟ್ಟಿಕೊಂಡ ಗಂಡ ಹಾಗೂ ಹೆತ್ತ ಮಕ್ಕಳನ್ನೇ ತೊರೆದು ಓಡಿ ಹೋಗಿದ್ದಳು.


ಎಸ್ಪಿ ಡಾ. ಬಿ.ಟಿ. ಕವಿತಾ


ಡಿವೈಎಸ್ಪಿ ಲಕ್ಷ್ಮಯ್ಯ


ಸಿಪಿಐ ರಾಜೇಶ್


ಪಿಐ ಸಾಗರ್

ಆದರೆ, ಈ ಕುರಿತು ಸೋಮವಾರ ಪೇಟೆಯಿಂದ ಗೃಹಿಣಿಯೊಬ್ಬಳು ಕಾಣೆಯಾಗಿರುವ ಬಗ್ಗೆ ಚಾಮರಾಜನಗರದ ಪಟ್ಟಣ ಠಾಣೆಯಲ್ಲಿ ಕಳೆದ ಮೂರು ತಿಂಗಳ ಹಿಂದೆ ನಾಪತ್ತೆ ಪ್ರಕರಣದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಸಿಡಿಆರ್ ಬಳಸಿ ಓಡಿ ಹೋಗಿದ್ದ ಈ ಇಬ್ಬರು ತಮಿಳುನಾಡಿನ ಕೊಯಮತ್ತೂರಿನಲ್ಲಿರುವುದನ್ನು ಪತ್ತೆಹಚ್ಚಿ ಠಾಣೆಗೆ ಕರೆತಂದಿದ್ದರು. ಈ ವೇಳೆ ಪೊಲೀಸರು ಹಾಗೂ ಮುಖಂಡರು ಸೇರಿ ಎರಡು ಸಣ್ಣ ಮಕ್ಕಳಿವೆ. ಗಂಡನ ಮನೆಗೆ ಹೋಗಿ ಬಾಳ್ವೆ ನಡೆಸು ಎಂದು ಬುದ್ಧಿವಾದ ಹೇಳಿ ಮನವೊಲಿಸಲು ಪ್ರಯತ್ನಿಸಿದರು. ಆದರೆ ವಿದ್ಯಾಳಿಗೆ ತನ್ನ ಪ್ರೇಮಿಯ ಜೊತೆ ಓಡಿ ಹೋಗಿದ್ದರಿಂದ ನನ್ನ ಗಂಡ ನನ್ನನ್ನು ಉಳಿಸುವನೆ ಎಂಬ ಭಯಕಾಡತೊಡಗಿತ್ತು. ಹಾಗಾಗಿ ತನ್ನ ಗಂಡನ ಮನೆಗೆ ಹೋಗಲು ಖಡಾ-ಖಂಡಿತವಾಗಿ ನಿರಾಕರಿಸಿದ್ದಳು. ಇತ್ತ ಯಾವಾಗ ವಿದ್ಯಾ ಗಂಡನ ಮನೆಗೆ ಹೋಗಲು ನಿರಾಕರಿಸಿದಳು. ಪೊಲೀಸರು ಆಕೆಯನ್ನು ಚಾಮರಾಜನಗರದಲ್ಲಿರುವ ಮಹಿಳಾ ಸ್ವಾಧರ ಕೇಂದ್ರಕ್ಕೆ ತಂದು ಬಿಟ್ಟಿದ್ದರು. ಅಂದಿನಿಂದ ಆಕೆ ಮಹಿಳಾ ಸ್ವಾಧಾರ ಕೇಂದ್ರದಲ್ಲಿದ್ದುಕೊಂಡು ತನಗೆ ಓಡಿ ಹೋಗಿದ್ದತನ್ನ ಪ್ರೇಮಿಯೇ ಬೇಕು ಎಂದು ಹಟಕ್ಕೆ ಬಿದ್ದು ಗಂಡನ ಮನೆಗೆ ತೆರಳಲು ನಿರಾಕರಿಸಿದ್ದಳು. ಆದರೂ ಹಾಗಾಗ ಸ್ವಾಧಾರ ಕೇಂದ್ರದ ಬಳಿ ಹೋಗಿ ಗಲಾಟೆ ಮಾಡುತಿದ್ದ ಆದರೂ ಅಲ್ಲಿದ್ದವರು ಆತನಿಗೆ ಬುದ್ಧಿ ಹೇಳಿ ಮನೆಗೆ ಕಳುಹಿಸುತ್ತಿದ್ದರು.

ಆದರೆ ಗಂಡ ಗಿರೀಶನಿಗೆ ಮಾತ್ರ ರಕ್ತ ಕುದಿಯುತ್ತಿತ್ತು. ನನಗೂ ನನ್ನ ಮಕ್ಕಳಿಗೂ ಮೋಸ ಮಾಡಿ ಅನ್ಯಜಾತಿಯವನ ಜೊತೆ ಓಡಿ ಹೋಗಿದ್ದಲ್ಲದೆ ನನ್ನ ಹಾಗೂ ನನ್ನ ಮಕ್ಕಳನ್ನು ತಿರಸ್ಕರಿಸಿ ಆತನೇ ಬೇಕೆಂದು ಹಠ ಹಿಡಿಯುತ್ತಿರುವ ಇವಳನ್ನು ಹೇಗಾದರೂ ಮಾಡಿ ಕೊಂದೆ ತೀರಬೇಕೆಂದು ಒಳಗೊಳಗೆ ಸಂಚು ನಡೆಸುತ್ತಿದ್ದ ಗಿರೀಶ್ ಹೇಗಾದರೂ ಮಾಡಿ ಅವಳನ್ನು ಸ್ವಾಧಾರ ಕೇಂದ್ರದಿಂದ ಹೊರಗೆ ಬರುವಂತೆ ಮಾಡಬೇಕು. ಇಲ್ಲದಿದ್ದರೆ ಅವಳನ್ನು ಏನು ಮಾಡಲು ಆಗುವುದಿಲ್ಲ ಎಂದು ನಮಗೆ ಒಂದು ಗಂಡು ಒಂದು

☞12

# ಸೂರ್ಯ ಸಿಟಿ ರೈಲ್ವೆ ಬ್ರಿಡ್ಜ್ ಕೆಳಗೆ.....

# ಸೂಟ್‌ಕೇಸ್‌ನಲ್ಲಿ ತರುಣಿಯ ಶವ ರಹಸ್ಯ ಸ್ಫೋಟ!

**ವಾರದ ಹಿಂದೆ ಬೆಂಗಳೂರು ಹೊರವಲಯದ ಹಳೇ ಚಂದಾಪುರದ ರೈಲ್ವೆ ಬ್ರಿಡ್ಜ್ ಕೆಳಗೆ, ನ್ಯಾಷನಲ್ ಹೈವೇ ಪಕ್ಕದಲ್ಲೇ ಸೂಟ್ ಕೇಸ್ ಒಂದು ಬಿದ್ದಿದ್ದು ಅದರೊಳಗೆ 18ರ ಪ್ರಾಯದ ತರುಣಿಯೊಬ್ಬಳ ಶವವನ್ನು ವಿಕಾರವಾಗಿ ಮಡಚಿ ತುಂಬಿಡಲಾಗಿತ್ತು! ಅದನ್ನು ನೋಡಿ ದಾರಿಹೋಕರು ಬೆಚ್ಚಿಬಿದ್ದಿದ್ದು ಸೂರ್ಯ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಆನೇಕಲ್ ಸಬ್ ಡಿವಿಷನ್ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್ ಅವರ ನೇತೃತ್ವದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಜನ್ ತನಿಖೆ ಕೈಗೊಂಡಿದ್ದರು. ಸತತ ಒಂದು ವಾರದ ತನಿಖೆಯ ಬಳಿಕ ಆ ಭೀಕರ ಕೊಲೆಯ ಹಿನ್ನಲೆ ಪಟ್ಟೆಯಾಗಿದ್ದು ದೂರದ ಬಿಹಾರದಲ್ಲಿ ಆರೋಪಿಗಳನ್ನು ಹೆಡಮುರಿಕಟ್ಟಿ ಎಳೆತರಲಾಗಿದೆ!!**



## ಮರ್ಮಕ್ಕೆ ರಾಡ್ ತುರುಕಿ ಕಗ್ಗೊಲೆ!



ಕಿಲ್ಲರ್ ಆಶಿಕ್

ಮೇ 21, 2025, ನ್ಯಾಷನಲ್ ಹೈವೇ (ಎನ್ ಹೆಚ್ 44) ಹೊಸೂರು ಮುಖ್ಯರಸ್ತೆ, ಹಳೇ ಚಂದಾಪುರದ ರೈಲ್ವೆ ಬ್ರಿಡ್ಜ್ ಕೆಳಗೆ ನೀಲಿ ಬಣ್ಣದ ಒಂದು ಸೂಟ್‌ಕೇಸ್ ಬಿದ್ದಿತ್ತು. ಬ್ರಿಡ್ಜ್ ಕೆಳಗೆ ಪಾಸ್ ಆಗುವ ಬಸ್ಸು, ಲಾರಿ, ಸ್ಕೂಟರ್ ಸವಾರರು ಹಾಗೂ ದಾರಿಹೋಕರು ರಸ್ತೆಯ ಸಮೀಪದಲ್ಲೇ ಬಿದ್ದಿದ್ದ ಆ ಸೂಟ್‌ಕೇಸ್ ಅನ್ನು ವೀಕ್ಷಿಸಿ, ಒಳಗೇನಿರಬಹುದು ಎಂಬ ಕುತೂಹಲದಿಂದ ಹತ್ತಿರ ಹೋಗಿ ನೋಡುತ್ತಿದ್ದರು. ನಾಯಿಗಳು ಬೇರೆ ಅಡ್ಡಾಡಿದ್ದಿ ಸುತ್ತಿಕೊಂಡು ಬಂದು ಮೂಸಿ ಮೂಸಿ ನೋಡಿ ಜನರ ಕಂಡು ಅತ್ತಿತ್ತ ಓಡುತ್ತಿದ್ದವು. ಇದರ ಮಧ್ಯೆ ಯಾರೋ ಪುಣ್ಯಾತ್ಮರು ಪೊಲೀಸರಿಗೆ ಮಾಹಿತಿ ನೀಡಿದ್ದು, ರೈಲ್ವೆ ಪೊಲೀಸ್, ಚಂದಾಪುರ (ಸೂರ್ಯನಗರ) ಪೊಲೀಸ್ ಅಲ್ಲಿಗೆ ಧಾವಿಸಿ ಬಂದಿದ್ದವು.

ಸದರಿ ಸೂಟ್ ಕೇಸ್ ರೈಲ್ವೆ ಬ್ರಿಡ್ಜ್‌ನಿಂದ ಕೆಳ ಭಾಗದಲ್ಲಿ ಬಿದ್ದಿದ್ದರಿಂದ, ಆ ಸ್ಥಳ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಅಂತೇಳಿ ರೈಲ್ವೆ ಪೊಲೀಸರು ಜಾಗ ಖಾಲಿ ಮಾಡಿದ್ದಾರೆ.

ಅದು ಸೂರ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಬಂದು ಆನೇಕಲ್ ಉಪ ವಿಭಾಗದ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್, ಇನ್‌ಸ್ಪೆಕ್ಟರ್ ಮಹಾಜನ್ ಮತ್ತು ಸಿಬ್ಬಂದಿ ಘಟನಾ ಸ್ಥಳಕ್ಕೆ ಆಗಮಿಸಿ ತನಿಖೆ ಶುರುವಾಗಿತ್ತು. ಮೊದಲಿಗೆ, ಯಾರೋ ಎಲ್ಲಿಯೋ ಕೊಲೆ ಮಾಡಿ, ಹೆಣವನ್ನು ಸೂಟ್ ಕೇಸ್‌ಗೆ ತುಂಬಿಸಿಕೊಂಡು ರೈಲ್‌ನಲ್ಲಿ ಪ್ರಯಾಣಿಸುತ್ತ ಇಲ್ಲಿ ಎಸೆದು ಹೋಗಿರಬಹುದು ಎಂತಲೇ ಗೆಸ್ ಮಾಡಲಾಯಿತು!

ಆದರೆ, ಸ್ಥಳೀಯ ಅಂಗಡಿ ಮುಂಗಟ್ಟುಗಳ ಸಿಸಿ ಕ್ಯಾಮೆರಾ ಫುಟೇಜ್‌ಗಳನ್ನು ಸಂಗ್ರಹಿಸಿ ವೀಕ್ಷಣೆ ಮಾಡಿದಾಗ... ಇದು ಇಲ್ಲಿನವರೇ ಮಾಡಿರುವ ಕುಕೃತ್ಯ ಎಂಬುದು ಸ್ಪಷ್ಟವಾಗಿತ್ತು. ಐದಾರು ಜನ ವೆಹಿಕಲ್‌ನಲ್ಲಿ ಬಂದು ಸೂಟ್‌ಕೇಸ್ ಎಸೆದು ಹೋಗುವ ದೃಶ್ಯವನ್ನು ಸೂಕ್ಷ್ಮವಾಗಿ ಗಮನಿಸಿದ ಇನ್‌ಸ್ಪೆಕ್ಟರ್ ಮಹಾಜನ್ ಮತ್ತು ಸಿಬ್ಬಂದಿಗೆ ಅಲ್ಲಿ ಕಂಡ ಮುಖಗಳು ಬೇರೆ ರೀತಿಯ ಕತೆ ಹೇಳುತ್ತಿದ್ದವು. ಅವರ್‍ಯಾರು ಕನ್ನಡಿಗರಂತೆ ಕಾಣಿಸುತ್ತಲೇ ಇರಲಿಲ್ಲ. ಬೆಂಗಳೂರಿನ ಕತೆ ಗೊತ್ತಲ್ಲ, ಇಲ್ಲಿ ಕನ್ನಡಿಗರಿಗಿಂತ ಹೆಚ್ಚಾಗಿ ಪರ ಭಾಷಿಕರೇ ತುಂಬಿ ತುಳುಕುತ್ತಾರೆ. ಸಿಸಿ ಫುಟೇಜ್‌ನಲ್ಲಿ ಕಂಡ ಮುಖಗಳು ಬಿಹಾರಿಗಳ ಹೋಲಿಕೆ ಆಗುತ್ತಿದ್ದವು. ಸೂರ್ಯನಗರದ ಚಾಣಾಕ್ಷ ಕ್ರೈಂ ಸಿಬ್ಬಂದಿ ಸ್ಥಳೀಯವಾಗಿ ಸುತ್ತಾಡಿ, ಚಂದಾಪುರ ಸಮೀಪದಲ್ಲಿರುವ ಕಾಚನಾಯಕನಹಳ್ಳಿ ಗ್ರಾಮದ ಒಂದು ಮನೆಯನ್ನು ಅಟಕಾಯಿಸಿಕೊಂಡರು. ಆ ಮನೆಯಲ್ಲಿ ಬಿಹಾರಿ ಸಂಸಾರ ವಾಸವಾಗಿತ್ತು.

### ಆಶಿಕ್ ಕುಮಾರ್ ಎಂಬ 420

ಚಂದಾಪುರದ ಅಚೀಚೆಗೆ ಅತ್ತಿಬೆಲೆ ಕೈಗಾರಿಕಾ ಪ್ರದೇಶ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ಹಾಗೂ ಜಿಗಣಿ ಇಂಡಸ್ಟ್ರಿಯಲ್ ಏರಿಯಾಗಳಿದ್ದು, ಈ ಭಾಗದಲ್ಲಿ ಬಿಹಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಕಾಚನಾಯಕನಹಳ್ಳಿಯ ಈ ಮನೆಯಲ್ಲಿ ಮುಖೇಶ್



ಎಸ್ಪಿ ಸಿ.ಕೆ. ಬಾಬಾ



ಅಡಿಷನಲ್ ಎಸ್ಪಿ ನಾಗೇಶ್‌ಕುಮಾರ್



ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್

ರಾಜವಂಶಿ - ಇಂದು ಮತಿ ದಂಪತಿ ಅಲ್ಲಿ ವಾಸವಾಗಿದ್ದರು.

ಚಂದಾಪುರ ರೈಲ್ವೆ ಬ್ರಿಡ್ಜ್ ಬಳಿ ಹೆಣದ ಸೂಟ್ ಕೇಸ್ ಬಿಸಾಕಿದ್ದ ಮುಖಗಳು ಈ ಮನೆಯಿಂದ ಓಡಾಡಿದ್ದ ಸಾಕ್ಷ್ಯ ನಮ್ಮ ಖಾಕಿದಾರಿಗಳ ಬಳಿ ಇತ್ತು! ಮುಖೇಶ್ ನನ್ನು ಅಟಕಾಯಿಸಿಕೊಂಡು ನಾಲ್ಕು ಗುಮ್ಮಿದಾಗ.... ಆತ ಆಶಿಕ್ ಕುಮಾರ್ ಎಂಬ ಹೆಸರು ಬಾಯಿ ಬಿಟ್ಟಿದ್ದ!


ಆತ ಅಂದ್ರೆ, ಆಶಿಕ್ ಬಿಹಾರದ ನವಾದನಗರದ ನಿವಾಸಿ. ಅವನೇ ಈ ತರುಣಿಯ ಹಂತಕ! ಇವನೆಂಥಾ 420 ಎಂದರೆ, ತನಗೆ ಮದುವೆಯಾಗಿ ಮಕ್ಕಳಿದ್ದರೂ, ತಾನಿನ್ನೂ ಸಿಂಗಲ್ ಎಂದು ಸುಳ್ಳು ನವಾದನಗರದ ಸಮೀಪದ ಹಳ್ಳಿಯೊಂದರಲ್ಲಿ 18ರ ಹರೆಯದ ಅಮಾಯಕಿಯೊಬ್ಬಳನ್ನು ಬುಟ್ಟಿಗೆ ಹಾಕಿಕೊಂಡು 'ಲವ್' ಡ್ರಾಮಾ ಆಡುತ್ತಿದ್ದ! ಆ ಹುಡುಗಿ ದಟ್ಟದರಿದ್ರ ಮನೆಯಲ್ಲಿ ಹುಟ್ಟಿ ಪಡಬಾರದ ಪಾಡು ಪಡುತ್ತಿತ್ತು. ಅವಳ ಹೆಸರು ರೀನಾ. ಅವಳಪ್ಪನಿಗೆ ಇಬ್ಬರು ಹೆಂಡಿರು. ಇವಳು ಮೊದಲ ಪತ್ನಿಯ ಏಳನೇ ಹೆಣ್ಣುಮಗಳು! ಆ ಮನೆಯಲ್ಲಿ ಹುಟ್ಟಿದ ಮಕ್ಕಳೆಲ್ಲ ಬರೀ ಹೆಣ್ಣೇ ಅಂತೇ. ಕಡುಬಡತನದಲ್ಲಿ ಬೇಯುತ್ತಿದ್ದ ಬಾಲೆ ಬೆಂಗಳೂರಿನಿಂದ ಆಗಾಗ ಬಿಹಾರಕ್ಕೆ ಬರುತ್ತಿದ್ದ ಆಶಿಕ್ ಕುಮಾರ್‌ನನ್ನು ನೋಡಿ ಮೋಹಗೊಂಡಿದ್ದಳು.

ಇವನು ಧರಿಸುತ್ತಿದ್ದ ಬಟ್ಟೆಬರೆ ನೋಡಿಯೇ ಫಂಕ್ ಆಗಿ ಹಳ್ಳಕ್ಕೆ ಬಿದ್ದಿದ್ದಳು. 420 ಆಶಿಕ್ ಕುಮಾರ್ ಅವಳನ್ನು ಬೆಂಗಳೂರಿಗೆ ಹೋಗಿ ಮದುವೆಯಾಗಿ ಸುಖವಾಗಿರೋಣ ಎಂದು ನಂಬಿಸಿ ದಿನಾಂಕ 15 -06-2025 ಹಕ್ಕಿ ಹಾರಿಸಿಕೊಂಡು ಬಂದಿದ್ದ!



ಘಟನಾ ಸ್ಥಳದಲ್ಲಿ ಪಿಐ ಮಹಾಜನ್

☞ 14





ಎಂದು ಘಂಟಾ ಘೋಷವಾಗಿ ನುಡಿಯಬಹುದು.... ಸ್ವಲ್ಪ ಯೋಚಿಸಿನೋಡಿ

ಆರ್‌ಸಿಬಿ ಗೆಲ್ಲುವ ಆಶಾಭಾವನೆಯೊಂದಿಗೆ ಮಂಗಳ ವಾರ ಮಧ್ಯಾಹ್ನದಿಂದಲೇ ಬೆಂಗಳೂರು ಪೊಲೀಸರು ಅಲರ್ಟ್ ಆಗಿದ್ದರು. ಆಗಬಹುದಾದ ಅಹಿತಕರ ಘಟನೆಗಳನ್ನು ತಡೆಯಲು ಸಿದ್ಧತೆ ಮಾಡಿಕೊಂಡಿದ್ದರು. ಆರ್‌ಸಿಬಿ ತಂಡವು ಪ್ರಶಸ್ತಿ ಗೆಲ್ಲುತ್ತಿದ್ದಂತೆಯೇ, ಬೆಂಗಳೂರು ನಗರದ ಮೂಲೆ ಮೂಲೆಗಳಲ್ಲಿಯೂ ವಿಜಯೋತ್ಸವ ಶುರುವಾಯಿತು. ರಸ್ತೆ ರಸ್ತೆಗಳಲ್ಲಿ ಬೈಕ್ ಹಾಗೂ ಕಾರುಗಳ ಜಾಥಾ ಶುರುವಾಯಿತು. ಆ ಕ್ಷಣದಿಂದಲೇ ಪೊಲೀಸರಿಗೆ ಧರ್ಮ ಸಂಕಟ ಶುರುವಾಯಿತು. ಹುಚ್ಚಾಟ ವಾಡಿದರೂ ಯಾರಿಗೂ ಹೊದ್ರಯುವಂತಿಲ್ಲ, ಅಭಿಮಾನಿಗಳಿಗೆ

# RCB ವಿಜಯೋತ್ಸವಕ್ಕೆ 11 ಬಲಿ! ತಪ್ಪು ಸರ್ಕಾರದ್ದೋ ಪೊಲೀಸರದ್ದೋ?

**ಅದೆಷ್ಟೋ ಎಷ್ಟೋ ರಾಜಕಾರಣಿಗಳು ರಾತ್ರಿಯಿಡಿ ಸುಖದ ನಿದ್ರೆ ಮಾಡಿಯೂ ವೇದಿಕೆಯ ಮೇಲೆ ಗೊರಕೆ ಹೊಡೆಯುತ್ತಾರೆ! ಆದರೆ ರಾತ್ರಿಯಿಡಿ ಕೆಲಸ ಮಾಡಿದ ಪೊಲೀಸರು ಮರುದಿನ ಮತ್ತದೇ ರಸ್ತೆಯಲ್ಲಿ ನಿಂತು ಕೆಲಸ ಮಾಡಬೇಕೆಂದು ಅಪೇಕ್ಷಿಸುತ್ತಾರೆ! ಅವರು ಕೂಡ ಮನುಷ್ಯರು ಎನ್ನುವ ಸಾಮಾನ್ಯ ವಿಚಾರವನ್ನು ಅರಿಯದವರೆಲ್ಲ ಆಡಳಿತ ಚುಕ್ಕಾಣಿ ಹಿಡಿದರೆ ಹೇಗೆ? ಪೊಲೀಸರನ್ನು ನಾವೆಲ್ಲ ಅದೆಷ್ಟೋ ಬಾರಿ ಟೀಕಿಸಿರಬಹುದು. ಆದರೆ ಸರ್ಕಾರ ಇವತ್ತು ಮಾಡಿರುವ ಕೆಲಸ ಮಾತ್ರ ಅತ್ಯಂತ ಅಮಾನವೀಯ! ಪೊಲೀಸರ ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸವಿದು. ಚಿನ್ನಸ್ವಾಮಿ ಸ್ಟೇಡಿಯಂ ಸುತ್ತಮುತ್ತ ಅದೆಷ್ಟೋ ಪೊಲೀಸರು ಜನರನ್ನು ರಕ್ಷಿಸಲು ಮಾಡುತ್ತಿದ್ದ ಹರಸಾಹಸವನ್ನು ನೋಡಿದಾಗ ನಿಂತಲ್ಲಿಯೇ ನಾನು ಕುಸಿದುಹೋಗಿದ್ದೆ. ಕೆಲವು ಪೊಲೀಸರು ತಮ್ಮ ಕೈನಲ್ಲಿ ಅಮಾಯಕರನ್ನು ತಬ್ಬಿಕೊಂಡು ಕಣ್ಣೀರು ಹಾಕುತ್ತಿದ್ದರು! ನೆನಪಿಡಿ, ನಾಳೆ ಹೈಕೋರ್ಟ್‌ನಲ್ಲಿ ಬರುವ ಪಿಐಎಲ್ ವಿಚಾರಣೆಯಲ್ಲಿ ಆಗಬಹುದಾದ ಮುಖಭಂಗ ತಪ್ಪಿಸಿಕೊಳ್ಳಲು ಸಿಎಂ ಹಾಗೂ ಡಿಸಿಎಂ ಮಾಡಿರುವ ನಾಟಕ ಪ್ರದರ್ಶನವಿದು! ಇವರ ಪ್ರಚಾರಕ್ಕಾಗಿ ಹನ್ನೊಂದು ಮಂದಿ ಅಮಾಯಕರು ಜೀವ ಕಳೆದರು. ಹೈಕೋರ್ಟ್‌ನಲ್ಲಿ ತಮ್ಮ ಮುಖ ಉಳಿಸಿಕೊಳ್ಳಲು ದಕ್ಷ ಹಾಗೂ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಬಲಿ ಹಾಕಿದ್ದಾರೆ! ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯು ಇದಕ್ಕಿಂತ ಹೊಲಸನ್ನು ನೋಡಲು ಸಾಧ್ಯವಿಲ್ಲ. ಆದಾಗ್ಯೂ ಈ ಸರ್ಕಾರ ನೀಡಿದ ನಾಲ್ಕು ಗಂಟೆ ಅವಧಿಯಲ್ಲಿ ಪೊಲೀಸರು ಮಾಡಿದ ಕೆಲಸನ್ನು ನಾವು ಖಂಡಿತ ಶ್ಲಾಘಿಸಬೇಕು!**



ಮೃತಪಟ್ಟವರು ಶ್ರವಣ್, ಶಿವಲಿಂಗ, ಸಹನಾ, ಪ್ರಜ್ವಲ್, ಪೂರ್ಣಚಂದ್ರ, ಚಿನ್ಮಯ ಶೆಟ್ಟಿ, ದಿವ್ಯಾಂಶಿ, ಅಕ್ಷತಾ, ಭೂಮಿಕ್, ಮನೋಜ್‌ಕುಮಾರ್

**ಈ** ದೇಶದಲ್ಲಿ ಪ್ರತಿಯೊಬ್ಬ ಜನಸಾಮಾನ್ಯರು ಪೊಲೀಸರೆಂದರೆ ಹೆದರುತ್ತಾರೆ. ಹಾಗೆಯೇ ಅದೇ ಪೊಲೀಸ ರನ್ನು ತೆರೆಯ ಹಿಂದೆ ಬಾಯಿಗೆ ಬಂದಂತೆ ಬೈಯುತ್ತಾರೆ. ಪೊಲೀಸರಿಗೆ ಸಿಗುವಷ್ಟು ಬೈಗುಳಗಳು ಇನ್ಯಾವುದೇ ವ್ಯವಸ್ಥೆಗೆ ಸಿಗದು. ವೈಯಕ್ತಿಕವಾಗಿ ನಾನು ಕೂಡ ಅದೆಷ್ಟೋ



ಬಾರಿ ಪೊಲೀಸರ ಅರಾಜಕತೆ ಬಗ್ಗೆ ಬರೆದಿದ್ದೇನೆ. ಆದರೆ ಈ ರಾಜ್ಯದ ಇಬ್ಬರು ಪ್ರಚಂಡ ಪ್ರಚಾರ ಪ್ರಿಯ ರಾಜಕಾರಣಿಗಳ ಹುಚ್ಚಾಟದಲ್ಲಿ ಓರ್ವ ದಕ್ಷ ಪೊಲೀಸ ಆಯುಕ್ತರನ್ನು ಅಮಾನತು ಮಾಡಿರುವುದು ಮಾತ್ರ ಆಕ್ಷೇಪಾರ್ಹ ಹಾಗೂ ದೊಡ್ಡ ದುರಂತ!

'ಪೊಲೀಸ್ ನ್ಯೂಸ್' ವಾರಪತ್ರಿಕೆಯ ಪ್ರತಿನಿಧಿ ಯಾಗಿ ಕಳೆದ 30 ವರ್ಷದಿಂದ ವರದಿಗಾರಿಕೆ ಮಾಡುತ್ತ, ಪೊಲೀಸ್ ವ್ಯವಸ್ಥೆಯನ್ನು ಹತ್ತಿರದಿಂದ ನೋಡಿದವರು ನಾವು. ಇವತ್ತಿನವರೆಗೆ ಮಾನ್ಯ ದಯಾನಂದ್ ಐಪಿಎಸ್ ಅವರ ಬಗ್ಗೆ ಒಂದೇ ಒಂದು ನೆಗೆಟಿವ್ ಮಾತುಗಳನ್ನು ಕೇಳಿಸಿಕೊಂಡಿಲ್ಲ.

ಅತ್ಯಂತ ಪ್ರಾಮಾಣಿಕ ಹಾಗೂ ನಿಷ್ಠುರ ಪತ್ರಕರ್ತರು ಕೂಡ ದಯಾನಂದ್ ಅವರ ಕಾರ್ಯವೈಖರಿಯನ್ನು ಹೊಗಳುತ್ತಾರೆ. ಆದರೆ ಕನ್ನಡಿಗ, ದಕ್ಷ ಹಾಗೂ ಓರ್ವ ನಿಷ್ಠುರ ಪೊಲೀಸ್ ಆಯುಕ್ತರ ವೃತ್ತಿಯ ಮೇಲೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಪ್ಪುಚುಕ್ಕೆ ತಂದಿಟ್ಟರು! ಕ್ಲಬ್ ವೊಂದರ ಗೆಲುವನ್ನು ಕನ್ನಡದ ಗೆಲುವೆಂದು ಪ್ರಚಾರ ಪಡೆಯಲು ಹೋದ ಈ ರಾಜಕಾರಣಿಗಳಿಂದ ಓರ್ವ ಪ್ರಾಮಾಣಿಕ ಅಧಿಕಾರಿ ಅಮಾನತು ಶಿಕ್ಷೆಗೆ ಒಳಪಟ್ಟಿದ್ದು ಎಂಥ ವಿಪರ್ಯಾಸ...

ವಿಚಿತ್ರವೆಂದರೆ ಹಠಕ್ಕೆ ಬಿದ್ದು ವಿಧಾನಸೌಧದಲ್ಲಿ ಕಾರ್ಯಕ್ರಮ ಮಾಡಿಸಿ ಕೊಯ್ಲಿ ಜೊತೆ ಸೆಲ್ಫಿ ಕ್ಲಿಕ್ಕಿಸಿ ಕೊಂಡವರು ದಯಾನಂದ್ ಹಾಗೂ ಇತರ ಪೊಲೀಸ್ ಅಧಿಕಾರಿಗಳ ಅಮಾನತು ಶಿಕ್ಷೆಯನ್ನು ಪ್ರಕಟಿಸಿದ್ದಾರೆ. ಜನಸಾಮಾನ್ಯರ ಹೆಣ ಬಿದ್ದಾಗ ಮೈದಾನದೊಳಕ್ಕೆ ಹೋಗಿ ಸೂತ್ರದಾರರು ಟ್ರೋಫಿಗೆ ಮುತ್ತಿಡುತ್ತಿದ್ದಾಗ,ಅಮಾಯಕರ ಹೆಣವನ್ನು ಕೈನಲ್ಲಿ ಎತ್ತಿಕೊಂಡು ಕಣ್ಣೀರು ಹಾಕುತ್ತಿದ್ದ ಪೊಲೀಸರನ್ನು ಮನೆಗೆ ಕಳುಹಿಸಲಾಗಿದೆ. ಆದರೆ ಈ ಅವ್ಯವಸ್ಥೆಯ ಸೂತ್ರದಾರ ಮಾತ್ರ ಮೊಸಳೆ ಕಣ್ಣೀರು ಹಾಕಿಕೊಂಡು ಹುಚ್ಚಾಟ ಆಡುತ್ತಿದ್ದಾರೆ. ದುರಾಡಳಿತ, ಅರಾಜಕತೆಗೂ ಒಂದು ಮಿತಿ ಇರಬೇಕು. ಆದರೆ ತಾವು ಆಡಿದ್ದೇ ಆಟವೆಂದುಕೊಂಡು ಸರಣಿ ತಪ್ಪುಗಳನ್ನು ಮಾಡುತ್ತಿದ್ದರೆ, ಇಂತಹ ದುರಹಂಕಾರಿ ಜೋಡೆತ್ತುಗಳನ್ನು ಎಷ್ಟು ಕಣ್ಣೀರು ಹಾಕಿದರೂ, ಅದೆಷ್ಟೇ ಬೆದರಿಕೆ ಹಾಕಿ ಗದರಿದರೂ ಕ್ಷಮಿಸುವ ಮಾತೇ ಇಲ್ಲ.

ಅಷ್ಟಕ್ಕೂ ದಯಾನಂದ್ ಹಾಗೂ ಅವರ ತಂಡ ಮಾಡಿದ ತಪ್ಪೇನು ಎನ್ನುವು ದನ್ನು ಈ ರಾಜ್ಯದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ವಿವರಿಸಲೇಬೇಕಿದೆ. ಇವರ ತವಡುಕುಟ್ಟುವ ಮಾತುಗಳನ್ನು ಕೇಳುವ ಮೊದಲು, ಒಂದಿಷ್ಟು ವಿಚಾರಗಳನ್ನು ನಾವು ಅರಿಯಲೇಬೇಕಿದೆ.

ನಗರ ಪೊಲೀಸರ ದಕ್ಷ ದಂಡಾಧಿಕಾರಿಯನ್ನು ಶಿಕ್ಷಿಸಿ, ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸ ಮಾಡುವ ಈ ಬೇಜವಾಬ್ದಾರಿ ಸರ್ಕಾ ರದ ಮುಖವಾಡ ಕಳಚಲೇಬೇಕು. ಇವರ ವಿರುದ್ಧ ಇನ್ನೂ ಧ್ವನಿ ಎತ್ತದಿದ್ದರೆ, ಇಡೀ ರಾಜ್ಯವನ್ನು ಬೀದಿಗೆ ತಂದು ಹಾಕುತ್ತಾರೆ. ತಹ ಬೇಜವಾಬ್ದಾರಿ, ಸರ್ವಾಧಿಕಾರ ಹಾಗೂ ಅರಾಜಕತೆಯ ಆದೇಶವನ್ನು ವಿರೋಧಿಸಲು ಇರುವ ಸಕಾರಣಗಳನ್ನು ನಾವು ಅರಿಯಲೇಬೇಕು. ಹಾಗೆಯೇ ಪೊಲೀಸರ ಪರವಾಗಿ ನಿಲ್ಲಲೇಬೇಕು. ಪೊಲೀಸರ ಇತರ ವರ್ತನೆಗಳ ಬಗ್ಗೆ ಅದೆಷ್ಟೇ ದೂರು, ದುಮ್ಮಾನು ಇರ ಬಹುದು. ಈ ವಿಚಾರದಲ್ಲಿ ನಾವೆಲ್ಲರೂ ಪೊಲೀಸರ ಜತೆಗಿರಬೇಕು. ಸರ್ಕಾರದ ನಿರ್ಧಾರದ ವಿರುದ್ಧ ಕೂಗೆಬ್ಬಿಸ ಬೇಕು. ಘಟನೆಯಲ್ಲಿ ಪೊಲೀಸ್ ತಪ್ಪು ಇಲ್ಲವೇ ಇಲ್ಲಾ







ಹೊಡೆದರೆ, ಅದುವೇ ದೊಡ್ಡ ವಿಷಯವಾಗುವ ಸಾಧ್ಯತೆಯಿತ್ತು!

ಅಭಿಮಾನಿಗಳ ಮೇಲೆ ಸಾಫ್ಟ್ ಕಾರ್ನರ್ ಇರಲಿ ಎನ್ನುವ ಸಂದೇಶವು ಪೊಲಿಟಿಕಲ್ ಬಾಸ್‌ಗಳಿಂದ ಆಗಲೇ ಬಂದಾಗಿತ್ತು. ಅದಕ್ಕೆ ಪೂರಕವಾಗಿ ಅಂತಹ ಯಾವುದೇ ದೊಡ್ಡ ಅಹಿತಕರ ಘಟನೆಯಾಗದಂತೆ ಬುಧವಾರ ಬೆಳಗಿನ ಜಾವದವರೆಗೂ ಕಣ್ಣಿಗೆ ಎಣ್ಣೆ ಹಾಕಿಕೊಂಡು ನಮ್ಮ ಪೊಲೀಸರು ಕೆಲಸ ಮಾಡಿದ್ದರು. ಬೆಂಗಳೂರು ನಗರದ ಬಹುತೇಕ ಪೊಲೀಸರು ಅಂದು ನಿದ್ರೆಯನ್ನೇ ಮಾಡಿರಲಿಲ್ಲ.

ಈ ಸಂದರ್ಭದಲ್ಲಿ ಏಕಾಏಕಿ ಆರ್‌ಸಿಬಿಯಿಂದ ವಿಜಯೋತ್ಸವದ ಘೋಷಣೆಯಾಯಿತು. ಇದರ ಬೆನ್ನಲ್ಲೇ ರಾಜ್ಯ ಸರ್ಕಾರ ಕೂಡ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿತು. ಈಗ ವಿಜಯೋತ್ಸವ ಘೋಷಿಸಿದ ಆರ್ ಸಿಬಿ ಹಾಗೂ ಕೆಎಸ್ಸಿಎಯ ಕೆಲ ಸಿಬ್ಬಂದಿಯನ್ನು ಬಂಧಿ ಸುವಂತೆ ಕಾನೂನು ತಿಳಿದಿರುವ ಮುಖ್ಯಮಂತ್ರಿ ಸೂಚಿಸಿ ದ್ದಾರೆ. ಒಬ್ಬ ವ್ಯಕ್ತಿಯನ್ನು ಬಂಧಿಸಲು ಸೂಚನೆ ನೀಡುವ ಅಧಿಕಾರ ಯಾವ ಮುಖ್ಯಮಂತ್ರಿಗೆ ಇರುತ್ತದೆ ಎನ್ನುವುದನ್ನು ಕಾನೂನು ಪಂಡಿತರಾದ ಸಿದ್ದರಾಮಯ್ಯರೇ ರಾಜ್ಯದ ಜನತೆಗೆ ವಿವರಿಸಬೇಕು! ಇದನ್ನೇ ತರ್ಕವಾಗಿ

☞ 5

# ಗೆದ್ದ ತಕ್ಷಣವೇ ಸಂಭ್ರಮಾಚರಣೆ ಬೇಕಿತ್ತೆ?!

ಪೊಲೀಸರ ಸಲಹೆಯನ್ನು ಧಿಕ್ಕರಿಸಿ ತಕ್ಷಣವೇ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಿದ್ದೇ ಈ ದುರಂತಕ್ಕೆ ಮುಖ್ಯ ಕಾರಣ ಎಂಬುದನ್ನು ಮಾಧ್ಯಮ ವರದಿಯೊಂದು ಬಹಿರಂಗಪಡಿಸಿದೆ! ಆರ್‌ಸಿಬಿ 'ಐಪಿಎಲ್' ಟ್ರೋಫಿ ಗೆಲುವಿನ ಸಂಭ್ರಮಾಚರಣೆ ಸಂದರ್ಭದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಹೊರಗೆ ಕಾಲ್ತುಳಿತ ಸಂಭವಿಸಿ 11 ಮಂದಿ ಮೃತಪಟ್ಟ ಬೆನ್ನಲ್ಲೇ ಹಠಾತ್ತಾಗಿ ಕಾರ್ಯಕ್ರಮ ಆಯೋಜಿಸಿದ್ದರ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ಇದೀಗ ಅಸಮಾಧಾನದ ಮಾತುಗಳನ್ನಾಡಿದ್ದಾರೆ. ತಕ್ಷಣವೇ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸುವ ಬದಲು ಒಂದು ವಾರದ ನಂತರ ಮಾಡುವಂತೆ ಸಲಹೆ ನೀಡಲಾಗಿತ್ತಂತೆ. ಆದರೆ ಈ ಸಲಹೆಯನ್ನು ಕಡೆಗಣಿಸಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿರುವುದಾಗಿ ಆಂಗ್ಲ ಮಾಧ್ಯಮವೊಂದು ಉಲ್ಲೇಖಿಸಿದೆ.

ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿ ಗೆಲುವಿಗೆ ಸಂಬಂಧಿಸಿ ಬುಧವಾರ ಯಾವುದೇ ಕಾರ್ಯಕ್ರಮಗಳನ್ನು ನಡೆಸದಂತೆ ಮಂಗಳವಾರ ರಾತ್ರಿಯಿಂದಲೇ ಸರ್ಕಾರ ಮತ್ತು ಫ್ರಾಂಚೈಸಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದೆವು. ಜನರ ಭಾವನೆ, ಉದ್ವೇಗ ತುಸು ತಣ್ಣಗಾದ ನಂತರ ಕಾರ್ಯಕ್ರಮ ಆಯೋಜಿಸುವುದು ಸೂಕ್ತ ಎಂಬ ಸಲಹೆ ನೀಡಿದ್ದೆವು. ಮುಂದಿನ ಭಾನುವಾರ ಕಾರ್ಯಕ್ರಮ ಆಯೋಜಿಸಲು ಶಿಫಾರಸು ಮಾಡಿದ್ದೆವು ಎಂದು ಬೆಳವಣಿಗೆಗಳ ಬಗ್ಗೆ ಮಾಹಿತಿಯುಳ್ಳ ಉನ್ನತ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ 'ಡೆಕ್ಕನ್ ಹೆರಾಲ್ಡ್' ವರದಿ ಮಾಡಿದೆ.

ಆರಂಭಿಕ ಯೋಜನೆಯ ಪ್ರಕಾರ, ಆಟಗಾರರನ್ನು ವಿಧಾನಸೌಧದಿಂದ ಬಾಳೇಕುಂದ್ರಿ ವೃತ್ತಕ್ಕೆ ಮೆರವಣಿಗೆ ಮೂಲಕ ಕರೆತರಲು ಉದ್ದೇಶಿಸಲಾಗಿತ್ತು. ನಂತರ ಕಬ್ಬನ್ ರಸ್ತೆ, ಎಂಜಿ ರಸ್ತೆ ಮತ್ತು ಅಂತಿಮವಾಗಿ ಕ್ವೀನ್ಸ್ ವೃತ್ತದ ಬಳಿಯ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಮೆರವಣಿಗೆ ಮೂಲಕ ಕರೆದೊಯ್ಯುವುದು ಎಂದು ಹೇಳಲಾಗಿತ್ತು. ಆದರೆ, ಯಾವುದೇ ಮೆರವಣಿಗೆಯನ್ನು ನಡೆಸಬೇಡಿ ಎಂದು ನಾವು ಮನವಿ ಮಾಡಿದ್ದೆವು. ಒಂದೇ ಸ್ಥಳದಲ್ಲಿ ಸಂಘಟಿತ ರೀತಿಯಲ್ಲಿ ಕಾರ್ಯಕ್ರಮ ನಡೆಸುವಂತೆ ಹೇಳಿದ್ದೆವು. ಆಟಗಾರರನ್ನು ಕ್ರೀಡಾಂಗಣಕ್ಕೆ ಕರೆತಂದು ಅಲ್ಲಿಯೇ ಕಾರ್ಯಕ್ರಮ ಮುಗಿಸುವಂತೆ ಸಲಹೆ ನೀಡಿದ್ದೆವು ಎಂದು ಪೊಲೀಸ್ ಅಧಿಕಾರಿ ಹೇಳಿರುವುದಾಗಿ ವರದಿ ಉಲ್ಲೇಖಿಸಿದೆ.

ಪೊಲೀಸ್ ಅಧಿಕಾರಿಗಳ ಸಲಹೆ ನಂತರವೂ ಸರ್ಕಾರ ಮತ್ತು ಆರ್‌ಸಿಬಿ ಆಡಳಿತ ಮಂಡಳಿ ಬುಧವಾರವೇ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲು ಮುಂದಾದವು ಎಂದು ವರದಿ ತಿಳಿಸಿದೆ. ಆಟಗಾರರು, ವಿಶೇಷವಾಗಿ ವಿದೇಶಿ ಆಟಗಾರರು ಇಂದು ಅಥವಾ ನಾಳೆ ಹೊರಡುತ್ತಾರೆ ಎಂಬುದು ಅವರ ವಾದವಾಗಿತ್ತು. ಸಾಮಾನ್ಯವಾಗಿ, ಸರ್ಕಾರವು ಇಂಥ ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಬಯಸುತ್ತದೆ. ಒಂದು ವೇಳೆ ಸಂಭ್ರಮಾಚರಣೆಗೆ ಸರ್ಕಾರ ನಿರಾಕರಿಸಿದ್ದರೆ, ಅದು ಮತ್ತೊಂದು ರೀತಿಯ ಅವ್ಯವಸ್ಥೆಗೆ ಕಾರಣವಾಗುತ್ತಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿರುವುದನ್ನು ವರದಿ ಉಲ್ಲೇಖಿಸಿದೆ.

ಮಂಗಳವಾರ ರಾತ್ರಿಯಿಂದಲೇ ಬೆಂಗಳೂರಿನಲ್ಲಿ ಪೊಲೀಸ್ ಬಂದೋಬಸ್ತ್ ಬಿಗಿಗೊಳಿಸಲಾಗಿತ್ತು. ಪ್ರಮುಖ ಪ್ರದೇಶಗಳಲ್ಲಿ ಬೆಳಗಿನ ಜಾವ 3.30 ರವರೆಗೆ ಮತ್ತು ಹೊರವಲಯದಲ್ಲಿ ಬೆಳಗಿನ ಜಾವ 4.30ರ ವರೆಗೆ ವಿಜಯೋತ್ಸವ ಆಚರಣೆಗಳು ನಡೆದಿದ್ದವು. ಬೆಳಗಿನ ಜಾವ 5.30 ರವರೆಗೆ, ಪೊಲೀಸ್ ಆಯುಕ್ತರಿಂದ ಹಿಡಿದು ಕಾನ್‌ಸ್ಟೇಬಲ್‌ಗಳವರೆಗೆ ನಮ್ಮ ಎಲ್ಲಾ ಸಿಬ್ಬಂದಿ ಬೀದಿಗಳಲ್ಲಿದ್ದರು ಮತ್ತು ಸಂಪೂರ್ಣವಾಗಿ ದಣಿದಿದ್ದರು. ಇದು ಸಂಪೂರ್ಣ ಹುಚ್ಚುತನ. ಈ ರೀತಿಯ ಉನ್ಮಾದವನ್ನು ನಾವು ಎಂದಿಗೂ ನೋಡಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಆರ್‌ಸಿಬಿ ವಿಜಯೋತ್ಸವಕ್ಕೆ ಸುಮಾರು 30,000 ದಿಂದ 40,000 ಜನರು ಆಗಮಿಸುವ ನಿರೀಕ್ಷೆ ನಗರ ಪೊಲೀಸರಿಗಿತ್ತು ಎಂದು ಮೂಲಗಳು ತಿಳಿಸಿವೆ. ಆದರೆ, ಅಂದಾಜು ಎರಡು ಲಕ್ಷಕ್ಕೂ ಹೆಚ್ಚು ಜನ ಬಂದಿದ್ದರು. ಸ್ಟೇಡಿಯಂ ಒಳಗೆ ನುಗ್ಗಲು ಯತ್ನಿಸಿದ್ದರು. ಇದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗಿ 11 ಜನ ಸಾವನ್ನಪ್ಪಿದರು ಮತ್ತು ಹಲವಾರು ಮಂದಿ ಗಾಯಗೊಂಡರು. ಕ್ರೀಡಾಂಗಣದ 35,000 ಆಸನ ಸಾಮರ್ಥ್ಯಕ್ಕೆ ಅನುಗುಣವಾಗಿ ಸುಮಾರು 3,000 ಪೊಲೀಸ್ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು. ಎರಡರಿಂದ ಮೂರು ಲಕ್ಷ ಜನ ಸೇರಿದಾಗ ಮೂರು ಸಾವಿರ ಪೊಲೀಸ್ ಸಿಬ್ಬಂದಿ ಹೇಗೆ ನಿಯಂತ್ರಿಸಲು ಸಾಧ್ಯ?! ಅದೇನು ರಜನಿಕಾಂತ್ 'ರೋಬೋ' ಪಿಕ್ಚರ್ರಾ??!

4 ☞

ಇರಿಸಿಕೊಂಡಿದ್ದರೆ, ವಿಧಾನಸೌಧದಲ್ಲಿ ಕಾರ್ಯಕ್ರಮ ಆಯೋಜಿಸಿದ ಸಿದ್ದರಾಮಯ್ಯ ಹಾಗೂ ಡಿಕೆಶಿ ತಂಡದ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧನ ಮಾಡಬೇಕಾಗುತ್ತದೆಯಲ್ಲವೇ?

ಇದರೊಂದಿಗೆ ಈ ವಿಚಾರದಲ್ಲಿಯೇ ಇಡೀ ಪ್ರಕರಣದ ಸತ್ಯ ಆವರಿಸಿಕೊಂಡಿದೆ! ಸರ್ಕಾರದಲ್ಲಿ ಕುಳಿತಿರುವ ಮೂಲಗಳು ಒಂದು ಸುದ್ದಿ ಹರಡಿಸುತ್ತಿವೆ. ಆ ಪ್ರಕಾರ ಆರ್‌ಸಿಬಿ ಒತ್ತಾಯಕ್ಕೆ ಮಣಿದು ವಿಜಯೋತ್ಸವ ಆಚರಿಸಲಾಯಿತು. ಇದನ್ನು ಒಂದು ಕ್ಷಣಕ್ಕೆ ಒಪ್ಪಿಕೊಳ್ಳೋಣ ಹಾಗೂ ಈ ಆರ್‌ಸಿಬಿ, ಕೆಎಸ್ಸಿಎಗೆ ಕಾನೂನು ಗೌರವಿಸುವ ಸಾಮಾನ್ಯ ಜ್ಞಾನವಿಲ್ಲ ಎನ್ನುವುದನ್ನು ನಂಬೋಣ. ಆದರೆ ಈ ನೆಲದ ಕಾನೂನನ್ನು ಪಾಲಿಸುತ್ತೇವೆ ಎಂದು ಇದೇ ವಿಧಾನಸೌಧದ ಮುಂದೆ ಪ್ರಮಾಣ ಮಾಡಿದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗೆ ಏನಾಗಿತ್ತು? ವಿಧಾನಸೌಧದ ಮುಂದೆ ಕಾರ್ಯಕ್ರಮ ಘೋಷಿಸಿದ್ದು ಪೊಲೀಸ್ ಆಯುಕ್ತರೋ ಅಥವಾ ಆರ್‌ಸಿಬಿ ಮಾಲೀಕರೋ?

ಆರ್‌ಸಿಬಿ ಹಾಗೂ ಪೊಲೀಸ್ ಆಯುಕ್ತರು ತಪ್ಪು ಮಾಡಿದ್ದಾರೆ ಎಂದಾದರೆ, ಶಕ್ತಿ ಸೌದದ ಮುಂದೆ ಓಪನ್ನಾಗಿ ವಿಜಯೋತ್ಸವ ಆಚರಿಸಿದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಪಾತ್ರವೇನು? ಅಲ್ಲಿ ಒಬ್ಬರನ್ನು ಬಂಧಿಸಲು ಸೂಚಿಸಲಾಗಿದೆ, ಇನ್ನೊಬ್ಬರನ್ನು ಅಮಾನತು ಮಾಡಲಾಗಿದೆ. ಆದರೆ ಈ ಸಿಎಂ, ಡಿಸಿಎಂ ಮಾತ್ರ ಬೆಚ್ಚಗೇ ಹೆಣದ ರಾಶಿಯ ಮೇಲೆ ದುರಾಡಳಿತ ಮಾಡುತ್ತಿದ್ದಾರೆ!

ಈಗ ಇನ್ನೊಂದು ಆಡಳಿತಾತ್ಮಕ ವಿಚಾರಕ್ಕೆ ಬರೋಣ. ಒಂದು ನಗರದ ಪೊಲೀಸ್ ಆಯುಕ್ತರ

☞ 6

# ಕುಟುಂಬಗಳನ್ನು ಕಣ್ಣೀರಲ್ಲಿ ಮುಳುಗಿಸಿ ಹೋದವರು!

★ ಕೆಲವೇ ದಿನಗಳಲ್ಲಿ ವೈವಾಹಿಕ ಜೀವನಕ್ಕೆ ಕಾಲಿಡಬೇಕಿದ್ದ, ಸೂರಿನ ಖಾಸಗಿ ಕಂಪನಿಯ ಸಿವಿಲ್ ಇಂಜಿನಿಯರ್ ಪೂರ್ಣಚಂದ್ರ (32) ಕ್ರಿಕೆಟ್ ಕರಡಿಗಳ ಕಾಲ್ತುಳಿತದಲ್ಲಿ ಕೊನೆಯುಸಿರೆಳೆದಿದ್ದಾನೆ! ಈತ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕಿನ ರಾಯ ಸಮುದ್ರದ ಶಿಕ್ಷಕರಾದ ಆರ್.ಬಿ. ಚಂದ್ರು - ಕಾಂತಾಮಣಿ ದಂಪತಿಯ ಪುತ್ರ. ಹಿಂದಿನ ದಿನವಷ್ಟೇ ಕನ್ಯೆ ನೋಡಿ ಮದುವೆ ಸಂಭ್ರಮ ಅನುಭವಿಸಿದ್ದ ಹುಡುಗ ಮಾರನೇ ದಿನವೇ ಇಹಲೋಕ ತ್ಯಜಿಸಿದ್ದಾನೆ!

★ ಯಲಹಂಕದ 9ನೇ ಕ್ಲಾಸ್ ಬಾಲಕಿ ದಿವ್ಯಾಂಶಿ (14) ಕೊಹ್ಲಿಯ ಹುಚ್ಚು ಅಭಿಮಾನಿಯಾಗಿದ್ದಳು. ಆತನನ್ನು ಹತ್ತಿರದಿಂದ ನೋಡುವಾಸೆಯಿಂದ ತಾಯಿ ಹಾಗೂ ಚಿಕ್ಕಮ್ಮರೊಡನೆ ಸ್ಟೇಡಿಯಂಗೆ ಬಂದುಬಿಟ್ಟಿದ್ದಳು. ಭವಿಷ್ಯದಲ್ಲಿ ಉತ್ತಮ ನೃತ್ಯಪಟುವಾಗಲು, ಪಶು ವೈದ್ಯೆಯಾಗಲು ಬಯಸಿದ್ದ ಬಾಲಕಿ ಕಾಲ್ತುಳಿತ ಕ್ಕೆ ಸಿಲುಕಿ ನಲುಗಿಹೋದಳು. ಮಗಳ ಸಾವು ಕಂಡು ತಾಯಿಯ ಆಕ್ರಂದನ ಮುಗಿಲು ಮುಟ್ಟಿತ್ತು. ಮರಣೋತ್ತರ ಪರೀಕ್ಷೆ ವೇಳೆ ಮಗಳ ದೇಹ ಕತ್ತರಿಸದಂತೆ ಪರಿಪರಿಯಾಗಿ ವೈದ್ಯರ ಬಳಿ ವಿನಂತಿಸುತ್ತಿದ್ದದ್ದು ನೋಡಿ ಕರುಳು ಕಿತ್ತು ಬರುವಂತಾಗಿತ್ತು.

★ ಚಿಂತಾಮಣಿ ತಾಲೂಕಿನ ಕುರುಟಹಳ್ಳಿ ಗ್ರಾಮದ ತಿಮ್ಮಪ್ಪ-ಲಕ್ಷ್ಮಿದೇವಮ್ಮ ದಂಪತಿಗಳ ಸುಪುತ್ರ .ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಕೆ.ಟಿ. ಶ್ರವಣ್ (22) ದುರಂತದಲ್ಲಿ ಸಾವನ್ನಪ್ಪಿದ್ದು, ಮಗನನ್ನು ವೈದ್ಯನಾಗಿ ನೋಡಬೇಕೆಂದು ಸಾಕಷ್ಟು ಕನಸುಗಳನ್ನಿಟ್ಟುಕೊಂಡಿದ್ದ ತಾಯಿಗೆ ಆತನ ಮೃತದೇಹ ಕಂಡು ಸಿಡಿಲು ಬಡಿದಂತಾಗಿ ಪ್ರಜ್ಞೆತಪ್ಪಿ ಬಿದ್ದಿದ್ದು, ವೈದ್ಯರು ಆಕೆಗೂ ಚಿಕಿತ್ಸೆ ನೀಡಿ ಮಗನ ಶವದೊಂದಿಗೆ ಬೀಳ್ಕೊಟ್ಟಿದ್ದಾರೆ!

★ ಉಡುಪಿ ಜಿಲ್ಲೆಯ ಹೆಬ್ರಿಯ ಮುದ್ದು ಹುಡುಗಿ ಚಿನ್ಮಯಿ ಶೆಟ್ಟಿ(18) ಕನಕಪುರ ಮುಖ್ಯರಸ್ತೆಯಲ್ಲಿರುವ ಜ್ಯೋತಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಯಕ್ಷಗಾನ ಪ್ರಿಯೆಯಾದ ಈಕೆಗೆ ಕ್ರಿಕೆಟ್ ಹುಚ್ಚು ಹೇಗೆ ಹತ್ತಿಕೊಂಡಿತೋ ಗೊತ್ತಿಲ್ಲ! ಗಾಯಗೊಂಡ ಬಾಲೆ ಯನ್ನು ಮಿಲ್ಲರ್ಸ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ (ಹಳೆಯ ವಿಕ್ರಮ್ ಆಸ್ಪತ್ರೆ) ಸೇರಿಸಲಾಗಿತ್ತು. ನೋ ಯೂಸ್!

★ ಕಿರ್ಲೋಸ್ಕರ್ ಕಂಪನಿಯ ಉದ್ಯೋಗಿ ಪ್ರಜ್ವಲ್ (22) ಯಲಹಂಕದ ಚಿಕ್ಕ ಬೊಮ್ಮ ಸಂದ್ರ ಕ್ರಾಸ್‌ನಲ್ಲಿ ವಾಸವಾಗಿದ್ದ. ಈತ ಚಿಂತಾಮಣಿ ತಾಲೂಕಿನ ಗೋಪಲ್ಲಿ ಗ್ರಾಮದ ಗಣೇಶ್ ಎಂಬುವರ ಒಬ್ಬನೇ ಮಗ. ಹೋಗ್ಬಿಟ್ಟ. ಈಗ ಅವನ ಹೆತ್ತವರ ಗೋಳು ಕೇಳಲಾಗದು!

★ ಕುಣಿಗಲ್ ತಾಲೂಕಿನ ಯಡಿಯೂರು ಬಳಿಯ ನಾಗಸಂದ್ರದ ಮನೋಜ್ (19) ಕೆಂಪಾಪುರ ಅಗ್ರಹಾರದ ಖಾಸಗಿ ಕಾಲೇಜ್‌ನಲ್ಲಿ ಬಿಬಿಎಂ ವ್ಯಾಸಂಗ ಮಾಡುತ್ತಿದ್ದ. ಇವನೂ ಕೂಡ ಹೆತ್ತವರಿಗೆ ಒಬ್ಬನೇ ಮಗನಾಗಿದ್ದ. ಕ್ರಿಕೆಟ್ ಹುಚ್ಚಿನಿಂದ ಹೆತ್ತವರ ಕಣ್ಣಿಗೆ ಮಣ್ಣು ಎರಚಿ ಹೋಗ್ಬಿಟ್ಟ!



★ ಕೆಜಿಎಫ್ ತಾಲೂಕಿನ ಬೇತಮಂಗಲ ಬಳಿಯ ಬಡಮಾಕನ ಹಳ್ಳಿ ಯುವತಿ ಸಹನಾ (24) ಆರ್‌ಸಿಬಿ ಆಟಗಾರರನ್ನು ನೋಡುವಾಸೆಯಿಂದ ಒಬ್ಬಳೇ ಬಂದು ಇನ್ನಿಲ್ಲವಾದಳು. ಈಕೆ ಕೋಲಾರದಲ್ಲಿ ಶಿಕ್ಷಕರಾಗಿರುವ ಸುರೇಶ್‌ಕುಮಾರ್ ಹಾಗೂ ಮಂಜುಳಾ ದಂಪತಿಗಳ ಒಬ್ಬಳೇ ಮಗಳು. ಇವರ ವಂಶದಲ್ಲಿ ಮೂರು ಮೂರು ತಲೆಮಾರಿನಿಂದಲೂ ಹೆಣ್ಣು ಸಂತಾನವೇ ಇರಲಿಲ್ಲವಂತೆ. ಇವಳೇ ಮೊದಲ ಹೆಣ್ಣು ಮಗಳಂತೆ.ಇವಳು ಹುಟ್ಟಿದಾಗ ವಂಶಸ್ಥರು ಇಡೀ ಊರಿಗೆ ಸಿಹಿ ಊಟ ಹಾಕಿಸಿ ಸಂಭ್ರಮಿಸಿದ್ದರಂತೆ!

★ ಯಾದಗಿರಿ ಜಿಲ್ಲೆಯ ಹೊನಗೇರ ಗ್ರಾಮದ ಶಿವಲಿಂಗ ಚಂದಪ್ಪ ಕುಂಬಾರ (17) ಯಲಹಂಕದ ಸರ್ಕಾರಿ ಕಾಲೇಜ್‌ನಲ್ಲಿ ಪಿಯುಸಿ ಓದುತ್ತಿದ್ದ. ಇವನ ಅಪ್ಪ ಅಮ್ಮ ಇಲ್ಲಿನ ಇಟ್ಟಿಗೆ ಫ್ಯಾಕ್ಟರಿಯೊಂದರಲ್ಲಿ ಕೂಲಿ ಮಾಡಿಕೊಂಡು ವಾಸವಾಗಿದ್ದರು. ಈಗ ಮಗನ ಹೆಣ ಎತ್ತಿಕೊಂಡು ಊರಿಗೆ ವಾಪಸ್ ಆಗಿದ್ದಾರೆ!



★ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಗೃಹಿಣಿ ಅಕ್ಷತಾ ಪೈ (27) ಸಿಎ ಪರೀಕ್ಷೆಯಲ್ಲಿ ಬಂಗಾರದ ಪದಕ ಪಡೆದುಕೊಂಡು ಕೀರ್ತಿ ಸಂಪಾದಿಸಿದ್ದವರು.ಬೆಂಗಳೂರು ಸಿಟಿಯ ಖಾಸಗಿ ಕಂಪನಿಯೊಂದರ ಸಿಇಓ ಆಗಿದ್ದ ಇವರು ಆರ್‌ಸಿಬಿ ಸಂಭ್ರಮದಲ್ಲಿ ಪಾಲ್ಗೊಳ್ಳಲು ಗಂಡ ಆಶಯ ಅಂಬಳ್ಳಿ ಯೊಂದಿಗೆ ಆಗಮಿಸಿದ್ದು, ಸ್ಟೇಡಿಯಂ ಗೇಟ್‌ವೊಂದರ ಬಳಿ ನೂಕು ನುಗ್ಗುಲಿನಲ್ಲಿ ಗಂಡನಿಂದ ಬೇರ್ಪಟ್ಟು, ಬೋರಿಂಗ್ ಆಸ್ಪತ್ರೆಯಲ್ಲಿ ಹೆಣವಾಗಿ ಸಿಕ್ಕಿದ್ದಾರೆ! ಪಾಪ, ಆಕೆಯ ಗಂಡನ ಸಂಕಟ...!!



★ ಹಾಸನ ಜಿಲ್ಲೆ, ಬೇಲೂರು ತಾಲೂಕಿನ ಕುಪ್ಪಗೋಡು ಗ್ರಾಮದ ಉದ್ಯಮಿ ಲಕ್ಷ್ಮಣ್ ಪುತ್ರ ಭೂಮಿಕ್ (20) ಬೆಂಗಳೂರು ಖಾಸಗಿ ಕಾಲೇಜ್‌ನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ. ಒಬ್ಬನೇ ಮಗ. ನೂರು ಕೋಟಿಗೂ ಹೆಚ್ಚಿನ ಆಸ್ತಿ ಒಡೆಯ! ಈಗ ಆ ಆಸ್ತಿಗೆ ವಾರಸುದಾರರೇ ಇಲ್ಲ!!

★ ತಮಿಳುನಾಡು ಮೂಲದ ಟೆಕ್ಕಿ ದೇವಿ (29) ಕೊಹ್ಲಿ ಅವರ ಕಟ್ಟರ್ ಫ್ಯಾನ್. ಅಂದು ಬುಧವಾರ ತನ್ನ ಕಂಪನಿಗೆ ಡ್ಯೂಟಿಗೆ ಅಂತ ಹೋದವಳು, ತನ್ನ ಬ್ಯಾಗ್ ಮತ್ತು ಲ್ಯಾಪ್‌ಟಾಪ್ ಅನ್ನು ಟೇಬಲ್ ಮೇಲಿಟ್ಟು, ಯಾರಿಗೂ ಹೇಳದೆ ಕೇಳದೆ ಮೆಟ್ರೋ ಹತ್ತಿ ಚಿನ್ನಸ್ವಾಮಿ ಸ್ಟೇಡಿಯಂ ಕಡೆ ಹೊರಟು ಬಂದಿದ್ದಳು. ಮೆಟ್ರೋದಲ್ಲಿ ಸಂಚರಿಸುವಾಗ, ನಾನು ಕೊಹ್ಲಿ ನೋಡಲು ಹೋಗ್ತಿದ್ದೇನೆ ಅಂತ ತನ್ನ ಗೆಳೆಯ ಗೆಳತಿಯರಿಗೆ ಮೆಸೇಜ್ ಹಾಕಿದ್ದಳಂತೆ. ಕಡೆಗೆ, ಇದೇ ಅವಳ ಕಟ್ಟ ಕಡೆಯ ಮೆಸೇಜ್ ಆಯಿತು! ಇತ್ತಿಂದ ನಮ್ಮ ಪೊಲೀಸರು ಮರಣ ವಾರ್ತೆ ಕಳುಹಿಸಿದ್ದು, ಅವರೆಲ್ಲ ಬಂದು ಹೆಣ ಎತ್ತಿಕೊಂಡು ಹೋದರು!

ಸ್ನೇಹಿತರೆ, ದುರಂತ ಸ್ಥಳದಲ್ಲಿ ಒಂದಷ್ಟು ಮಂದಿ ಹೃದಯವಂತರು ತಮ್ಮ ಪ್ರಾಣದ ಹಂಗು ತೊರೆದು ರಕ್ಷಣೆಗೆ ನಿಲ್ಲದೆ ಹೋಗಿದ್ದರೆ, ಬರೀ ಹನ್ನೊಂದು ಹೆಣವಲ್ಲ, ನೂರಾರು ಹೆಣ ಬಿದ್ದು ಹೋಗುತ್ತಿದ್ದವು! ಪೊಲೀಸರ ಜೊತೆ ಕುಸಿದು ಬಿದ್ದವರನ್ನು ಅವರೆಲ್ಲ ಹೆಗಲ ಮೇಲೆ ಹೊತ್ತುಕೊಂಡು ಓಡಿ ಆಸ್ಪತ್ರೆಗೆ ಸಾಗಿಸಿ ಪ್ರಾಣ ಉಳಿಸಿದ್ದಾರೆ. ಸ್ಥಳದಲ್ಲಿ ಯಾವುದೇ ಆಂಬ್ಯುಲೆನ್ಸ್ ಇಲ್ಲದಿದ್ದಾಗ, ಹೊಯ್ಸಳ ಗಸ್ತು ವಾಹನಗಳು ಉಸಿರುಗಟ್ಟಿ ಒದ್ದಾಡುತ್ತಿದ್ದವರನ್ನು ಹಾಗೂ ಕೈ ಕಾಲು ಮುರಿದುಕೊಂಡು ಕಿರುಚುತ್ತಿದ್ದ ಗಾಯಾಳುಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸುವ ಕೆಲಸ ಮಾಡಿದ್ದನ್ನು ಮರೆಯಲಾದಿತೇ...

5 ☜

ಆದೇಶವನ್ನು ಇಬ್ಬರು ಮಾತ್ರ ಧಿಕ್ಕರಿಸಲು ಅಥವಾ ಬದಲಾಯಿಸಲು ಸಾಧ್ಯವಿದೆ. ಸರ್ಕಾರದಲ್ಲಿ ಅವರ ಮೇಲೆ ಕುಳಿತಿರುವ ಅಧಿಕಾರ ವ್ಯವಸ್ಥೆ ಅಥವಾ ಅಲ್ಲೇ ಪಕ್ಕದಲ್ಲಿರುವ ಹೈಕೋರ್ಟ್ ಮಾತ್ರ ಇದನ್ನು ಧಿಕ್ಕರಿಸಿ ಮುಂದೆ ಹೋಗಬಹುದು. ಆದರೆ ಆರ್‌ಸಿಬಿ ಹಾಗೂ ಕೆಎಸ್ಸಿಎಗೆ ಅದನ್ನು ತಿರಸ್ಕರಿಸಿರುವ ಧೈರ್ಯ ಇರಲು ಸಾಧ್ಯವೇ ಇಲ್ಲ ಎನ್ನುವುದು ಪೊಲೀಸ್ ವ್ಯವಸ್ಥೆ ತಿಳಿದಿರುವ ಯಾವುದೇ ವ್ಯಕ್ತಿ ಹೇಳಬಹುದು. ಇಂತಹ ಅತಿರೇಕಗಳನ್ನು ವ್ಯವಸ್ಥೆಯಲ್ಲಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಮಾಡುವುದಿಲ್ಲ. ಆದರೆ ಪೊಲೀಸ್ ಆಯುಕ್ತರ ಸಲಹೆಯನ್ನು ಸೈಲೆಂಟ್ ಮಾಡಿಸಬಹುದಾದ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿಗಳಂತ ಬಲಶಾಲಿಗಳು ಹಿಮ್ಮೇಳದಲ್ಲಿ ಇದ್ದಾಗ ಮಾತ್ರ ಇಂತಹ ಅಧಿಕಪ್ರಸಂಗಗಳು ನಡೆಯಲು ಸಾಧ್ಯವಾಗುತ್ತದೆ. ಇದಕ್ಕೆ ಪೂರಕ ಸಾಕ್ಷಿಯೆಂದರೆ ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮವಾಗಿದೆ.

ಹೀಗಾಗಿ, ಈ ವಿಜಯೋತ್ಸವಕ್ಕೆ ದಯಾನಂದ್ ಅನುಮತಿ ನೀಡಿರಲು ಸಾಧ್ಯವೇ ಇಲ್ಲ. ವಿಧಾನಸೌಧದ ಮೂರನೇ ಮಹಡಿಯಿಂದ ಬಂದಿರುವ ಮೌಖಿಕ ಸೂಚನೆಯಿಂದಲೇ ಇಂತಹ ದೊಡ್ಡ ತೀರ್ಮಾನಗಳು ಆಗಲು ಸಾಧ್ಯವಾಗುತ್ತದೆ. ಇದಲ್ಲದೇ ಈ ತೀರ್ಮಾನಕ್ಕೂ ಮುನ್ನ ಮಾನ್ಯ ಗೃಹ ಸಚಿವರು ಹಾಗೂ ಆಯುಕ್ತರು ಭೇಟಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ದಯಾನಂದ್ ಅವರ ಇತಿಹಾಸ ಗೊತ್ತಿರುವರಿಗೆ ಈ ಸತ್ಯವೂ ತಿಳಿದಿರುತ್ತದೆ. ದಯಾನಂದ್ ಅವರನ್ನು ಪಕ್ಕಕ್ಕಿರಿಸಿ ನೋಡಿದಾಗಲೂ ಒಬ್ಬ ಟ್ರೇನಿ ಪೊಲೀಸ್ ಅಧಿಕಾರಿ ಕೂಡ ಇಂತಹ ಬ್ಲಂಡರ್‌ನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಏಕೆಂದರೆ ರಾತ್ರಿಯಿಡಿ ಪೊಲೀಸರು ಬಳಲಿದ್ದಾರೆ ಹಾಗೂ ಹುಚ್ಚು ಕ್ರೇಜ್‌ನಲ್ಲಿರುವ ಅಭಿಮಾನಿಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಸೇರುತ್ತಾರೆ ಎನ್ನುವುದು ಪೊಲೀಸರಿಗೆ ತಿಳಿದಿರುತ್ತದೆ. ಆದರೆ ಇಲ್ಲಿ ಪೊಲೀಸರಿಗೆ ಪ್ಲ್ಯಾನ್ ಮಾಡಲು, ಸಿದ್ಧತೆ ಮಾಡಿಕೊಳ್ಳಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅಥವಾ ಗೃಹ ಸಚಿವರು ಅವಕಾಶವನ್ನೇ



ನೀಡಿಲ್ಲ. ಮಧ್ಯಾಹ್ನ ಒಂದು ಗಂಟೆಗೆ ಮನೆಗೆ ಐವತ್ತು ಜನ ಅತಿಥಿಗಳನ್ನು ಆಹ್ವಾನಿಸಿ, ಊಟ ಸರಿಯಾಗಲಿಲ್ಲವೆಂದು ಮನೆಯ ಹೆಂಗಸರ ವಿರುದ್ಧ ಯಜಮಾನ ಕೂಗಾಡಿದಂತೆ ಈ ರಾಜ್ಯದ ಸಿಎಂ, ಡಿಸಿಎಂ ವರ್ತನೆಯಿದೆ.

ಈ ಹಂತದಲ್ಲಿ ಈ ಪ್ರಚಾರ ಪ್ರಿಯ ಸಿಎಂ-ಡಿಸಿಎಂ ಪಟಾಲಂನ ಇನ್ನೊಂದು ಹುಚ್ಚು ಪ್ರಮಾದವನ್ನು ನಾವು ಮರೆಯಕೂಡದು. ರಾಜ್ಯದ ನೆಲ, ಭಾಷೆಗೆ ಸಂಬಂಧವಿಲ್ಲದ ಒಂದು ಖಾಸಗಿ ಫ್ರಾಂಚೈಸಿಗೆ ಧನ್ಯವಾದ ಹೇಳಲು ಸರ್ಕಾರಿ ಕಾರ್ಯಕ್ರಮ ಆಯೋಜಿಸಿದ್ದರಿಂದ ಆದ ಸಮಸ್ಯೆಯನ್ನು ನಿರ್ಲಕ್ಷಿಸಬಾರದು.



ಪಕ್ಕದ ಜಿಲ್ಲೆಗಳಿಂದ ಪೊಲೀಸರನ್ನು ಕರೆಯಿಸಿಕೊಳ್ಳಲು ಅಥವಾ ಅರೆ ಸೇನಾ ಪಡೆಗಳನ್ನು ನಿಯೋಜಿಸಲು ಅವಕಾಶವನ್ನೇ ಕೊಡದೇ ಪ್ರಚಾರ ಪ್ರಿಯ ಪಟಾಲಂ ಸರ್ಕಾರಿ ಕಾರ್ಯಕ್ರಮ ಘೋಷಿಸಿತು! ಸನ್ಮಾನ ಕಾರ್ಯಕ್ರಮದಲ್ಲಿ ಭಾಗಿಯಾಗಿಯೆಂದು ಸಿಎಂ ಆದಿಯಾಗಿ ಎಲ್ಲರೂ ಆಹ್ವಾನ ನೀಡಿದರು. ಈ ಆಹ್ವಾನ ನೀಡಿದ ಸಮಯದಿಂದ ವೇದಿಕೆ ಕಾರ್ಯಕ್ರಮದ ನಡುವೆ ಸರಿಯಾಗಿ ಪಂಚೆ ಉಟ್ಟುಕೊಳ್ಳಲು ಕೂಡ ಸಿದ್ದರಾಮಯ್ಯರಿಗೆ ಸಮಯ ಸಾಕಾಯಿತೋ, ಇಲ್ಲವೋ ಗೊತ್ತಿಲ್ಲ. ಆದರೆ ಆ ಸಮಯದಲ್ಲಿಯೇ ಪೊಲೀಸರು ಎಲ್ಲವನ್ನೂ ನಿಯೋಜಿಸಬೇಕು ಎನ್ನುವುದು ಅತ್ಯಂತ ಹೇಸಿಗೆಯ ವಿಚಾರವಲ್ಲದೆ ಮತ್ತೇನು? ದು ಅಂಶವನ್ನು ಒತ್ತಿ ಹೇಳಬೇಕಿದೆ.



ಚಿನ್ನಸ್ವಾಮಿ ಮೈದಾನದಲ್ಲಿ ನಡೆಯಬೇಕಿದ್ದ ಕಾರ್ಯಕ್ರಮವು ವಿಧಾನಸೌಧಕ್ಕೆ ವಿಸ್ತಾರಗೊಂಡಾಗಲೇ ಅಪಾಯ ಮೈಮೇಲೆ ಬಂದಾಗಿತ್ತು! ಒಬ್ಬ ಪೊಲೀಸ್ ಆಯುಕ್ತರಾಗಿ ಮುಖ್ಯಮಂತ್ರಿ ಹಾಗೂ ಶಕ್ತಿಸೌಧಕ್ಕೆ ಭದ್ರತೆ ನೀಡುವುದು ಅನಿವಾರ್ಯವಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ ಅವರು ಮೊದಲು ಆಡಳಿತ ನಡೆಸುವರಿಗೆ ಉತ್ತರ ಕೊಡಬೇಕಾಗುತ್ತದೆ. ಮೊದಲೇ ಪೊಲೀಸರ ಕೊರತೆ ಅನುಭವಿಸುತ್ತಿದ್ದವರಿಗೆ ಒಂದೇ ಸಮಯದಲ್ಲಿ ಎರಡು ದೊಡ್ಡ ದೊಡ್ಡ ಕಾರ್ಯಕ್ರಮವನ್ನು ಕೇವಲ ನಾಲ್ಕು ಗಂಟೆಯಲ್ಲಿ ನಿಭಾಯಿಸಲು ಸಾಧ್ಯವೇ ಇಲ್ಲ. ದೇವರೇ ಕೆಳಗಿಳಿದು ಬಂದಿದ್ದರೂ ಆಗುತ್ತಿರಲಿಲ್ಲ. ಪ್ರಚಾರದ ತೆವಲಿಗೆ ಬಿದ್ದು ಈ ಕಾರ್ಯಕ್ರಮ ಆಯೋಜಿಸಿದವರನ್ನು ಸಂಪುಟದಿಂದ ಕಿತ್ತೆಸೆಯುವ ಬದಲಿಗೆ, ಬಡಪಾಯಿ ಕನ್ನಡಿಗ ಅಧಿಕಾರಿಯನ್ನು ಮನೆಗೆ ಕಳುಹಿಸಲಾಗಿದೆ.

ಒಂದೇ ಅವಧಿಯಲ್ಲಿ ಎರಡು ಕಡೆ ಕಾರ್ಯಕ್ರಮ ಆಯೋಜನೆ ಆಗಿರದಿದ್ದರೆ, ಪೊಲೀಸರ ನಿಗಾವು ಚಿನ್ನಸ್ವಾಮಿ ಮೈದಾನದ ಮೇಲೆಯೇ ಇರುತ್ತಿತ್ತು. ಆಗ ಪರಿಸ್ಥಿತಿಯನ್ನು ಪೊಲೀಸರು ನಿಭಾಯಿಸುವ ಸಾಧ್ಯತೆ ಹೆಚ್ಚಿರುತ್ತಿತ್ತು. ಆದರೆ

☞ 7

## ಜನ ಸತ್ತು ಹೊರಗೆ ಬಿದ್ದಿದ್ದರೂ 'ಡಿಸಿಎಂ' ಸ್ಟೇಡಿಯಂ ಒಳಗೆ ಹೋಗಿ 'ಕಪ್'ಗೆ 'ಕಿಸ್' ಕೊಟ್ಟಿದ್ದಾರೆ ಎಂದರೆ?!

ವಿಧಾನಸೌಧ ಮೆಟ್ಟಿಲು ಮೇಲೆ ಇವರು ಕಾರ್ಯಕ್ರಮ ಮಾಡಿದ ಉದ್ದೇಶ ಏನು? ಇಡೀ ಸರ್ಕಾರ ಅದನ್ನು ಕುಟುಂಬ ಕಾರ್ಯಕ್ರಮವನ್ನಾಗಿ ಮಾಡಿಕೊಂಡಿತ್ತು. ಅದು ಕೇವಲ ಡಿಸಿಎಂ ಶೋ ಆಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಹಲವರ ಜೀವ ಹೋಗಿದೆ ಎಂಬ ವಿಷಯ ಗೊತ್ತಾದ ಮೇಲೆಯೂ ಇವರು ಅಲ್ಲಿ ಕಾರ್ಯಕ್ರಮ ನಡೆಸಿದರು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವ್ಯಕ್ತಿ ತೆವಲಿಗೆ ಅನೇಕ ಅಮಾಯಕರ ಪ್ರಾಣಗಳು ಹೋದವು. ಈತ ಒಬ್ಬ ರೌಡಿಯಂತೆ ವರ್ತಿಸಿದ್ದಾರೆ. ತನ್ನ ಶೋಕಿಗೆ ಇಷ್ಟು ಜನರನ್ನು ಬಲಿ ಕೊಟ್ಟಿದ್ದಾರೆ. ಸರ್ಕಾರದ ಹೊಣೆಗೇಡಿತನ ಹಾಗೂ ಡಿಸಿಎಂ ವೈಯಕ್ತಿಕ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಇಷ್ಟು ಜೀವಗಳನ್ನು ಬಲಿ ಕೊಟ್ಟರು. ಇದಕ್ಕೆ ಸರ್ಕಾರವೇ ಹೊಣೆ. ವಿಧಾನಸೌಧದ ಕಾರ್ಯಕ್ರಮವನ್ನು ಖಾಸಗಿ ಕಾರ್ಯಕ್ರಮದಂತೆ ಮಾಡಿಕೊಂಡಿದ್ದಾರೆ.

ಈಗ ಕೇವಲ ತನಿಖೆಗೆ ಆದೇಶ ಕೊಟ್ಟು, ಮೃತರಿಗೆ ಪರಿಹಾರ ನೀಡಿ ತಪ್ಪಿಸಿಕೊಳ್ಳುವಂತಿಲ್ಲ... ಪೊಲೀಸರು ಎರಡು ಕಡೆ ಕಾರ್ಯಕ್ರಮ ಬೇಡ ಎಂದರೂ ಕೇಳದೆ ವಿಧಾನಸೌಧ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ವಿಧಾನಸೌಧ ಮುಂದೆ ಇವರ ಮಕ್ಕಳು, ಮೊಮ್ಮಕ್ಕಳು, ಬೇಕು ಬೇಕಾದ ಅಧಿಕಾರಿಗಳು, ವಂದಿ ಮಾಗದರೂ ಸೇರಿದ್ದರು. ಇವರು ಶೋ ಮಾಡಲಿಕ್ಕೆ ಇಡೀ ಆರ್‌ಸಿಬಿ ಗೆಲುವನ್ನು ಬಳಕೆ ಮಾಡಿಕೊಂಡರು. ಆಟಗಾರರನ್ನು ಪಕ್ಕಕ್ಕೆ ತಳ್ಳಿ ಇವರೇ ಮಿಂಚಿದ್ದಾರೆ. ಡಿಸಿಎಂ ತಮ್ಮ ವರ್ಚಸ್ಸು ವೃದ್ಧ ಮಾಡಿಕೊಳ್ಳಲು ಇವರು ಇಷ್ಟೆಲ್ಲಾ ಮಾಡಿದ್ದಾರೆ. ಬೇರೆ ಮಂತ್ರಿಗಳು ಇರಲಿಲ್ಲವೇ? ಕ್ರೀಡಾ ಮಂತ್ರಿ ಎಲ್ಲಿ ಹೋದರು? ಅವರಿಗೆ ಜವಾಬ್ದಾರಿ ಇರಲಿಲ್ಲವೇ? ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಗಿರುವ ಲೋಪಗಳ ಬಗ್ಗೆ ಸಂಪೂರ್ಣವಾಗಿ ತನಿಖೆ ಆಗಬೇಕಿದೆ.

ಅತ್ಯಂತ ಧಾರುಣವಾದ ಸಂಗತಿ ಎಂದರೆ, ಕ್ರೀಡಾಂಗಣದ ಹೊರಗೆ ಮೃತದೇಹಗಳು ಬಿದ್ದಿದ್ದರೂ ಇವರು ಒಳಗೆ ಹೋಗಿ ಮೆರವಣಿಗೆಯಲ್ಲಿ ಮೈದಾನಕ್ಕೆ ತೆರಳಿ ಇವರೇ ಕಪ್ ಗೆದ್ದಂತೆ, ಇವರೇ ಆರ್‌ಸಿಬಿ ಕ್ಯಾಪ್ಟನ್ ಎನ್ನುವಂತೆ ಆಟಗಾರರ ಮುಂದೆ ಕಪ್‌ಗೆ ಮುತ್ತಿಡುತ್ತಾರೆ! ಚೆನ್ನಾಗಿ ಕುಡಿದು ತಿಂದು ಮುಗಿದ ಮೇಲೆ, ಘಟನೆ ನಡೆದ ಹದಿನಾರು ಗಂಟೆಗಳ ನಂತರ ಇವರಿಗೆ ಕಣ್ಣೀರು ಬಂದಿದೆ! ಇವರು ಎಂತಹ ಕಟುಕರು ಎನ್ನುವುದು ಇದರಿಂದ ಅರ್ಥವಾಗುತ್ತದೆ.

ಗೃಹ ಸಚಿವರು ಎನ್ನುವವರು ರಾಜ್ಯದಲ್ಲಿ ಇಲ್ಲವೇ ಇಲ್ಲ. ಕೂರು ಎಂದರೆ ಕೂರು, ಏಳು ಎಂದರೆ ಏಳುತ್ತಾರೆ. ಕೇವಲ ಡ್ರಿಲ್ ಮಾಡುವ ಹೊಮ್ ಮಿನಿಸ್ಟರ್ ರಾಜ್ಯದಲ್ಲಿದ್ದಾರೆ. ಅವರಿಗೆ ಧೈರ್ಯ ಇಲ್ಲ. ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಘಟನೆಯಲ್ಲಿ ಪೊಲೀಸ್ ಇಲಾಖೆಯ ಸಲಹೆ ಧಿಕ್ಕರಿಸಿ ಸರ್ಕಾರ ನಡೆದುಕೊಂಡಿದೆ! ಈಗ ತನಿಖೆ ಡ್ರಾಮಾ ನಡೆಯುತ್ತಿದೆ. ಒಬ್ಬ ಜಿಲ್ಲಾಧಿಕಾರಿ ಏನು ತನಿಖೆ ಮಾಡಲು ಸಾಧ್ಯ? ಅದರಿಂದ ಏನು ಉಪಯೋಗ? ಸರ್ಕಾರ ಹೇಳಿದಂತೆ ಅವರು ಬರೆದುಕೊಡುತ್ತಾರೆ! ಇವರಿಗೆ ಪರ್ಮನೆಂಟ್ ಆಗಿ ಒಬ್ಬರು ಇದ್ದಾರಲ್ಲ, ಅವರ ನೇತೃತ್ವದಲ್ಲಿಯೇ ಒಂದು ಆಯೋಗ ಮಾಡಬೇಕಿತ್ತು. ಏಕೆ ಮಾಡಲಿಲ್ಲವೋ ಗೊತ್ತಿಲ್ಲ! ನಾಲ್ಕು ಜನ ಸತ್ತ ಮೇಲೆಯೂ ಡಿಸಿಎಂ ಎನ್ನುವ ಈ ವ್ಯಕ್ತಿ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗಿ ಕಪ್‌ಗೆ 'ಕಿಸ್' ಕೊಟ್ಟಿದ್ದಾರೆ. ಇಂಥ ವ್ಯಕ್ತಿಯನ್ನು ಮನುಷ್ಯ ಎನ್ನಲಾದೀತೇ? ಎಂದು ಬೇಸರ ಹೊರ ಹಾಕಿದ್ದಾರೆ. ☯

## ಮೊದಲು ಉಚಿತ... ಎಂದು ಘೋಷಿಸಿ ಆಮೇಲೆ ಟಿಕೆಟ್...?

**ಚಿ**ನ್ನಸ್ವಾಮಿಯಲ್ಲಿ ಅಷ್ಟೊಂದು ಜನ ಸೇರಲು ಮತ್ತು ನೂಕು ನುಗ್ಗಲು ಉಂಟಾಗಲು ಕಾರಣ.... ಉಚಿತ ಆಫರ್! ಯಸ್, ಸಾಮಾನ್ಯವಾಗಿ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಪಂದ್ಯಗಳನ್ನು ನೋಡಬೇಕಂದ್ರೆ ಅಷ್ಟು ಸುಲಭವಾಗಿ ಟಿಕೆಟ್ ಸಿಗಲ್ಲ. ಸಿಕ್ಕರೂ ಅದು ಬಲು ದುಬಾರಿಯಾಗಿರುತ್ತದೆ. ಇನ್ನು ಭಿಟ್ಟಿ ಸಿಕ್ರೆ ಬಿಡ್ತಾರಾ?! ಉಚಿತವಾಗಿ ಕೊಹ್ಲಿ ಮತ್ತು ಇತರೆ ಆರ್‌ಸಿಬಿ ಆಟಗಾರರನ್ನು ಕಣ್ತುಂಬಿಕೊಳ್ಳಲಿಕ್ಕೆ ಉಚಿತ ಅಂದಾಗ...??!! ಉಚಿತ ಎಂದ ಒಂದೇ ಉದ್ದೇಶಕ್ಕೆ ಅವತ್ತು ಜನ... ಸಾಗರದಂತೆ ಬಂದರು!

ಇನ್ನು, ಸ್ಟೇಡಿಯಂ ಒಳಗೆ ಆಸನಗಳ ಸಾಮರ್ಥ್ಯ 35 ಸಾವಿರವಿತ್ತು. 2-3 ಲಕ್ಷ ಜನಸಾಗರ ಹರಿದು ಬಂತಲ್ಲ! ವಿಜಯೋತ್ಸವ ಹಮ್ಮಿಕೊಂಡಿದ್ದ ಕೆಎಸ್‌ಸಿಎ ಮತ್ತು ಆರ್‌ಸಿಬಿ ಗೆ ಹೀಗೆ ಲಕ್ಷಗಟ್ಟಲೇ ಜನ ಬರುತ್ತಾರೆ ಎಂಬುದು ಗೊತ್ತೇ ಇರಲಿಲ್ಲ. ಹೀಗಾಗಿ, ಕೊನೇ ಕ್ಷಣದಲ್ಲಿ ಉಚಿತ ಪ್ರವೇಶ ಬದಲು ಟಿಕೆಟ್ ನೀಡಲು ನಿರ್ಧರಿಸಿದ್ದಾರೆ! ಈ ಉಚಿತ ಪ್ರವೇಶದ ವಿಷಯದಲ್ಲಿ ಕೆಎಸ್‌ಸಿಎ ಗೊಂದಲಕ್ಕೊಳಗಾಗುವುದಲ್ಲದೇ, ಆರ್‌ಸಿಬಿ ಅಭಿಮಾನಗಳನ್ನು ಸಹ ಗೊಂದಲಕ್ಕೊಳಗಾಗುವಂತೆ ಮಾಡಿತು. ಉಚಿತ ಪ್ರವೇಶ ಎಂದು ಭಾವಿಸಿ ಬಂದಿದ್ದ ಅಭಿಮಾನಿಗಳಿಗೆ ಟಿಕೆಟ್ ಕೊಟ್ಟು ಸ್ಟೇಡಿಯಂ ಒಳಗೆ ಪ್ರವೇಶಿಸಬೇಕು ಎಂಬ ಮಾಹಿತಿ ತಿಳಿಯುತ್ತಿದ್ದಂತೆ, ಮುಕುಳಿ ಉರಿದು ಹೋಗಿ ಆಕ್ರೋಶ ವ್ಯಕ್ತವಾಯಿತು! ಇದರಿಂದ, ಗೇಟ್ ಮುರಿದಾದರೂ ಒಳಗಡೆ ನುಗ್ಗುವ ಹಪಾಹಪಿ ಶುರುವಾಗಿ, ನೂಕುನುಗ್ಗಲು ಸಂಭವಿಸಿ ಕಾಲ್ತುಳಿತವಾಗಿ ಇಂಥ ಅಮಾನುಷ ದುರಂತ ಸಂಭವಿಸಿದೆ.

ಒಂದು ವೇಳೆ, ಈ ಮೊದಲೇ ಟಿಕೆಟ್ ದರ ಕನಿಷ್ಠ 500/- ಅಥವಾ 300/- ರೂ.ಗಳನ್ನಾದರೂ ಫಿಕ್ಸ್ ಮಾಡಿದ್ದರೆ ಅರ್ಧಕ್ಕರ್ಧ ಜನ ಕಡಿಮೆಯಾಗುತ್ತಿದ್ದರು! ಸಂಗ್ರಹಣೆ ಆದ ಹಣವನ್ನು ಸೈನಿಕರ ನಿಧಿಗೋ, ಇನ್ಯಾವುದೋ ಒಳ್ಳೆಯ ಕೆಲಸಕ್ಕೆ ಬಳಸಿಕೊಂಡಿದ್ದರೂ ಆಗಿತ್ತು. ಇನ್ನೊಂದು ವಿಚಾರವೆಂದರೆ, ಕ್ರಿಕೆಟ್ ಕಲಿಗಳನ್ನು ತೆರೆದ ಬಸ್‌ನಲ್ಲಿ ಮೆರವಣಿಗೆ ಮಾಡಲಾಗುತ್ತದೆ ಎಂದು ಸುದ್ದಿ ಹಬ್ಬಿಸಲಾಗಿತ್ತಲ್ಲ, ರೋಡ್ ಸೈಡ್‌ನಲ್ಲಿ ನಿಂತುಕೊಂಡಾದರೂ ಕಣ್ ತುಂಬಿಕೊಳ್ಳುವಾಸೆ! ವಿಧಾನ ಸೌಧದ ಮುಂದೆ ಓಪನ್ ಪ್ಲೇಸ್‌ನಲ್ಲಿ ಸನ್ಮಾನ ಮಾಡುತ್ತಾರಲ್ಲ, ಅಲ್ಲಿ ತಮ್ಮ ನೆಚ್ಚಿನ ಹೀರೋಗಳನ್ನು ನೋಡಿಕೊಳ್ಳುವ ಆಸೆ!! ಏಕ ಕಾಲದಲ್ಲಿ ಎರಡೂ ಕಡೆ ಸಂಭ್ರಮ ಆಚರಿಸಿದರೆ ಜನರನ್ನ ಕಂಟ್ರೋಲ್ ಮಾಡೋದು ಕಷ್ಟ.... ಎಂದು ಪೊಲೀಸ್ ವರಿಷ್ಠರು ಹೇಳಿದ್ದಾರೆ. ಆದರೆ, ಕೇಳುವ ಕಿವಿಗಳು ಕಿವುಡಾಗಿ... ಅಮಾಯಕರು ಸತ್ತಿದ್ದಾರೆ! ಪೊಲೀಸ್ ಅಧಿಕಾರಿಗಳ ತಲೆ ದಂಡವಾಗಿದೆ!! ☯



ಅನ್ಯಾಯವಾಗಿ ಅಮಾನತ್ತುಗೊಂಡ ದಿಟ್ಟ ಪೊಲೀಸ್ ಅಧಿಕಾರಿಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 18 ವರ್ಷಗಳ ಸತತ ಹೋರಾಟದ ಬಳಿಕ ಚೊಚ್ಚಲ ಐಪಿಎಲ್ ಕಪ್ ಗೆದ್ದು ಅಭಿಮಾನಿಗಳಿಗೆ ಅರ್ಪಿಸಿ, ಅಭಿಮಾನ ಮೆರೆಯಲು ಹೋದವರು ಅಜಾಗರೂಕತೆಯಿಂದ ಜೀವ ಬಿಟ್ಟಿದ್ದು, ಈ ದುರಂತ ಇನ್ನೂ ಎಲ್ಲರ ಕಣ್ಣಮುಂದೆ ನರ್ತಿಸುತ್ತಿರುವ ಹೊತ್ತಲ್ಲೇ... ಬಿಗ್ ಬ್ರೇಕಿಂಗ್ ನ್ಯೂಸ್ ಒಂದು ಮೊಳಗುತ್ತಿದೆ. ಆರ್‌ಸಿಬಿ ತಂಡವನ್ನ ಕರ್ನಾಟಕದ ಕಿಲಾಡಿ ರಾಜಕಾರಣಿಯೊಬ್ಬರು ಖರೀದಿ ಮಾಡಲಿದ್ದಾರೆ ಎಂಬುದೇ ಆ ಸುದ್ದಿ! ಹೌದು ಈ ಬಾರಿಯ ಐಪಿಎಲ್ ಸೀಸನ್ ಆರಂಭದಿಂದಲೂ ಡಿ.ಕೆ. ಶಿವಕುಮಾರ್ ಅವರು ಆರ್‌ಸಿಬಿ ತಂಡವನ್ನು ಬೆನ್ನು ತಟ್ಟುತ್ತಾ ಉತ್ಸಾಹ ಮೆರೆದಿದ್ದರು. ಪ್ರತಿ ಮ್ಯಾಚ್ ಗೆದ್ದಾಗಲೂ ಸಂಭ್ರಮಿಸಿದ್ದರು, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆರ್‌ಸಿಬಿ ಮ್ಯಾಚ್ ನಡೆದಾಗ ಖುದ್ದು ತೆರಳಿ

# ಬಿಗ್ ಬ್ರೇಕಿಂಗ್ ನ್ಯೂಸ್

ವೀಕ್ಷಿಸಿದ್ದರು. ಆರ್‌ಸಿಬಿ ತಂಡವನ್ನು ಆಪ್ತವಾಗಿ ನಮ್ ಹುಡುಗ್ರು ಎಂದು ಕರೀತಿದ್ರು ಡಿ.ಕೆ. ಶಿವಕುಮಾರ್! ಇದನ್ನೆಲ್ಲಾ ಗಮನಿಸಿದವರು ಇದೆಲ್ಲ ಮಾಮೂಲಿ, ನಾವೂ ಖುಷಿ ಪಡ್ತೇವಪ್ಪ... ಎಂದುಕೊಂಡು ಸುಮ್ಮನಿದ್ದರು.

ಆರ್‌ಸಿಬಿ ತಂಡವು ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಚೊಚ್ಚಲ ಕಪ್ ಗೆದ್ದು ಬೀಗಿದಾಗ, ಆ ಕ್ಷಣದಿಂದಲೇ ಡಿ.ಕೆ.ಶಿವಕುಮಾರ್ ಅವರ ಉತ್ಸಾಹ ಇಮ್ಮಡಿಯಾಗಿತ್ತು. ಅವತ್ತು ತಡರಾತ್ರಿವರೆಗೆ ಆರ್‌ಸಿಬಿ ಜೆರ್ಸಿ ತೊಟ್ಟು ಪಂದ್ಯ ವೀಕ್ಷಿಸಿದ್ದ ಅವರು, ಆರ್‌ಸಿಬಿಯ ದೊಡ್ಡ ಅಭಿಮಾನಿಯಂತೆ ಸಂಭ್ರಮಿಸಿದ್ದರು. ಮೊದಲೇ ಕರ್ನಾಟಕದ ಉಪ ಮುಖ್ಯಮಂತ್ರಿ! ಹುಡುಗ್ರಿಗೆ ಹವಾ ತೋರಿಸದಿರುತ್ತಾರ? ಸೀದಾ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಖುದ್ದಾಗಿ ತೆರಳಿ ಆರ್‌ಸಿಬಿ ಆಟಗಾರರನ್ನ ವೆಲ್ಕಮ್ ಮಾಡಿದ್ದರು!



ತಮ್ಮ ಕಾರಿನಲ್ಲಿ ಆರ್‌ಸಿಬಿ ತಂಡದ ಬಾವುಟ ಹಿಡಿದು ಬೆಂಗಳೂರಿನ ಬೀದಿ ಬೀದಿಗಳಲ್ಲಿ ಸುತ್ತಾಡಿದರು. ಬಳಿಕ ವಿಧಾನಸೌಧದ ಬಳಿಗೆ ಆರ್‌ಸಿಬಿ ಪಡೆಯನ್ನು ಕರೆದೊಯ್ದು ಭಾರೀ ಆತಿಥ್ಯ ನೀಡಿದ್ದರು. ಇದನ್ನೆಲ್ಲ ನೋಡಿಯೋ ಏನೋ, ಹಲವರು ಡಿ.ಕೆ. ಶಿವಕುಮಾರ್ ಅವರು ಆರ್‌ಸಿಬಿ ತಂಡವನ್ನು ಖರೀದಿ ಮಾಡಲು ಸ್ಕೆಚ್ ಹಾಕಿದ್ದಾರೆ ಎಂದು ಮಾತನಾಡಿಕೊಳ್ಳಲು ಶುರುಮಾಡಿದ್ದಾರೆ! ಮಧ್ಯಾಹ್ನ ಮೂರು ಗಂಟೆಯಿಂದಲೇ ನೂಕು ನುಗ್ಗಲು ಉಂಟಾಗಿ ಐದು ಗಂಟೆಯ ಹೊತ್ತಿಗೆ ಹನ್ನೊಂದು ಜನ ಅಮಾಯಕರು ಸತ್ತು ಹೋಗಿ, ಹೊರಗಡೆ ಹೆಣ ಬಿದ್ದಿದ್ದಾಗಲೂ ಈ ಡಿಕೆಶಿ ಚಿನ್ನಸ್ವಾಮಿ ಸ್ಟೇಡಿಯಂ ಒಳಗೆ ತೆರಳಿ ಆರ್ಸಿಬಿ ತಂಡದೊಡನೆ ಮಿಂಚುತ್ತ, ಕಪ್‌ಗೆ ಮುತ್ತಿಕ್ಕಿದ್ದಾರೆ ಎಂದರೆ... ಆರ್‌ಸಿಬಿ ಟೀಮ್ ಜೊತೆಗೆ ಫೋಟೋಗೆ ಪೋಸ್ ಕೂಡ ಕೊಟ್ಟಿದ್ದಾರೆ ಎಂದರೆ... ಈ ರೂಮರ್ ನಿಜವಿರಬಹುದು ಎನ್ನಿಸುತ್ತಿದೆ! ಅಂದಹಾಗೆ, ಡಿ.ಕೆ. ಶಿವಕುಮಾರ್ ಅವರು ಬರೀ ರಾಜಕಾರಣಿ ಮಾತ್ರವಲ್ಲ, ದೊಡ್ಡ ಉದ್ಯಮಿ ಕೂಡ! ರಾಜಕಾರಣ ಹೊರತುಪಡಿಸಿ ಅವರು ಇಡೀ ಪ್ರಪಂಚದಾದ್ಯಂತ ಉದ್ಯಮದಲ್ಲೂ ತಮ್ಮದೇ ಹವಾ ಇಟ್ಟಿದ್ದಾರೆ. ಈ ಕಾರಣದಿಂದಲೇ ಇಡೀ ದೇಶದಲ್ಲೇ ಅತೀ ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಡಿ.ಕೆ.ಶಿ. ಎರಡನೇ ಸ್ಥಾನದಲ್ಲಿದ್ದಾರೆ! ಅಸೋಸಿಯೇಷನ್ ಫಾರ್‌ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಯ ವರದಿ ಪ್ರಕಾರ ಡಿ.ಕೆ. ಶಿವಕುಮಾರ್ ಅವರ ಒಟ್ಟು ಆಸ್ತಿ ಮೌಲ್ಯ ಬರೋಬ್ಬರಿ 1,413 ಕೋಟಿ ರೂಪಾಯಿ ಎಂದು ಉಲ್ಲೇಖಿಸಿದೆ! ಇದು ಅಧಿಕೃತ ಮಾಹಿತಿ. ಅನಧಿಕೃತ ವಾಗಿ ಎಷ್ಟಿದೆಯೋ ಬಲ್ಲವರಾರು?! ಒಟ್ಟಾರೆ, ಸಾವಿರಾರು ಕೋಟಿಗಳ ಒಡೆಯ ಡಿ.ಕೆ. ಶಿವಕುಮಾರ್ ಅವರು ಆರ್‌ಸಿಬಿ ತಂಡವನ್ನು ಖರೀದಿಸಿದರೂ ಅಚ್ಚರಿ ಪಡುವುದೇನಿಲ್ಲ ಅಲ್ಲವೇ!!! ☯

6 ☞

ಎಲ್ಲ ಅರಾಜಕತೆಯನ್ನು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಮಾಡಿ ಈ ಕನ್ನಡಿಗ ಪೊಲೀಸ್ ಆಯುಕ್ತರನ್ನು ಅಮಾನತು ಮಾಡುವಂಥ ದರ್ಪವನ್ನು ಉತ್ತರ ಕೊರಿಯಾದಲ್ಲಿ ಮಾತ್ರ ನಿರೀಕ್ಷಿಸಬಹುದಲ್ಲವೇ. ಆದರೆ ಇವರೇಕೋ ಆ ಕಟುಕರನ್ನೂ ಮೀರಿಸುವ ಹಂತಕ್ಕೆ ಹೋಗಿದ್ದಾರೆ ಅನ್ನಿಸುತ್ತಿದೆ!



ವಾಚ್‌ಮನ್ ತರಹ ಕಾವಲು ಕಾಯುತ್ತಿದ್ದರು ಸಿಪಿ ದಯಾನಂದರು

ಇವರ ಕಟುಕತನ ಇಲ್ಲಿಗೆ ನಿಂತಿಲ್ಲ, ಚಿನ್ನಸ್ವಾಮಿ ಮೈದಾನಕ್ಕೆ ಹೋಗಲು ಆಟಗಾರರಿಗೆ ಕಷ್ಟವಾಗುತ್ತಿತ್ತು ಎಂದು ತಮ್ಮ ಕಾರಿನಲ್ಲೇ ಬಿಡಲು ಹೋಗಿದ್ದ ಉಪಮುಖ್ಯ ಮಂತ್ರಿಗಳು, ಮೈದಾನದೊಳಕ್ಕೆ ಹೋಗಿ ಟ್ರೋಫಿಯನ್ನು ಕಿತ್ತುಕೊಂಡು ಮುತ್ತಿಟ್ಟು ಬಂದಿದ್ದಾರೆ! ಹೊರಗಡೆ ಹೆಣದ ಮುಂದೆ ಪಾಲಕರು ಅಳುತ್ತಿರುವಾಗ, ಒಳಗಡೆ ಸಂಭ್ರಮಿಸಲು ಹೇಗೆ ಸಾಧ್ಯವಾಯಿತು? ಎನ್ನುವುದನ್ನು ಈ ವ್ಯಕ್ತಿ ವಿವರಿಸಬೇಕಿದೆ! ಇಂದು ಮಾಧ್ಯಮದ ಮುಂದೆ ಬಂದು ಮೊಸಳೆ ಕಣ್ಣೀರು ಹಾಕುವ ಮೊದಲು, ವರ್ತನೆಯನ್ನು ವಿವರಿಸಬೇಕಿದೆ.

ಬುಡದಿಂದ, ತುದಿಯವರೆಗೆ ಬೇಜವಾಬ್ದಾರಿ, ದುರಹಂಕಾರದ ಜತೆಗೆ ಸೂಕ್ಷ್ಮತೆಯಿಲ್ಲದೇ ವರ್ತಿಸಿದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಅದೇ ಕುರ್ಚಿಯಲ್ಲಿ ಕುಳಿತು ಓರ್ವ ಕನ್ನಡಿಗ ದಕ್ಷ ಅಧಿಕಾರಿಗೆ ಕಪ್ಪುಚುಕ್ಕೆ ತರುವುದನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ?!

ಮಾನ್ಯ ಡಿ.ಕೆ ಶಿವಕುಮಾರ್ ಅವರಿಂದ ಇಂತಹ ವರ್ತನೆ ಹೊಸದೇನಲ್ಲ, ಯಾವುದನ್ನಾದರೂ ಸಮರ್ಥಿಸಿ, ಮೈಕೊಡವಿಕೊಂಡು ಹೋಗುವ ಶಕ್ತಿಯನ್ನು ಅವರು ಗಳಿಸಿಕೊಂಡಿದ್ದಾರೆ. ಅವರಿಂದ ಅತಿಯಾದ ನಿರೀಕ್ಷೆಯನ್ನು ಹೊಂದುವುದು ತಪ್ಪಾಗುತ್ತದೆ. ಆದರೆ ಸೈದ್ಧಾಂತಿಕವಾಗಿ ಯಾವುದೇ ವಿರೋಧವಿದ್ದರೂ ಸಿದ್ದರಾಮಯ್ಯನವರ ಮಾನವೀಯ ನೆಲಗಟ್ಟುಗಳ ನಗ್ಗೆ ನನಗೊಂದಿಷ್ಟು ಅಭಿಮಾನವಿತ್ತು. ಆದರೆ ಸಿದ್ದರಾಮಯ್ಯ ಕೂಡ ಈ ರಾಜ್ಯದ ಇನ್ನಿತರ ಕೆಲ ನಾಯಕರಂತೆ ವರ್ತಿಸುತ್ತಿರುವುದು ಬೇಸರ ತರಿಸುತ್ತಿದೆ. ಜನಸಾಮಾನ್ಯರ ಮಧ್ಯೆ ಬೆಳೆದುಬಂದ ಓರ್ವ ಜನನಾಯಕರಿಂದ ಇದನ್ನು ನಿರ್ಲಕ್ಷಿಸರಲಿಲ್ಲ.

## ಪೊಲೀಸರು ಮನುಷ್ಯರಲ್ಲವೇ?

ಅದೆಷ್ಟೋ ರಾಜಕಾರಣಿಗಳು ರಾತ್ರಿಯಿಡಿ ಸುಖದ ನಿದ್ರೆ ಮಾಡಿಯೂ ವೇದಿಕೆಯ ಮೇಲೆ ಗೊರಕೆ ಹೊಡೆಯುತ್ತಾರೆ! ದರೆ ರಾತ್ರಿಯಿಡಿ ಕೆಲಸ ಮಾಡಿದ ಪೊಲೀಸರು ಮರುದಿನ ಮತ್ತದೇ ರಸ್ತೆಯಲ್ಲಿ ನಿಂತು ಕೆಲಸ ಮಾಡಬೇಕೆಂದು ಈ ದುರಹಂಕಾರಿಗಳು ಅಪೇಕ್ಷಿಸುತ್ತಾರೆ. ಅವರು ಕೂಡ ಮನುಷ್ಯರು ಎನ್ನುವ ಸಾಮಾನ್ಯ ವಿಚಾರವನ್ನು ಅರಿಯದವರೆಲ್ಲ ಆಡಳಿತ ಚುಕ್ಕಾಣಿ ಹಿಡಿದರೆ ಹೇಗೆ? ಪೊಲೀಸರನ್ನು ನಾವೆಲ್ಲ ಅದೆಷ್ಟೋ ಬಾರಿ ಟೀಕಿಸಿರಬಹುದು. ಆದರೆ ಸರ್ಕಾರ ಇವತ್ತು ಮಾಡಿರುವ ಕೆಲಸ ಮಾತ್ರ ಅತ್ಯಂತ ಅಮಾನವೀಯ.



ಆರ್‌ಸಿಬಿ ಥೇರ್ಮನ್ ಪ್ರಥಮೇಶ್ ಮಿಶ್ರಾ, ಹಾಗೂ ಅವರ ಮಗಳು

ಪೊಲೀಸರ ನೈತಿಕ ಸ್ಥೈರ್ಯ ಕುಗ್ಗಿಸುವ ಕೆಲಸವಿದು. ಚಿನ್ನಸ್ವಾಮಿ ಸುತ್ತಮುತ್ತ ಅದೆಷ್ಟೋ ಪೊಲೀಸರು ಜನರನ್ನು ರಕ್ಷಿಸಲು ಮಾಡುತ್ತಿದ್ದ ಹರಸಾಹಸ ನೋಡಿದಾಗ ನಿಂತಲ್ಲಿಯೇ ನಾನು ಕುಸಿದುಹೋಗಿದ್ದೆ. ಕೆಲವು ಪೊಲೀಸರು ಕೈನಲ್ಲಿ ದೇಹ ಹಿಡಿದುಕೊಂಡು ಕಣ್ಣೀರು ಹಾಕುತ್ತಿದ್ದರು! ಆದರೆ ಹೈಕೋರ್ಟ್‌ನಲ್ಲಿ ಬರುವ ಪಿಐಎಲ್ ವಿಚಾರಣೆಯಲ್ಲಿ ಆಗಬಹುದಾದ ಮುಖಭಂಗ ತಪ್ಪಿಸಿಕೊಳ್ಳಲು ಸಿಎಂ ಹಾಗೂ ಡಿಸಿಎಂ ಮಾಡಿರುವ ನಾಟಕ ಪ್ರದರ್ಶನವಿದು. ಇವರಿಬ್ಬರು ಮಾಡಿದ ತಪ್ಪಿಗೆ ಹೈಕೋರ್ಟ್ ಮುಂದೆ ಇವರನ್ನು ಬಲಿ ಹಾಕಲಾಗಿದೆ. ಇವರ ಪ್ರಚಾರಕ್ಕಾಗಿ ಹನ್ನೊಂದು ಜೀವ ಕಳೆದರು. ಅಲ್ಲಿ ಮುಖ ಉಳಿಸಿಕೊಳ್ಳಲು ಅಧಿಕಾರಿಗಳನ್ನು ಬಲಿ ಹಾಕಿದರು. ಈ ದುರಹಂಕಾರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ಯಾವುದೇ ನಾಟಕ ಮಾಡಲು ಸಿದ್ಧವಿರುತ್ತಾರೆ. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯು ಇದಕ್ಕಿಂತ ಹೊಲಸನ್ನು ನೋಡಲು ಸಾಧ್ಯವಿಲ್ಲ, ಆದಾಗ್ಯೂ ಈ ಸರ್ಕಾರ ನೀಡಿದ ನಾಲ್ಕು ಗಂಟೆ ಅವಧಿಯಲ್ಲಿ ಪೊಲೀಸರು ಮಾಡಿದ ಕೆಲಸನ್ನು ನಾವು ಖಂಡಿತ ಶ್ಲಾಘಿಸಬೇಕು. ಹಾಗೂ ಅವರೊಂದಿಗೆ ಪ್ರತಿಯೊಬ್ಬರೂ ನಿಲ್ಲಬೇಕು ಎನ್ನುವ ಮನವಿ ಮಾಡುತ್ತೇನೆ. ಈ ಕ್ಷಣಕ್ಕೂ ಬಲಿಯಾದ ಜೀವ ಹನ್ನೊಂದಕ್ಕೆ ನಿಂತಿದ್ದರೆ ದಯಾನಂದ್ ಹಾಗೂ ಅವರ ತಂಡವೇ ಅದಕ್ಕೆ ಕಾರಣವಾಗಿದೆ. ಏಕೆಂದರೆ ಜವಾಬ್ದಾರಿಯುತ ಸೂತ್ರದಾರರಂತೆ ಅವರು ದುರ್ಘಟನೆ ಬಳಿಕ ಮೈದಾನಕ್ಕೆ ಹೋಗಿ ಟ್ರೋಫಿಗೆ ಮುತ್ತು ಕೊಡುತ್ತಿರಲಿಲ್ಲ!

## ಗೆದ್ದ ಟೀಮ್‌ನಲ್ಲಿ ಕನ್ನಡಿಗರೇ ಇಲ್ಲಾ

ಕೊನೆಯದಾಗಿ.... ಕನ್ನಡಿಗ ಸಮರ್ಥ ಆಟಗಾರರಿಗೆ ಮಣೆ ಹಾಕದ ಆರ್‌ಸಿಬಿ ತಂಡದ ಗೆಲುವಿನಲ್ಲಿ ಕನ್ನಡ ಅಸ್ಮಿತೆಯನ್ನು ಸೇರಿಸಿ ರಾಜಕೀಯ ಮಾಡಲು ಹೋದ ಸರ್ಕಾರವು ಹೆಣದ ರಾಶಿಯನ್ನು ಹಾಕಿತು. ಈ ಪ್ರಚಾರದ ನಾಟಕದಲ್ಲಿ ನಮ್ಮದೇ ಓರ್ವ ದಕ್ಷ ಕನ್ನಡಿಗ ಅಧಿಕಾರಿಯನ್ನು ನಮ್ಮ ಸರ್ಕಾರ ಮನೆಗೆ ಕಳುಹಿಸಿತು. ಅಲ್ಲಿಗೆ, ಕನ್ನಡ ಹಾಗೂ ಕರುನಾಡು ಉದ್ಧಾರವಾಯಿತು! ☯

# ಸಿಎಂ-ಡಿಸಿಎಂ ವಿರುದ್ಧ ಹೈ ಕೋರ್ಟ್‌ನಲ್ಲಿ ರಿಟ್!

ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿಜಯೋತ್ಸವ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ಆದೇಶದ ಮೇರೆಗೆ ಪೊಲೀಸರು ಕೆಲವರನ್ನು ಬಂಧಿಸಿದ್ದಾರೆ. ಈ ಘಟನೆಗೆ ಆರ್‌ಸಿಬಿ ಆಯೋಜಕರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆರ್‌ಸಿಬಿಯ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಅವರನ್ನ ಬಂಧಿಸಲಾಗಿದೆ. ಇದನ್ನು ಪ್ರಶ್ನಿಸಿ ನಿಖಿಲ್ ಸೋಸಲೆ ಅವರ ಪತ್ನಿ ಮಾಳವಿಕಾ ನಾಯ್ಕ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಬಂಧನಕ್ಕೆ ತಡೆ ನೀಡುವಂತೆ ಅರ್ಜಿ ಮೂಲಕ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ತಮ್ಮ ಪತಿಯನ್ನ ಕಾನೂನುಬಾಹಿರವಾಗಿ ಅರೆಸ್ಟ್ ಮಾಡಲಾಗಿದೆ. ತನಿಖೆಯನ್ನೇ ನಡೆಸದೇ ಸಿಎಂ ಆದೇಶಾನುಸಾರ ಬಂಧಿಸಲಾಗಿದೆ. ಕಾನೂನು, ಸಂವಿಧಾನವನ್ನ ಕಡೆಗಣಿಸಿ ಬಂಧಿಸಲಾಗಿದ್ದು, ಈ ಮೂಲಕ ನಿಖಿಲ್ ಸೋಸಲೆಯ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಅಲ್ಲದೇ ಚಿನ್ನಸ್ವಾಮಿ ಸ್ಟೇಡಿಯಂನ ಸಂಭ್ರಮಾಚರಣೆಯಲ್ಲಿ ಡಿಸಿಎಂ ಕೂಡ ಭಾಗಿಯಾಗಿದ್ದರು ಎಂದು ಗಂಭೀರ ಆರೋಪ ಮಾಡಿದ್ದಾರೆ.



ನಿಖಿಲ್ ಸೋಸಲೆ

ಆಟಗಾರರನ್ನು ವಿಮಾನ ನಿಲ್ದಾಣದಲ್ಲಿ ಖುದ್ದು ಡಿಸಿಎಂ ಸ್ವಾಗತಿಸಿದ್ದರು. ವಿಧಾನಸೌಧದಲ್ಲಿ ಸಿಎಂ ಮತ್ತು ಡಿಸಿಎಂ ಸನ್ಮಾನಿಸಿದ್ದರು. ನಂತರವೂ ಚಿನ್ನಸ್ವಾಮಿ ಸ್ಟೇಡಿಯಂನ ಸಂಭ್ರಮಾಚರಣೆಯಲ್ಲಿ ಡಿಸಿಎಂ ಭಾಗಿಯಾಗಿದ್ದರು. ಅವಘಡ ಮಾಹಿತಿ ತಿಳಿದ ತಕ್ಷಣ ಆರ್‌ಸಿಬಿಯಿಂದ ಕಾರ್ಯಕ್ರಮ ಸ್ಥಗಿತ ಮಾಡಲಾಗಿತ್ತು. ಹೀಗಾಗಿ ಯಾವುದೇ ಲೋಪವೆಸಗಿಲ್ಲ, ಹೀಗಾಗಿ ನಿಖಿಲ್ ಸೋಸಲೆ ಬಂಧನಕ್ಕೆ ತಡೆ ನೀಡುವಂತೆ ಪತ್ನಿ ಮಾಳವಿಕಾ ನಾಯ್ಕ್ ರಿಟ್ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಅಂದಹಾಗೆ, ಈ ನಿಖಿಲ್ ಸೋಸಲೆ ಬಗ್ಗೆ ಹೇಳಬೇಕು ಅಂದ್ರೆ, ಈತ ಆರ್‌ಸಿಬಿಯ ಮಾರ್ಕೆಟಿಂಗ್ ಮತ್ತು ಕಂದಾಯ ವಿಭಾಗದ ಮುಖ್ಯಸ್ಥ.

ನಿಖಿಲ್ ಸೋಸಲೆ ಮೂಲತಃ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ (ಯುಎಸ್‌ಎಲ್) ನಡೆಸುತ್ತಿರುವ ಡಯಾಜಿಯೊ ಇಂಡಿಯಾದ ಉದ್ಯೋಗಿ. ಬೆಂಗಳೂರಿನಲ್ಲಿ ವಾಸಿಸುತ್ತಿರುವ ನಿಖಿಲ್, ಕಳೆದ 13 ವರ್ಷಗಳಿಂದ ಡಯಾಜಿಯೊದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆರ್‌ಸಿಬಿ ಫ್ರಾಂಚೈಸಿಯೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದು, ಕೊಹ್ಲಿಗೂ ಪರಮಾಪ್ತ ಮಿತ್ರರಾಗಿದ್ದಾರೆ. ಇನ್ನೊಂದೆಡೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (KSCA) ಸಹ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಆರ್‌ಸಿಬಿ ಐಪಿಎಲ್' ಟ್ರೋಫಿ ಗೆಲುವಿನ ಸಂಭ್ರಮಾಚರಣೆಯನ್ನು ವಿಧಾನಸೌಧದ ಎದುರು ನಡೆಸುವಂತೆ ಕರೆ ಕೊಟ್ಟಿದ್ದೇ ಸರ್ಕಾರ... ಎಂದು ತನ್ನ ರಿಟ್ ಅರ್ಜಿಯಲ್ಲಿ ಸ್ಫೋಟಕ ಆರೋಪ ಮಾಡಿದೆ! ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಇತರೆ ಸಚಿವರು ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್‌ನಲ್ಲಿ ಹಾಕಿದ್ದ ವೇದಿಕೆಯಲ್ಲಿ ಆಟಗಾರರನ್ನು ಸನ್ಮಾನಿಸಿದ್ದಾರೆ. ತಮ್ಮ ಮೇಲಿನ ಜನರ ಆಕ್ರೋಶದ ಹಾದಿ ತಪ್ಪಿಸಲು ನಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ರಿಟ್ ಅರ್ಜಿಯಲ್ಲಿ ಕೆಎಸ್‌ಸಿಎ ಉಲ್ಲೇಖಿಸಿದೆ! ಕೋರ್ಟ್‌ನಲ್ಲಿ ಇದಕ್ಕೇನು ಉತ್ತರ ಕೊಡುತ್ತಾರೆ ಸನ್ಮಾನ್ಯ ಸಿದ್ದರಾಮಯ್ಯ? ☯


ನಂದೀಶ್ ರೆಡ್ಡಿ ಬದುಕಿದ್ದಾಗ

**ಮದ್ಯ ಸೇವನೆ ಸಂದರ್ಭದಲ್ಲಿ ಪರಿಚಯವಿಲ್ಲದಿದ್ದರೂ, ವ್ಯಕ್ತಿಯೊಬ್ಬ ಮದ್ಯ ಸೇವನೆ ಮಾಡುತ್ತಿದ್ದವನನ್ನು ತನ್ನ ಟೇಬಲ್‌ಗೆ ಕರೆದನು. ಆತ ಬಾರದೆ ಪ್ರತ್ಯೇಕವಾಗಿ ಕುಳಿತು ಮದ್ಯ ಸೇವನೆ ಮಾಡುತ್ತಿದ್ದಾಗ, ಕೋಪಗೊಂಡ ವ್ಯಕ್ತಿಯು ನಾನು ಕರೆದರೆ ಫಿಲ್ಮ್ ಹಿರೋಗಳೇ ಬರುತ್ತಾರೆ. ನೀನು ಬರೋದಿಕ್ಕೇನೋ ಎಂದು ಹವಾ ಕ್ರಿಯೆಟ್ ಮಾಡಲು ಮುಂದಾದಾಗ, ಇಬ್ಬರು ಪರಸ್ಪರ ಕೈಕೈ ಮಿಲಾಯಿಸಿ ಹೊಡೆದಾಡಿಕೊಂಡಿದ್ದು, ಅಲ್ಲಿದ್ದವರು ತಡೆದು ಸಮಾಧಾನಪಡಿಸಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಮತ್ತೆ ವ್ಯಕ್ತಿಯು ಕಾಲು ಕರೆದುಕೊಂಡು ಜಗಳ ಮಾಡಲು ಬಂದವನು ಏಕಾಏಕಿ ಆತನ ಎದೆಗೆ ಚಾಕುವಿನಿಂದ ತಿವಿದು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಬೇತಮಂಗಲ ಠಾಣೆಯ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**

# ಎಣ್ಣೆ ಪಾರ್ಟಿಯ ಫೈಟ್‌ನಲ್ಲಿ ಕಗ್ಗೊಲೆ; ಸ್ಟಂಟ್ ಮಾಸ್ಟರ್‌ನ ಅರೆಸ್ಟ್!

**ಕೋಲಾರ**
✍ ಕೋಲಾರ ಮಂಜು

ಕೋಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕಿನ ವೆಂಕಟಾಪುರ ಗ್ರಾಮದ ವಾಸಿ ವೆಂಕಟೇಶಪ್ಪನವರ ಮಗ ಚಲನಚಿತ್ರಗಳಲ್ಲಿ ಸ್ಟಂಟ್ ಮಾಸ್ಟರ್ ಆಗಿ ಕೆಲಸ ಮಾಡುತ್ತಿದ್ದ ವಿ. ಭಾಸ್ಕರ್ (28) ಈತನಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದು, ಬೆಂಗಳೂರಿನ ಪ್ರಿಯಾಂಕನಗರದಲ್ಲಿ ತನ್ನ ಹೆಂಡತಿ, ಮಕ್ಕಳೊಂದಿಗೆ ವಾಸವಿರುತ್ತಾರೆ. ಸಿನಿಮಾದ ಚಿತ್ರೀಕರಣ ಇದ್ದಾಗ ಸಾಹಸ



ಎಸ್ಪಿ ಕೆ.ಎಂ. ಶಾಂತರಾಜು


ಡಿವೈಎಸ್ಪಿ ಪಾಂಡುರಂಗ

ನಿರ್ದೇಶಕರು ಇವರನ್ನು ಕರೆಸಿಕೊಂಡು ಸಾಹಸ ದೃಶ್ಯಗಳನ್ನು ತೆಗೆದು ಕೈಗೊಂದಿಷ್ಟು ದುಡ್ಡನ್ನು ಕೊಟ್ಟು ಕಳುಹಿಸುತ್ತಿದ್ದರು. ಯಾವಗಾಲೂ ಸಾಹಸದ ಚಿತ್ರೀಕರಣ ಇರುತ್ತಿರಲಿಲ್ಲ. ಯಾವುದಾದರೂ ಫೈಟಿಂಗ್ ಸೀನ್ ಇದ್ದಾಗ ಮಾತ್ರ ಇವರನ್ನು ಕರೆಯುತ್ತಿದ್ದರು. ಆಗ ಇವರು ಶೂಟಿಂಗ್‌ಗೆ ಹೋಗಬೇಕಾಗಿತ್ತು. ಶೂಟಿಂಗ್ ಇಲ್ಲದಿದ್ದಾಗ ಮನೆಯಲ್ಲಿಯೇ ಇರುತ್ತಿದ್ದರು. ಬರುವ ಹಣದಲ್ಲಿ ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸ ಹಾಗೂ ಸಂಸಾರದ ಇನ್ನಿತರೆ ಖರ್ಚುಗಳನ್ನು ನಿಭಾಯಿಸಲು ಕಷ್ಟವಾದಾಗ, ಸುಲಭವಾಗಿ ಹಣಗಳಿಸುವ ಮಾರ್ಗವನ್ನು ಕಂಡುಕೊಂಡನು.


ಕೊಲೆಯಾದ ನಂದೀಶ್ ರೆಡ್ಡಿ

ಅದು ಏನೆಂದರೆ ನಾನೊಬ್ಬ ಸ್ಟಂಟ್ ಮಾಸ್ಟರ್ ಸಿನಿಮಾ ಹೀರೋಗಳಿಗೆ ಫೈಟಿಂಗ್ ಮತ್ತು ಸ್ಟಂಟ್‌ಗಳನ್ನು ಹೇಳಿಕೊಡುತ್ತಿರುವ ತಾನೊಬ್ಬ ಸೆಲೆಬ್ರೆಟಿ ನನಗೆ ಸಾಕಷ್ಟು ಹವಾ ಇದೆ, ನನ್ನನ್ನು ಯಾರೂ ಏನೂ ಮಾಡಲು ಆಗುವುದಿಲ್ಲ ಎಂದು ಹೇಳಿಕೊಂಡು ಮಾಮೂಲಿ ವಸೂಲಿಗಾಗಿ ಅಮಾಯಕರ ಮೇಲೆ ಹಲ್ಲೆ ಮಾಡಿ ಹಣ ಮಾಡುತ್ತಿದ್ದನು. ಆದರೆ ಇದು ಹೆಚ್ಚು ಕಾಲ ನಡೆಯಲಿಲ್ಲ. ಬೆಂಗಳೂರಿನ ಕೆ. ಆರ್. ಪುರಂ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಂಡು ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದಿರುವ ವಿ. ಭಾಸ್ಕರ್ ಕಳೆದ ಆರು ತಿಂಗಳ ಹಿಂದೆ ಬೆಂಗಳೂರು ಬಿಟ್ಟು ಮಕ್ಕಳೊಂದಿಗೆ ತನ್ನ ಸ್ವಂತ ಊರಾದ ವೆಂಕಟಾಪುರ ಗ್ರಾಮಕ್ಕೆ ಬಂದು ವಾಸವಾಗಿದ್ದನು. ಸ್ಟಂಟ್ ಮಾಸ್ಟರ್ ಎನ್ನುವ ಕಾರಣಕ್ಕಾಗಿ ಬೆಂಗಳೂರಿನ ಕೆಲವು ಏರಿಯಾಗಳಲ್ಲಿ ತನ್ನ ಹವಾ ಕ್ರಿಯೆಟ್ ಮಾಡಿದಂತೆ ವೆಂಕಟಾಪುರ ಗ್ರಾಮವು ಸೇರಿದಂತೆ ಗುಟ್ಟಹಳ್ಳಿ, ಕೊಂಡಹಳ್ಳಿ, ಬೇತಮಂಗಲದಲ್ಲಿ ಹವಾ ಕ್ರಿಯೆಟ್ ಮಾಡಿಕೊಳ್ಳಲು ಮುಂದಾಗಿದ್ದನು. ಆದರೆ ಇವನ ಹವಾಗೆ ಯಾರು ಕ್ಯಾರೆ ಎನ್ನುತ್ತಿರಲಿಲ್ಲ. ಅಮಾಯಕರ ಮೇಲೆ ಮಾತ್ರ ತನ್ನ ಹವಾ ಮೈಂಟೆನ್ ಮಾಡುತ್ತಿದ್ದನು. ಮುಳಬಾಗಿಲು ತಾಲ್ಲೂಕಿನ ಮೋತಕಪಲ್ಲಿ ಗ್ರಾಮ ಪಂಚಾಯ್ತಿಗೆ ಸೇರಿರುವ ಕೊಂಡಹಳ್ಳಿ ಗ್ರಾಮದ ವಾಸಿ ಲೇಟ್ ವೆಂಕಟರಾಮರೆಡ್ಡಿರವರ ಮಗ ಅಡಿಗೆ ಕೆಲಸ ಮಾಡುವ ನಂದೀಶ್ ರೆಡ್ಡಿ (32) ಈತ ಬೆಂಗಳೂರಿನ ಕೆ.ಆರ್. ಪುರಂನಲ್ಲಿರುವ ಅಡಿಗೆ ಗುತ್ತಿಗೆದಾರರ ಬಳಿ ಅಡಿಗೆ ಸಹಾಯಕನಾಗಿ ಕೆಲಸ ಮಾಡಿಕೊಂಡು ಎಲೆ ಮಲ್ಲಪ್ಪನ ಕೆರೆ ಸಮೀಪ ತನ್ನ ಹೆಂಡತಿ, ಮಕ್ಕಳೊಂದಿಗೆ ವಾಸವಾಗಿರುತ್ತಾರೆ. ಮೇ ತಿಂಗಳ ಕೊನೆಯ ವಾರದಲ್ಲಿ ತನ್ನ ಒಡಹುಟ್ಟಿದ ತಂಗಿಯ ಮದುವೆ ಇದ್ದುದ್ದರಿಂದ ಅದರ ಸಿದ್ಧತೆಗಾಗಿ ಹಾಗೂ ಗ್ರಾಮದಲ್ಲಿರುವ ಸಂಬಂಧಿಕರೊಬ್ಬರ ಮದುವೆಯು ಮೇ 8 ಮತ್ತು 9ರಂದು ಆಂಧ್ರಪ್ರದೇಶದ ವಿ. ಕೋಟೆ ನಗರದಲ್ಲಿ ನಡೆಯಲಿದ್ದು, ಮದುವೆಯ ಅಡಿಗೆ ಕೆಲಸವನ್ನು ತನ್ನ ತಂಡದವರು ವಹಿಸಿಕೊಂಡಿದ್ದು, ಅದಕ್ಕಾಗಿಯೇ ಮೇ 2ರಂದು ಬಂದಿದ್ದರು. ನಂದೀಶ್‌ರೆಡ್ಡಿಯು ತಾಯಿ, ತಂಗಿಯರು ಮತ್ತು ತಮ್ಮನನ್ನು ನೋಡಲು 3-4 ತಿಂಗಳಿಗೊಂದು ಬಾರಿ ಊರಿಗೆ ಬಂದು ಒಂದು ವಾರ ಇದ್ದು ಮತ್ತೆ ಬೆಂಗಳೂರಿಗೆ ಹೋಗುತ್ತಿದ್ದರು. ಹಬ್ಬಹರಿ ದಿನಗಳ ಸಮಯದಲ್ಲಿ ಬಂದಾಗ ಸ್ನೇಹಿತರ ಜೊತೆ ಸೇರಿ ಬಾರ್‌ನಲ್ಲಿ ಎಣ್ಣೆ ಪಾರ್ಟಿ ಮಾಡುತ್ತಿದ್ದರು. ಯಾರು ಇಲ್ಲದಿರುವಾಗ



ಪಿಐ ರಂಗಶಾಮಯ್ಯ



ಪಿಎಸ್‌ಐ ಗುರುರಾಜ ಚಿಂತಾಕಲ

ತಾನೊಬ್ಬನೇ ಬಾರ್‌ಗೆ ಹೋಗಿ ಮದ್ಯ ಸೇವನೆ ಮಾಡುತ್ತಿದ್ದನು. ತಂಗಿಯ ಮದುವೆಯ ಸಿದ್ಧತೆಗಾಗಿ ಬಂದಿದ್ದ ನಂದೀಶ್ ರೆಡ್ಡಿಯು ಮೇ 7ರಂದು ರಾತ್ರಿ ಕೆಜಿಎಫ್-ಮುಳಬಾಗಿಲು ರಸ್ತೆಯಲ್ಲಿರುವ ಗುಟ್ಟಹಳ್ಳಿ ಸಮೀಪ ಇರುವ ಬಾಲಾಜಿ ಬಾರ್ ಅಂಡ್ ರೆಸಿಡೆನ್ಸಿಗೆ ಮದ್ಯ ಸೇವನೆ ಮಾಡಲು ಹೋಗಿದ್ದರು.

### ಪಾನಗೋಷ್ಠಿಯಲ್ಲಿ ಫೈಟ್

ಮುಳಬಾಗಿಲು ತಾಲ್ಲೂಕಿನ ಕೊಂಡಹಳ್ಳಿ ಗ್ರಾಮದ ವಾಸಿ ಲೇಟ್ ವೆಂಕಟ ರಾಮರೆಡ್ಡಿರವರ ದೊಡ್ಡ ಮಗ


ಬಾರ್‌ನಲ್ಲಿರುವ ಶೆಡ್‌ಗಳು


ಆರೋಪಿ ಭಾಸ್ಕರ್

ಜಿರಾಯ್ತಿದಾರ ಬಾಬುರೆಡ್ಡಿರವರು ಮೇ 7ರಂದು ರಾತ್ರಿ 10ಕ್ಕೆ ಬೇತಮಂಗಲ ಪೊಲೀಸ್ ಠಾಣೆಗೆ ಹಾಜರಾಗಿ ಇಂದು ರಾತ್ರಿ 8 ಗಂಟೆ ಸಮಯದಲ್ಲಿ ಕೆಜಿಎಫ್ ತಾಲ್ಲೂಕಿನ ವೆಂಕಟಾಪುರ ಗ್ರಾಮದ ಭಾಸ್ಕರ್ ತನ್ನ ಸ್ನೇಹಿತರಾದ ಚಂದ್ರಕುಮಾರ್, ಲಕ್ಷ್ಮಣ್, ಸುರೇಶ್‌ರವರೊಂದಿಗೆ ಬೇತಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯ ಗುಟ್ಟಹಳ್ಳಿ ಸರ್ಕಲ್ ಬಳಿಯಿರುವ ಬಾಲಾಜಿ ಬಾರ್ ಅಂಡ್ ರೆಸಿಡೆನ್ಸಿಯ ಶೆಡ್ ಒಂದರಲ್ಲಿ ಕುಳಿತು ಮದ್ಯಪಾನ ಮಾಡುತ್ತಿರುವಾಗ ಮುಳಬಾಗಿಲು ತಾಲ್ಲೂಕಿನ ಕೊಂಡಹಳ್ಳಿ ಗ್ರಾಮದ ನಂದೀಶ್‌ರೆಡ್ಡಿ ಶೆಡ್ ಮುಂದೆ ಹೋಗುತ್ತಿದ್ದಾಗ ಭಾಸ್ಕರ್ ಜೊತೆ ಕುಡಿಯುತ್ತಾ ಕುಳಿತಿದ್ದ ಸುರೇಶ್ ಎನ್ನುವವರು ಏ ನಂದೀಶ್ ಎಂದು ಕರೆದನು. ಆಗ ನಂದೀಶ್ ರೆಡ್ಡಿ ಅವನ ಮಾತು ಕೇಳಿಸಿದ ರೀತಿಯಲ್ಲಿ ಮುಂದೆ ಹೋಗುತ್ತಿದ್ದಾಗ, ಭಾಸ್ಕರ್ ನಂದೀಶ್ ರೆಡ್ಡಿಯನ್ನು ನೋಡಿ ತೆಲುಗಿನಲ್ಲಿ ಎವಡ್ರಾ ವಾಡು, ನೀವು ಪಿಲುಸ್ತಾ ಉಂಟೇನು ಪೊತಾಉಂಡಾಡು ಎಂದು ಕೆಟ್ಟ ಮಾತಿನಿಂದ ಬೈದಿದ್ದು, ಇದಕ್ಕೆ ಪ್ರತಿಯಾಗಿ ನಂದೀಶ್‌ರೆಡ್ಡಿಗೂ ಭಾಸ್ಕರ್‌ನನ್ನು ನೋಡಿ ಎವಡ್ರಾ ಈ ಕೊಡಕು ಎಂದು ಬೈದಿದ್ದು, ಇದರಿಂದ ಭಾಸ್ಕರ್ ಮತ್ತು ನಂದೀಶ್ ರೆಡ್ಡಿ ಮಧ್ಯೆ ಜಗಳವಾಗಿ ಭಾಸ್ಕರನು ತನ್ನ ಕೈಗಳಿಂದ ನಂದೀಶ್ ರೆಡ್ಡಿ ಮುಖಕ್ಕೆ ಎರಡು ಏಟು ಹೊಡೆದಿರುತ್ತಾನೆ.

ಆಗ ಅಲ್ಲಿಯೇ ಇದ್ದ ಭಾಸ್ಕರನ ಸ್ನೇಹಿತರಾದ ಚಂದ್ರಶೇಖರ್, ಲಕ್ಷ್ಮಣ್, ಸುರೇಶ್ ಮತ್ತು ನಾನು ಅವರಿಬ್ಬರ ಜಗಳ ಬಿಡಿಸಿ ಅಲ್ಲಿಂದ ಕಳುಹಿಸಿದ್ದೆವು. ಪುನಃ ಅದೇ ದಿನ ರಾತ್ರಿ ಸುಮಾರು 8.30 ಗಂಟೆಯಲ್ಲಿ ನಂದೀಶ್ ರೆಡ್ಡಿಯು ಬಾಲಾಜಿ ಬಾರ್‌ಗೆ ಬಂದು ಮದ್ಯ ಪಾನ ಮಾಡಿ ಆಚೆ ಹೋಗುವಾಗ ಅಲ್ಲಿಯೇ ಕುಡಿಯುತ್ತಾ ಕುಳಿತಿದ್ದ ಭಾಸ್ಕರ್‌ನು ಬಾರ್ ಕಾಂಪೌಂಡ್ ಒಳಗಡೆ ನಂದೀಶ್ ರೆಡ್ಡಿಯನ್ನು ನೋಡಿ ತೆಲುಗಿನಲ್ಲಿ ನಾ ಕೊಂಡಕಾ ನನ್ನಿ ತಬ್ಬಿ ಇಂಕಾ ಈಡೇ ಉಂಡುವಾ, ನೀಯಮ್ಮದೆಂಗಾ ಎಂದು ಕೆಟ್ಟಮಾತುಗಳಿಂದ ಜಬೈದು ಕೈಗಳಿಂದ ನಂದೀಶ್ ರೆಡ್ಡಿಯ ತಲೆ, ಮುಖಕ್ಕೆ ಬಲವಾಗಿ ಬೀಸಿ ಹೊಡೆದು ತನ್ನ ಮನೆಯಿಂದ ತಂದಿದ್ದ ಚಾಕುವಿನಿಂದ ನಂದೀಶ್ ರೆಡ್ಡಿಯ ತಲೆ ಮತ್ತು ಎದೆ ಭಾಗಕ್ಕೆ ತಿವಿದಿದ್ದಾನೆ. ಆಗ ನಂದೀಶ್‌ರೆಡ್ಡಿಯು ಕೆಳಗೆ ಬಿದ್ದಿದ್ದು ಅಲ್ಲಿಯೇ ಪಕ್ಕದ ಶೆಡ್‌ನಲ್ಲಿ ಕುಡಿಯುತ್ತಾ ಕುಳಿತಿದ್ದ ನನಗೆ ಗಲಾಟೆ ಶಬ್ದ ಕೇಳಿಸಿ ಅಲ್ಲಿಗೆ ಬಂದು ಏನೋ ಭಾಸ್ಕರ್ ಇದೆಲ್ಲ ಎಂದು ಹೇಳಿ ಜಗಳ ಬಿಡಿಸಲು ಹೋದಾಗ ಭಾಸ್ಕರನು ನನ್ನನ್ನು ನೀ ಅಡ್ಡ ಬಂದರೆ ನಿನ್ನನ್ನು ಸಾಯಿಸಿಬಿಡುತ್ತೇನೆಂದು ಹೇಳಿದ ಭಾಸ್ಕರ್‌ನು ನನ್ನನ್ನು ಸಾಯಿಸುವ ಉದ್ದೇಶದಿಂದ ಚಾಕುವಿನಿಂದ ಹೊಡೆದಿದ್ದು, ಆಗ ನಾನು ತಪ್ಪಿಸಿಕೊಂಡೇನು ಆದರೂ ನನ್ನ ಎಡಕಿವಿಯ ಕೆಳಗೆ ಮತ್ತು ಎಡಕೈಗೆ ಗಾಯವಾಗಿರುತ್ತದೆ. ಭಯದಿಂದ ಸ್ವಲ್ಪ ದೂರ ಹೋಗಿ ನಿಂತುಕೊಂಡೆನು. ನಂತರ ಭಾಸ್ಕರನು ಕೆಳಗೆ ಬಿದ್ದಿದ್ದ ನಂದೀಶ್ ರೆಡ್ಡಿ ಬಳಿ ಹೋಗಿ ತನ್ನ ಬಳಿ ಇದ್ದ ಚಾಕುವಿನಿಂದ ನಂದೀಶ್‌ರೆಡ್ಡಿಯ ಬೆನ್ನು ಮತ್ತು ಕಿಬ್ಬೊಟ್ಟೆಗೆ ಬರ್ಬರವಾಗಿ ಚುಚ್ಚಿ ಚುಚ್ಚಿ ಆತನ ಕುತ್ತಿಗೆಯನ್ನು ಕಾಲಿನಿಂದ ತುಳಿದು ಚಾಕು ಸಮೇತ ಅಲ್ಲಿಂದ ಕಾರಿನಲ್ಲಿ ಹೊರಟುಬಿಟ್ಟನು. ಮಾರಣಾಂತಿಕ ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿದ್ದ ನಂದೀಶ್‌ರೆಡ್ಡಿ ಬಳಿಗೆ ಬಂದು ನೋಡಲಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಸತ್ತು ಹೋಗಿದ್ದಾನೆ ಎಂದು ತಿಳಿದಿದ್ದರೂ ಕುಡಿದ ಮತ್ತಿನಲ್ಲಿ ದ್ವೇಷದಿಂದ ಮತ್ತೆ ಮತ್ತೆ ಚಾಕುವಿನಿಂದ ಇರಿಯುತ್ತಾ ಕ್ರೌರ್ಯ ಮೆರೆದು ಪರಾರಿಯಾಗಿರುವ ಆರೋಪಿ ಭಾಸ್ಕರ್‌ನನ್ನು ಪತ್ತೆ ಮಾಡಿ ಅವನ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು.

ಬೇತಮಂಗಲ ಪೊಲೀಸ್ ಠಾಣೆಯ ಪಿಎಸ್‌ಐ ಗುರುರಾಜ ಚಿಂತಾಕಲರವರು ಮೊ.ಸಂ. 58/2025 ಕಲಂ 103(1) 109, 352 ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು. ಸ್ಥಳಕ್ಕೆ ಎಸ್ಪಿ ಕೆ.ಎಂ. ಶಾಂತರಾಜು, ಡಿವೈಎಸ್ಪಿ ಪಾಂಡುರಂಗ, ಪಿಐ



ಬಾಲಾಜಿ ಬಾರ್

ರಂಗಶಾಮಯ್ಯ ಮತ್ತು ಸಿಬ್ಬಂದಿಯು ಭೇಟಿ ನೀಡಿ ಸ್ಥಳ ಮತ್ತು ಶವದ ಮಹಜರ್ ನಡೆಸಿದ ನಂತರ ಶವವನ್ನು ಕೆಜಿಎಫ್ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದು ಅಲ್ಲಿ ಮರುದಿನ ಬೆಳಿಗ್ಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಶವಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ತನ್ನ ಜೊತೆ ಮದ್ಯ ಸೇವನೆ ಮಾಡಲು ಬರಲಿಲ್ಲವೆಂಬ ಕಾರಣಕ್ಕೆ ದ್ವೇಷದಿಂದ ನಂದೀಶ್‌ರೆಡ್ಡಿಯನ್ನು ಅಮಾನುಷವಾಗಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಭಾಸ್ಕರ್‌ನ ಪತ್ತೆಗಾಗಿ ಎಸ್ಪಿ ಕೆ.ಎಂ. ಶಾಂತರಾಜು ಮತ್ತು ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶನದಲ್ಲಿ ಬೇತಮಂಗಲ ಪೊಲೀಸ್ ಠಾಣೆಯ ಪಿಐ ರಂಗಶಾಮಯ್ಯನವರ ನೇತೃತ್ವದಲ್ಲಿ ಪಿಎಸ್‌ಐ ಗುರುರಾಜ ಚಿಂತಾಕಲ, ಸಿಬ್ಬಂದಿ ವರ್ಗದವರಾದ ರೈಟರ್ ಮಹೇಂದ್ರಪ್ರಸಾದ್, ಮುಖ್ಯಪೇದೆಗಳಾದ ಮುರುಳಿ, ಶ್ರೀನಿವಾಸ್, ಗಜೇಂದ್ರ, ವೇಣು ಮುಂತಾದವರ ತಂಡವನ್ನು ರಚಿಸಲಾಯಿತು.


ರೈಟರ್ ಮಹೇಂದ್ರಪ್ರಸಾದ್


ಪಿಸಿ ಮುರುಳಿ

ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಮೇ 8ರಂದು ಸಂಜೆ 4.30 ಗಂಟೆ ಸಮಯದಲ್ಲಿ ಕೋಲಾರ-ಮುಳಬಾಗಿಲು ರಾಷ್ಟ್ರೀಯ ಹೆದ್ದಾರಿ 75 ರಸ್ತೆಯ ಕಾಂತರಾಜ ಸರ್ಕಲ್ ಬಳಿ ಆರೋಪಿ ಭಾಸ್ಕರ್‌ನನ್ನು ಪತ್ತೆಹಚ್ಚಿದ ಕ್ರೈಂ ತಂಡವು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ತಪ್ಪು ಒಪ್ಪಿಕೊಂಡಿದ್ದು, ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

☯



# ಚಿತ್ರದುರ್ಗ: ಮಗಳ ಅಡ್ಮಿಷನ್‌ಗಾಗಿ ಊರಿಗೆ ತೆರಳುತ್ತಿದ್ದ ತಂದೆಯನ್ನು ಮಾರ್ಗ ಮಧ್ಯೆ ಕೊಂದ ಅಪರಿಚಿತರು!

**ಚಿತ್ರದುರ್ಗದ ರೈಲ್ವೆ ನಿಲ್ದಾಣ ಬಳಿಯ ನಿರ್ಜನ ಪ್ರದೇಶದಲ್ಲಿ ಜೂನ್ 1ರ ರಾತ್ರಿ ವ್ಯಕ್ತಿಯ ಬರ್ಬರ ಹತ್ಯೆ ನಡೆದಿರುವಂತಹ ಘಟನೆ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಬೆಂಗಳೂರಿನ ಜಿಯೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಾಗಲಕೋಟೆ ಜಿಲ್ಲೆಯ ಇಳಕಲ್ ಮೂಲದ ಉದ್ಯೋಗಿ ಚಿತ್ರದುರ್ಗದಲ್ಲಿ ಕೊಲೆಯಾಗಿರುವುದು ಸಾಕಷ್ಟು ಅನುಮಾನಗಳಿಗೆ ಕಾರಣವಾಗಿತ್ತು. ಸದ್ಯ ಪ್ರಕರಣ ಭೇದಿಸಿರುವ ಪೊಲೀಸ್ ಇಬ್ಬರನ್ನು ಬಂಧಿಸಿದ್ದಾರೆ.**


ಕೊಲೆಯಾದ ಬಸವರಾಜ್

ಬೆಂಗಳೂರಿನಲ್ಲಿ ಜಿಯೋ ಕಂಪನಿ ಉದ್ಯೋಗಿ ಬಸ್‌ನಲ್ಲಿ ಇಳಕಲ್‌ಗೆ ತೆರಳುತ್ತಿದ್ದರು. ಆದರೆ ಮಾರ್ಗ ಮಧ್ಯೆ ಚಿತ್ರದುರ್ಗದಲ್ಲಿ ಭೀಕರ ಕೊಲೆ ಆಗಿದ್ದಾರೆ. ಮದ್ಯ ಸೇವನೆಗಾಗಿ ಬಸ್ ಇಳಿದ ವ್ಯಕ್ತಿ ದುರ್ಗದ ಇಬ್ಬರು ಅಪರಿಚಿತರಿಂದ ಹತ್ಯೆ ಆಗಿದ್ದಾರೆ. ಸದ್ಯ ಇಬ್ಬರು ಆರೋಪಿಗಳನ್ನು ಬಂಧಿಸಿದ ಖಾಕಿ ಪಡೆ ಜೈಲಿಗಟ್ಟಿದ್ದಾರೆ. ಹಾಗಾದರೆ ಅಸಲಿಗೆ ಅಲ್ಲಿ ಆಗಿದ್ದಾದರೂ ಏನು ಎಂಬ ಪ್ರಶ್ನೆಗೆ ಉತ್ತರ ಮುಂದೆ ಇದೆ ಓದಿ.

ನಗರದ ರೈಲ್ವೆ ನಿಲ್ದಾಣ ಬಳಿಯ ನಿರ್ಜನ ಪ್ರದೇಶದಲ್ಲಿ ಜೂನ್ 1ರ ರಾತ್ರಿ ವ್ಯಕ್ತಿಯ ಬರ್ಬರ ಹತ್ಯೆ ನಡೆದು ಹೋಗಿತ್ತು. ಮೈಮೇಲೆ ಬಟ್ಟೆಗಳು ಸಹ ಇಲ್ಲದ ಸ್ಥಿತಿಯಲ್ಲಿ ಶವ ಪತ್ತೆ ಆಗಿತ್ತು. ಮೃತದೇಹದ ಗುರುತು ಹಚ್ಚುವುದೇ ಪೊಲೀಸರಿಗೆ ಸವಾಲಾಗಿ ಪರಿಣಮಿಸಿತ್ತು. ಶವದ ಆಸುಪಾಸಿನಲ್ಲಿ ಪರಿಶೀಲನೆ ನಡೆಸಿದಾಗ ಮೃತ ವ್ಯಕ್ತಿಯ ಐಡಿ ಪತ್ತೆ ಆಗಿತ್ತು. ಬಳಿಕ ಮೃತ ವ್ಯಕ್ತಿ ಬೆಂಗಳೂರಿನಲ್ಲಿ ಜಿಯೋ ಕಂಪನಿ ಉದ್ಯೋಗಿ, ಬಾಗಲಕೋಟೆಯ ಇಳಕಲ್ ಮೂಲದ ಬಸವರಾಜ ಎಂಬುವುದು ಗೊತ್ತಾಗಿತ್ತು.

ಬೆಂಗಳೂರಿನ ಜಿಯೋ ಕಂಪನಿ ಉದ್ಯೋಗಿ ಬಸವರಾಜ ಇಲ್ಲಿಗೆ ಏಕೆ ಬಂದು ಕೊಲೆಯಾದರು ಎಂಬುದೇ ಪೊಲೀಸರಿಗೆ ಮತ್ತೊಂದು ತಲೆನೋವಾಗಿ ಪರಿಣಮಿಸಿತ್ತು. ಬಾಗಲಕೋಟೆ ಜಿಲ್ಲೆಯ ಇಳಕಲ್ ಮೂಲದ ಬಸವರಾಜ, ಬೆಂಗಳೂರಲ್ಲಿ ಇಂಜಿನಿಯರ್ ಕೆಲಸ ಮಾಡುತ್ತಿದ್ದರು. ಆಗಾಗ ಬಸ್ ಮೂಲಕ ಊರಿಗೆ ತೆರಳುತ್ತಿದ್ದರು. ಪತ್ನಿ ಮತ್ತು ಓರ್ವ ಪುತ್ರ, ಓರ್ವ ಪುತ್ರಿ ಇಳಕಲ್‌ನಲ್ಲೇ ವಾಸವಾಗಿದ್ದಾರೆ. ಪುತ್ರಿಯ ಶಾಲಾ ಅಡ್ಮಿಷನ್‌ಗಾಗಿ ಊರಿಗೆ ತೆರಳುತ್ತಿದ್ದರು ಎಂಬ ಮಾಹಿತಿ ಕುಟುಂಬದಿಂದ ಪೊಲೀಸಿರಿಗೆ ಸಿಕ್ಕಿದೆ.

### ಕುಡಿತದ ಚಟವೇ ಸಾವಿಗೆ ಕಾರಣವಾಯ್ತಾ?

ಬಸವರಾಜ್ ಜಗಳಗಂಟನಲ್ಲ, ಯಾರೊಂದಿಗೂ ದ್ವೇಷ ಕಟ್ಟಿಕೊಂಡವನಲ್ಲ, ಅಕ್ರಮ ಸಂಬಂಧಗಳು, ಹಣದ ವ್ಯವಹಾರ ಯಾವುದೂ ಇಲ್ಲ ಎಂದು ಕುಟುಂಬಸ್ಥರು ಸ್ಪಷ್ಟವಾಗಿ ಹೇಳಿದ್ದರು. ಆದರೆ ಬಸವರಾಜನಿಗೆ ಕುಡಿಯುವ ಚಟವಿತ್ತು ಎಂಬಂಶ ತಿಳಿದಾಗಲೇ ಪೊಲೀಸರಿಗೆ ಕೊಲೆ ಮೂಲ ಹುಡುಕಲು ಸುಳಿವು ಸಿಕ್ಕಿತ್ತು.

ಬೆಂಗಳೂರಿನಿಂದ ಹೊರಟಿದ್ದ ಬಸವರಾಜ್ ಬಸ್ ನಿಲ್ಲಿಸಿದ ಊರುಗಳಲ್ಲಿ ಇಳಿದು ಬಾರ್‌ಗೆ ತೆರಳಿ ಕುಡಿದಿದ್ದಾರೆ.

ಅಂತೆಯೇ ಚಿತ್ರದುರ್ಗದಲ್ಲಿ ಇಳಿದಿದ್ದು, ಬಸ್ ನಿಲ್ದಾಣದ ಎದುರಿಗಿನ ಬಾರ್‌ಗೆ ತೆರಳಿ ಕುಡಿಯಲು ಕುಳಿತಿದ್ದಾರೆ. ತನ್ನ ಪಾಡಿಗೆ ತಾನು ಕುಡಿದು, ಸ್ನ್ಯಾಕ್ಸ್ ತಿನ್ನುತ್ತ ಎಂಜಾಯ್ ಮಾಡುತ್ತಿದ್ದರು. ಬಸವರಾಜ್ ಹಣವಂತನಾಗಿದ್ದು, ಏಕಾಂಗಿಯಾಗಿ ಕುಳಿತು ಕುಡಿಯುವುದನ್ನು ಗಮನಿಸಿದ ಚಿತ್ರದುರ್ಗದ ಅಗಸನಕಲ್ಲು ಬಡಾವಣೆಯ ವಿಜಯ್ ಮತ್ತು ರಹೀಂ ಬಸವರಾಜನ ಟೇಬಲ್‌ಗೆ ಹೋಗಿ ಕುಳಿತುಕೊಳ್ಳುತ್ತಾರೆ. ಪರಿಚಯ ಮಾಡಿಕೊಂಡು ಫ್ರೆಂಡ್ಲಿಯಾಗಿ ನಡೆದುಕೊಂಡು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ.

ಬಸವರಾಜ್ ಸಹ ಕುಡಿಯಲು ಕಂಪನಿ ಸಿಕ್ಕಿತೆಂದು ಅದೂ ಇದು ಮಾತನಾಡುತ್ತ ನಶೆಯಲ್ಲಿ ತೇಲ ತೊಡಗಿದ್ದನು. ಮಾತು ಮಾತಿನಲ್ಲೇ ವಿಜಯ್ ಮತ್ತು ರಹೀಂ ಸೇರಿ ಬಸವರಾಜ್‌ಗೆ ಹೊರಗಡೆ ಹೋಗಿ ಕುಳಿತು ಹಾಯಾಗಿ ಕುಡಿಯೋಣ ಎಂದು ಪುಸಲಾಯಿಸಿ ಕರೆದೊಯ್ದರು. ಚಿತ್ರದುರ್ಗದ ರೈಲ್ವೆ ಸ್ಟೇಷನ್ ಬಳಿಗೆ ಕರೆದೊಯ್ದು ಬಸವರಾಜನ ಹಣದಲ್ಲೇ ಕೊಂಡೊಯ್ದ ಮದ್ಯವನ್ನು ಭರ್ತಿ ಸೇವಿಸಿದ್ದಾರೆ. ಬಳಿಕ ಬಸವರಾಜ ಅಲ್ಲಿಂದ ಹೊರಟಾಗ ಮತ್ತೆ ಮದ್ಯ ಕೊಡಿಸು ಎಂದು ಗಲಾಟೆ ತೆಗೆದಿದ್ದಾರೆ. ಹಣಕ್ಕಾಗಿ ಬೇಡಿಕೆಯಿಟ್ಟು ಗಲಾಟೆ ಮಾಡಿದ್ದಲ್ಲದೇ ಬಟ್ಟೆಯನ್ನು ಹರಿದು ಹಾಕಿದ್ದು, ಈ ವೇಳೆ ಕೆಳಗೆ ಬಿದ್ದ ಬಸವರಾಜ್ ತಲೆ ಮೇಲೆ ಇಟ್ಟಿಗೆ ಹಾಕಿ ಹತ್ಯೆ ಮಾಡಿದ್ದಾರೆ.


ಆರೋಪಿಗಳಾದ ರಹೀಂ ಹಾಗೂ ವಿಜಯ್

### ಇಬ್ಬರ ಬಂಧನ

ಮೃತ ಬಸವರಾಜ ಮದ್ಯ ವ್ಯಸನಿ ಆಗಿದ್ದನೆಂಬ ಮಾಹಿತಿ ಆಧರಿಸಿ ಸಿಪಿಐ ಉಮೇಶ್ ತಂಡ ತನಿಖೆಗಿಳಿದಿದ್ದೇ ತಡ ಪ್ರಕರಣ ಬಯಲಾಗಿದೆ. ಪೊಲೀಸರು ಚಿತ್ರದುರ್ಗದ ಬಸ್ ನಿಲ್ದಾಣ ಎದುರಿನ ಬಾರ್‌ನ ಸಿಸಿಟಿವಿ ಚೆಕ್ ಮಾಡಿದಾಗ ಬಸವರಾಜ್‌ನನ್ನು ರಹೀಂ ಮತ್ತು ವಿಜಯ್ ಜತೆಗೆ ಕರೆದೊಯ್ದ ವಿಡಿಯೋ ಸಿಕ್ಕಿದೆ. ತಕ್ಷಣಕ್ಕೆ ಇಬ್ಬರೂ ಆರೋಪಿಗಳನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆರೋಪಿಗಳು ಸತ್ಯ ಬಾಯಿ ಬಿಟ್ಟಿದ್ದಾರೆ.

ಕೇವಲ ಮದ್ಯ ಸೇವನೆ ಮಾತ್ರ ಅಲ್ಲದೆ ಗಾಂಜಾ ಸಹ ಸೇವಿಸಿರುವ, ಅದೇ ಅಮಲಿನಲ್ಲೇ ಭೀಕರ ಹತ್ಯೆ ಮಾಡಿದ್ದಾರೆಂಬ ಅನುಮಾನಗಳು ಹೆಚ್ಚಿವೆ. ಪೊಲೀಸರು ಆರೋಪಿಗಳನ್ನು ಬಂಧಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಮಗಳ ಅಡ್ಮಿಷನ್‌ಗಾಗಿ ಊರಿಗೆ ತೆರಳುತ್ತಿದ್ದ ಬಸವರಾಜ್ ಕುಡಿಯುವ ದುಶ್ಚಟದಿಂದ ದುರ್ಗದಲ್ಲಿ ಇಳಿದು ಗುರುತು ಪರಿಚಯವಿಲ್ಲದ ದುರುಳರ ಜತೆ ಸಹವಾಸ ಮಾಡಿ ಜೀವ ಕಳೆದುಕೊಂಡಂತಾಗಿದೆ. ನಗರದ ಕೋಟೆ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ. ಇಬ್ಬರು ಆರೋಪಿಗಳನ್ನು ಬಂಧಿಸಿದ ಖಾಕಿ ಪಡೆ ಜೈಲಿಗಟ್ಟಿದೆ. ಇತ್ತ ಬಸವರಾಜ್‌ರನ್ನು ಕಳೆದುಕೊಂಡ ಕುಟುಂಬ ಕಂಗಾಲಾಗಿದೆ. ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಲಿ ಎಂದು ಸಂಬಂಧಿಕರು ಆಗ್ರಹಿಸಿದ್ದಾರೆ.

☯

# ಭಾರತಕ್ಕೆ ಬಾಂಗ್ಲಾ-ನೇಪಾಳಿ ಹುಡ್ಗೀರ್ ಬರೋದ್ಯಾಕೆ?

**ಬಾಂಗ್ಲಾ ಮತ್ತು ನೇಪಾಳದಿಂದ ಬಂದ ಹೆಣ್ಣು ಮಕ್ಕಳು ರಾಜ್ಯದ ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಪ್ರದೇಶದ ವೇಶ್ಯಾವಾಟಿಕೆಯ ಅಡ್ಡೆಯಲ್ಲಿ ಸಿಗುತ್ತಿದ್ದಾರೆ ಎನ್ನುವುದಾದರೆ ಇವರನ್ನು ಕರೆತರುತ್ತಿರುವವರು ಯಾರು? ಎಂಬ ಪ್ರಶ್ನೆ ಜತೆಗೆ ಆಂತರಿಕ ಭದ್ರತೆಯ ಭಯವೂ ಹುಟ್ಟಿಕೊಳ್ಳುತ್ತಿದೆ. ಯಾವುದೇ ದಾಖಲೆಗಳಿಲ್ಲದೆ, ದೇಶದ ಗಡಿಯನ್ನು ದಾಟಿ ಬಂದು ವೇಶ್ಯಾವಾಟಿಕೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಹೇಗೆ?**

✍ ಬಿ.ಎಂ. ಲವಕುಮಾರ್



ಇವತ್ತು ವೇಶ್ಯಾವಾಟಿಕೆಯ ಜಾಲ ದೊಡ್ಡ ಮಟ್ಟದಲ್ಲಿ ವ್ಯಾಪಿಸಿದೆ. ಈ ಜಾಲದಲ್ಲಿ ಸ್ಥಳೀಯ ಹೆಣ್ಣುಮಕ್ಕಳು ಸಿಕ್ಕಿಹಾಕಿಕೊಂಡು ಒದ್ದಾಡುತ್ತಿರುವುದು ಒಂದೆಡೆಯಾದರೆ ದೂರದ ಬಾಂಗ್ಲಾ ಮತ್ತು ನೇಪಾಳಗಳಿಂದ ಹೆಣ್ಣು ಮಕ್ಕಳನ್ನು ಕರೆತಂದು ಅವರನ್ನು ಅನೈತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಆತಂಕಕಾರಿಯಾಗಿದೆ.



ಮಜಾಜ್ ಸೆಂಟರ್‌ಗಳಲ್ಲಿ ನೇಪಾಳ ಮತ್ತು ಬಾಂಗ್ಲಾದ ಹೆಣ್ಣು ಮಕ್ಕಳೇ ಹೆಚ್ಚು ಕಾಣಸಿಗುತ್ತಿದ್ದಾರೆ. ಅವರನ್ನು ಹೇಗೆ ಬೇಕಾದರೂ ಬಳಸಿಕೊಳ್ಳುತ್ತಿದ್ದು, ಈ ಹೆಣ್ಣು ಮಕ್ಕಳು ಅಷ್ಟು ಸುಲಭವಾಗಿ ದೇಶದ ಗಡಿ ದಾಟಿ ರಾಜ್ಯಗಳಿಗೆ ಬರುತ್ತಿರುವುದು ಹೇಗೆ? ಇವರನ್ನು ಕರೆತರುತ್ತಿರುವವರು ಯಾರು? ತನಿಖೆಗಳು ನಡೆಯಬೇಕಿದೆ.

ಈಗಾಗಲೇ ದೇಶದಲ್ಲಿ ದೇಶದ್ರೋಹದ ಕೆಲಸಗಳನ್ನು ಮಾಡುತ್ತಿರುವವರನ್ನು ರಾಷ್ಟ್ರೀಯ ಭದ್ರತಾ ಸಂಸ್ಥೆ ಹುಡುಕಿ ಹುಡುಕಿ ಹೊಡೆಯುತ್ತಿದೆ. ಇಲ್ಲಿದ್ದುಕೊಂಡೇ ಪಾಕಿಸ್ತಾನಕ್ಕೆ ಮಾಹಿತಿ ರವಾನಿಸುತ್ತಿದ್ದವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದೆ. ಹಾಗಾದರೆ ಭಾರತಕ್ಕೆ ಮಾರಕವಾಗಿರುವ ಬಾಂಗ್ಲಾ ಪ್ರಜೆಗಳು ಮತ್ತು ವೇಶ್ಯಾವಾಟಿಕೆಗೆ ರವಾನೆಯಾಗುತ್ತಿರುವ ಹೆಣ್ಣು ಮಕ್ಕಳನ್ನು ಪತ್ತೆ ಹಚ್ಚುವ ಕೆಲಸವೂ ನಡೆಯ ಬೇಕಿದೆ.

ಭಾರತದಲ್ಲಿ ವೇಶ್ಯಾವಾಟಿಕೆಯನ್ನು ತಡೆಗಟ್ಟುವುದು ಸಾಧ್ಯವಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಇದರ ಹಿಂದೆ ದೇಶ, ವಿದೇಶಗಳ ಜಾಲಗಳು ಕೆಲಸ ಮಾಡುತ್ತಿವೆ. ನಮಗೆ ಯಾವತ್ತೋ ಒಂದು ದಿನ ಹೋಟೆಲ್, ಮಸಾಜ್ ಪಾರ್ಲರ್ ಮುಂತಾದ ಕಡೆಗಳಲ್ಲಿ ಪೊಲೀಸರು ದಾಳಿ ಮಾಡುವುದು, ಒಂದಷ್ಟು ಹೆಣ್ಣು ಮಕ್ಕಳನ್ನು ರಕ್ಷಣೆ ಮತ್ತೊಂದಷ್ಟು ಮಂದಿಯ ಬಂಧನದ ಸುದ್ದಿಯಷ್ಟೇ ಗೊತ್ತಾಗುತ್ತದೆ. ಅದರಾಚೆಗಿನ ಜಾಲಗಳ ಬಗ್ಗೆ ಗೊತ್ತೇ ಆಗುವುದಿಲ್ಲ.



ವೇಶ್ಯಾವಾಟಿಕೆಯಾಚೆಗೂ ಹತ್ತು ಹಲವು ದುಷ್ಟಶಕ್ತಿಗಳು ಕೆಲಸ ಮಾಡುತ್ತವೆ. ಅವು ಹೆಣ್ಣುಮಕ್ಕಳನ್ನು ಪುಸಲಾಯಿಸಿ ವೇಶ್ಯಾವಾಟಿಕೆಗೆ ಕರೆತರುವುದು, ಊರಿಂದ ಊರಿಗೆ, ರಾಜ್ಯದಿಂದ ರಾಜ್ಯಕ್ಕೆ ಹೆಣ್ಣು ಮಕ್ಕಳನ್ನು ಸಾಗಿಸುವುದು, ಕಮೀಷನ್ ವ್ಯವಹಾರಗಳು ಹೀಗೆ ನಡೆಯುತ್ತಲೇ ಇರುತ್ತವೆ. ಈ ದಂಧೆಯಲ್ಲಿ ಪುರುಷರು ಮತ್ತು ಮಹಿಳೆಯರು ಮೇಲ್ಮಟ್ಟದಲ್ಲಿ ಕೆಲಸ ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

ಪೊಲೀಸರ ಮತ್ತು ಜನರ ಕಣ್ಣಿಗೆ ಮಣ್ಣೆರಚುವ ಸಲುವಾಗಿ ಬೇರೆ, ಬೇರೆ ರೀತಿಯ ವೇಷಗಳು, ವ್ಯವಹಾರಗಳು ಇಲ್ಲಿ ನಡೆಯುತ್ತಿವೆ. ಮೇಲ್ನೋಟಕ್ಕೆ ಏನು ಕಾಣಿಸದೆ ಹೋದರೂ ಇದರ ಆಳ ಮಾತ್ರ ಪಾತಾಳಕ್ಕೆ ತಲುಪಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಬೇರು ಮಟ್ಟದಿಂದಲೇ ಕಿತ್ತು ಹಾಕುವ ಕೆಲಸಗಳು ನಡೆಯದ ಕಾರಣದಿಂದಾಗಿ ದಂಧೆ ರಾಜಾರೋಷವಾಗಿ ನಡೆಯುತ್ತಿದೆ.

ಬಾಂಗ್ಲಾ ಮತ್ತು ನೇಪಾಳದಿಂದ ಕೇವಲ ಹೆಣ್ಣು ಮಕ್ಕಳು ಮಾತ್ರ ಬರುತ್ತಿಲ್ಲ ಗಂಡಸರೂ ಬರುತ್ತಿದ್ದಾರೆ. ಅವರೆಷ್ಟು ಡೇಂಜರ್ ಎನ್ನುವುದು ಇತ್ತೀಚೆಗಿನ ದಿನಗಳಲ್ಲಿ ಮರ್ಡರ್ ಮಾಡಿ ಚಿನ್ನಾಭರಣ ದೋಚಿದ ಪ್ರಕರಣಗಳಿಂದ ಗೊತ್ತಾಗುತ್ತಿದೆ.

ಬಾಂಗ್ಲಾ ಯುವತಿಯರನ್ನು ಅಕ್ರಮವಾಗಿ ಗಡಿ ದಾಟಿಸಿ ಬಳಿಕ ದೇಶದಾದ್ಯಂತ ಅವರನ್ನು ಲಾಡ್ಜ್‌ಗಳಿಗೆ, ರೆಸಾರ್ಟ್‌ಗಳಿಗೆ, ಬಾಡಿ ಮಸಾಜ್, ಸ್ಪಾ ಸೆಂಟರ್ ಗಳಿಗೆ, ಮಾಂಸದ ಮನೆಗಳಿಗೆ ಹೀಗೆ ಹಲವು ಸ್ಥಳಗಳಿಗೆ ಸರಬರಾಜು ಮಾಡಲಾಗುತ್ತಿದೆ. ಕೆಲವೊಮ್ಮೆ ವೇಶ್ಯಾವಾಟಿಕೆ ದಂಧೆಯಲ್ಲಿ ಪೊಲೀಸರು ದಾಳಿ ಮಾಡಿದಾಗಲೆಲ್ಲ ಬಾಂಗ್ಲಾದ ಯುವತಿಯರೇ ಹೆಚ್ಚು ಹೆಚ್ಚು ಸಿಕ್ಕಿ ಬೀಳುತ್ತಾರೆ. ಏಕೆ ಹೀಗೆ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಇಷ್ಟಕ್ಕೂ ಅಷ್ಟು ಸುಲಭವಾಗಿ ಅವರನ್ನು ಕರೆತಂದು ಬಳಿಕ ಮಾರಾಟ ಮಾಡಿ ತಾವು ಹಣ ಮಾಡಿಕೊಳ್ಳಲು ದೊಡ್ಡ ಮಟ್ಟದ ಜಾಲಗಳೇ ಇವೆ. ಈ ಜಾಲದಲ್ಲಿ ಸಿಕ್ಕಿ ಬೀಳುವ ಹೆಣ್ಣು ಮಕ್ಕಳು ಆ ಪಾಪ ಕೂಪದಿಂದ ಹೊರಬರಲಾಗದೆ, ಮದ್ಯಪಾನ, ಧೂಮಪಾನ, ಡ್ರಗ್ಸ್ ಮುಂತಾದ ಚಟಗಳಿಗೆ ಬಲಿಯಾಗಿ ಬದುಕನ್ನೇ ಕಳೆದುಕೊಳ್ಳುತ್ತಾರೆ.



ಇದೆಲ್ಲದಕ್ಕಿಂತ ಹೆಚ್ಚಾಗಿ ವೇಶ್ಯಾವಾಟಿಕೆ ಹೊರತು ಪಡಿಸಿ ಬೇರೆ ಯಾವುದನ್ನೂ ಮಾಡಲಾರದ ಪರಿಸ್ಥಿತಿಗೆ ಆ ಹೆಣ್ಣುಮಕ್ಕಳು ಬಂದು ತಲುಪಿ ಬಿಡುತ್ತಾರೆ. ಹೀಗಾಗಿ ತಮ್ಮ ಒತ್ತಡ ತಣಿಯಲು, ಮಾನಸಿಕ ನೆಮ್ಮದಿಗಾಗಿ ಮದ್ಯಪಾನ, ಡ್ರಗ್ಸ್‌ಗೆ ಮೊರೆ ಹೋಗಿ ಬಿಡುತ್ತಾರೆ. ಕೆಲವೊಮ್ಮೆ ಇವರು ದಂಧೆಯಲ್ಲಿ ತೊಡಗಿದಾಗ ಸಿಕ್ಕಿಬಿದ್ದರೂ ಫೈನ್ ಕಟ್ಟಿ ಅವರನ್ನು ಬಿಡಿಸಿಕೊಂಡು ಹೋಗಲೂ ವ್ಯವಸ್ಥೆಗಳಿದ್ದು, ಮತ್ತೆ ಅವರಿಂದ ಅದೇ ದಂಧೆ ಮಾಡಿಸುತ್ತಾರೆ.

ಇನ್ನೊಂದೆಡೆ ಬಡ ಹಾಗೂ ಸುಂದರವಾಗಿರುವ ಹೆಣ್ಣು ಮಕ್ಕಳಿಗೆ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಕರೆತಂದು ಬಳಿಕ ವಿಟಪುರುಷರ



ಹಾಸಿಗೆಗೆ ಕಳುಹಿಸುವ ಪ್ರಕರಣಗಳು ಕೂಡ ನಡೆಯುತ್ತವೆ. ಒಂದೆಡೆ ಹಣದಾಸೆಗೆ ಹುಡುಗಿಯರೇ ಮೈಮಾರಲು ಮುಂದಾದರೆ, ಇನ್ನು ಕೆಲವು ತಲೆಹಿಡುಕರು ಬಡಹುಡುಗಿಯರನ್ನೇ ಟಾರ್ಗೆಟ್ ಮಾಡಿಕೊಂಡು ಕೆಲಸ ಕೊಡಿಸುವ ನೆಪದಲ್ಲಿ ಕರೆತಂದು ವೇಶ್ಯಾವಾಟಿಕೆಗೆ ನೂಕುತ್ತಿದ್ದಾರೆ.

ಬಹಳಷ್ಟು ಕಡೆಗಳಲ್ಲಿ ವೇಶ್ಯಾವಾಟಿಕೆ ನಡೆಸಲೆಂದೇ ಪಟ್ಟಣಗಳ ಹೊರವಲಯದಲ್ಲಿ ಲಾಡ್ಜ್, ರೆಸಾರ್ಟ್ ಗಳನ್ನು ನಿರ್ಮಿಸಲಾಗುತ್ತಿದ್ದು, ಇಲ್ಲಿ ಮೇಲ್ನೋಟಕ್ಕೆ ಯಾರಿಗೂ ಯಾವುದೇ ಅನುಮಾನ ಬಾರದ ವಾತಾವರಣ ನಿರ್ಮಿಸಲಾಗಿರುತ್ತದೆ..

ಯಾರಿಗೂ ಗೊತ್ತೇ ಆಗದಂತೆ ರೆಸಾರ್ಟ್ ಒಳಗೆ ರಹಸ್ಯ ಕೊಠಡಿ ಮಾಡಿ ಗೋಡೆಯಲ್ಲೊಂದು ರಂಧ್ರ ಮಾಡಿ ಅದರ ಮೂಲಕ ಕೊಠಡಿಗೆ ತೆರಳುವಂತೆ ಮಾಡಿರುತ್ತಾರೆ. ಮಾಮೂಲು ಗೋಡೆಯಲ್ಲೇ ರಹಸ್ಯ ಕೊಠಡಿಗೆ ತೆರಳಲು ಬಾಗಿಲು ಇದ್ದರೂ ಮೇಲ್ನೋಟಕ್ಕೆ ಅದು ಗೊತ್ತಾಗದಂತೆ ಮುಚ್ಚಲಾಗುತ್ತದೆ. ರಹಸ್ಯ ಕೊಠಡಿಯಲ್ಲಿರುವ ಹುಡುಗಿಯರು ಗಿರಾಕಿ ಬಂದಾಗ ರೂಂಗೆ ಬರುತ್ತಾರೆ. ಒಂದು ವೇಳೆ ಪೊಲೀಸರು ದಾಳಿ ಮಾಡುವ ಸೂಚನೆ ಗೊತ್ತಾಗುತ್ತಿದ್ದಂತೆಯೇ ರಹಸ್ಯ ಕೊಠಡಿ ಸೇರಿ ಬಿಡುತ್ತಾರೆ.

ಇಂತಹ ವ್ಯವಸ್ಥಿತ ಲಾಡ್ಜ್ ಹಾಗೂ ರೆಸಾರ್ಟ್‌ಗಳು ಬೇಕಾದಷ್ಟಿದ್ದು, ಇವರಿಗೆಲ್ಲರಿಗೂ ಅನ್ನ ಹಾಕುವವರು ಅಮಾಯಕ ಹೆಣ್ಣುಮಕ್ಕಳಾಗಿದ್ದಾರೆ. ಗಿರಾಕಿ ಜೊತೆ ದೇಹ ಹಂಚಿಕೊಳ್ಳುವ ಹೆಣ್ಣು ಮಕ್ಕಳ ಸಂಪಾದನೆಯಿಂದ ಬಹಳಷ್ಟು ಜನ ಜೀವನ ಕಟ್ಟಿಕೊಳ್ಳುತ್ತಿದ್ದಾರೆ. ಹೀಗಿರುವ ರೆಸಾರ್ಟ್‌ಗಳಲ್ಲಿ ವೇಶ್ಯೆಯರನ್ನಿಟ್ಟುಕೊಂಡು ಅವರಿಗೆ ರೇಟ್ ಫಿಕ್ಸ್ ಮಾಡಿ ಹೊರಗಿನಿಂದ ಬರುವ ಗಿರಾಕಿಗಳಿಂದ ಹಣ ವಸೂಲಿ ಮಾಡುತ್ತಾರೆ ಜೊತೆಗೆ ಅವರನ್ನು ಕಳುಹಿಸಿ ಹಣ ಮಾಡುವುದರಲ್ಲಿ ಮಾಲೀಕರು ನಿಸ್ಸೀಮರಾಗಿದ್ದಾರೆ.

ಸದ್ಯ ಮೊಬೈಲ್, ಇಂಟರ್‌ನೆಟ್ ಜನಪ್ರಿಯವಾಗಿರುವ ಕಾರಣ ಗಿರಾಕಿಗಳ ಕೊರತೆ ಯಾಗುತ್ತಿಲ್ಲ.

ಇಂತಹ ರೆಸಾರ್ಟ್‌ಗಳಲ್ಲಿ ನಡೆಯುವ ಮಾಂಸದ ದಂಧೆಯನ್ನು ಪ್ರಭಾವಿಗಳೇ ನಿಯಂತ್ರಿಸುತ್ತಿದ್ದು, ಇಲ್ಲಿಗೆ ಮಜಾ ಉಡಾಯಿಸಲು ಬರುವ ಗಿರಾಕಿಗಳ ಪೈಕಿ ಹೆಚ್ಚಿನವರು ಹೊರಗಿನವರು ಆಗಿರುತ್ತಾರೆ. ಸ್ಥಳೀಯರನ್ನು ಹತ್ತಿರ ಬಿಟ್ಟುಕೊಂಡರೆ ಗುಟ್ಟುರಟ್ಟಾಗುತ್ತದೆ ಎಂಬ ಕಾರಣಕ್ಕೆ ನಿಯಂತ್ರಿಸುತ್ತಾರೆ. ಮೇಲ್ನೋಟಕ್ಕೆ ಹೈಫೈ ಇರುವುದರಿಂದ ಸಾಮಾನ್ಯ ಜನರು ಅತ್ತ ಮುಖ ಮಾಡುವುದಿಲ್ಲ. ಹೀಗಾಗಿ ದಂಧೆ ಅಡೆತಡೆಯಿಲ್ಲದೆ ಸಾಗುತ್ತಿರುತ್ತದೆ.

ಈ ರೆಸಾರ್ಟ್‌ಗಳು ಮೇಲ್ನೋಟಕ್ಕೆ ಸುಂದರವಾಗಿದ್ದು ಇಲ್ಲಿಗೆ ಪ್ರವಾಸಿಗರೇ ಬಂದು ಹೋಗುತ್ತಾರೆ ಎಂಬುದು ಎಲ್ಲರ ಆಲೋಚನೆಯಾಗಿರುತ್ತದೆ. ಆದರೆ ಕೇವಲ ದಿನಕ್ಕೆ ಒಬ್ಬರೋ ಇಬ್ಬರೋ ಬಂದರೆ ರೆಸಾರ್ಟ್ ನಡೆಸುವುದಾದರೂ ಹೇಗೆ? ಹಾಗಾಗಿ ರೆಸಾರ್ಟ್‌ನ್ನು ಪಕ್ಕಾ ಮಾಂಸದ ಮನೆಯಾಗಿ ಪರಿವರ್ತಿಸಿರುತ್ತಾರೆ. ಇಲ್ಲಿ ಯುವತಿಯರನ್ನು

☞ 12

# ಜಗಳ ಬಿಡಿಸಿ ಬುದ್ಧಿ ಹೇಳಲು ಬಂದು ಕುಡುಕ ಅಣ್ಣನಿಂದ ಹತನಾದ ನಾಗ!



**'ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ' ಎಂಬುದು ಸರ್ಕಾರದ ಘೋಷವಾಕ್ಯ ಆದರೆ ಮದ್ಯಪಾನ ಕೇವಲ ಆರೋಗ್ಯಕ್ಕೆ ಮಾತ್ರ ಹಾನಿಕಾರವಲ್ಲ 'ಪ್ರಾಣಕ್ಕೂ ಸಂಚಕಾರ' ಎಂಬುದು ಅಷ್ಟೆ ಸತ್ಯ, ಕುಡಿತದ ನಶೆಯಲ್ಲಿ ಎಷ್ಟೆಷ್ಟೋ ಕೊಲೆಗಳಾಗಿವೆ. ಅವಿವೇಕಿ ಕುಡುಕರು ಅದೆಷ್ಟೊ ಅಣ್ಣ-ತಮ್ಮ, ತಂದೆ-ತಾಯಿ, ಅಕ್ಕ-ತಂಗಿ, ಮಗ-ಮಗಳು ಅನ್ನೋ ಮಮಕಾರವಿಲ್ಲದೆ ಅತ್ಯಾಚಾರ, ಕೊಲೆ, ಸುಲಿಗೆ ಮಾಡಿ ಅಮಾಯಕ ಜೀವಗಳನ್ನು ಬಲಿ ಪಡೆದಿದ್ದಾರೆ ಎಂಬುದು ಲೆಕ್ಕವೇ ಇಲ್ಲ. ಇಲ್ಲಿ ಅಂತಹದ್ದೊಂದು ಘಟನೆ ಗತಿಸಿ ಹೋಗಿದೆ. ಇಲ್ಲಿ ಕ್ಷುಲ್ಲಕ ಕಾರಣಕ್ಕೆ ಕುಡುಕರಿಬ್ಬರ ನಡುವೆ ನಡೆಯುತ್ತಿದ್ದ ಜಗಳ ಬುದ್ಧಿ ಹೇಳಲು ಮಧ್ಯ ಬಂದ ತಮ್ಮನ ಬಲಿ ಪಡೆದಿದೆ. ಅಂದರೆ ತಮ್ಮನ ಹೆಣವನ್ನೇ ಅಣ್ಣ ಕೆಡವಿ ಹಾಕಿದ್ದಾನೆ.**



**ಚಾಮರಾಜನಗರ**
**✍ ಎಸ್. ಸ್ವಾಮಿ**

ಅಂದು 2025ರ ಮಾ. 1, ಇರಸವಾಡಿ ಗ್ರಾಮದ ಬಳಿ ಕುಡಿದ ಮತ್ತಿನಲ್ಲಿ ಕುಡುಕರಿಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳ ನಡೆದಿತ್ತು. ಇಬ್ಬರು ಪರಸ್ಪರ ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡು ಹೊಡೆದಾಟದಲ್ಲಿ ನಿರತರಾಗಿದ್ದರು. ಪಕ್ಕದಲ್ಲಿಯೇ ಇದ್ದ ತಮ್ಮ ಇತರೊಡನೆ ಜಗಳ ಬಿಡಿಸಿ ಅಣ್ಣನನ್ನು ಮನೆಗೆ ತೆರಳುವಂತೆ ಬುದ್ಧಿವಾದ ಹೇಳಲು ಮುಂದಾಗಿದ್ದಾನೆ. ಈ ವೇಳೆ ಕುಡಿದ ಮತ್ತಿನಲ್ಲಿದ್ದ ಅಣ್ಣ ಅವನ ಕೈಯಲ್ಲಿ ಕೆಟ್ಟದಾಗಿ ಬೈಸ್ಕೊಬೇಕಾ ಎಂದು ರೊಚ್ಚಿಗೆದ್ದು ತಮ್ಮನ ವಿರುದ್ಧವೇ ತಿರುಗಿ ಬಿದ್ದು ಏಕಾಏಕಿ ಆತನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದ ತಮ್ಮ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಕೂಡಲೇ ಕಾರ್ಯಪ್ರವೃತ್ತರಾದ ಯಳಂದೂರು ಠಾಣೆ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರ ನೇತೃತ್ವದ ತಂಡ ತಮ್ಮನ ಸಾವಿಗೆ ಕಾರಣನಾದ ಅವಿವೇಕಿ ಅಣ್ಣನನ್ನು ಜೈಲು ಸೇರಿಸಲು ಯಶಸ್ವಿಯಾಗಿದ್ದಾರೆ.

ಚಾಮರಾಜನಗರ ತಾಲ್ಲೂಕಿನ ಇರಸವಾಡಿ ಗ್ರಾಮದ ಕೃಷ್ಣಶೆಟ್ಟಿಯ ಕಿರಿಯ ಮಗ ನಾಗಯ್ಯ(35) ಕೊಲೆಯಾದಾತ. ಆತನ ಅಣ್ಣನೇ ಕ್ಷಲ್ಲಕ ವಿಚಾರಕ್ಕೆ ಒಡಹುಟ್ಟಿದ ತಮ್ಮನನ್ನೇ ನಿಕೃಷ್ಟವಾಗಿ ಹೊಡೆದು ಕೊಲೆ ಮಾಡಿ ಈಗ ಜೈಲು ಸೇರಿರುವ ಪಾಪಿ.



ಡಿವೈಎಸ್ಪಿ ಧರ್ಮೇಂದ್ರ

ಚಾಮರಾಜನಗರ ತಾಲ್ಲೂಕಿನ ಇರಸವಾಡಿ ಗ್ರಾಮದ ಉಪ್ಪಾರ ಜನಾಂಗದ ಬೀದಿಯಲ್ಲಿರುವ ಕೃಷ್ಣಶೆಟ್ಟಿಗೆ ಒಟ್ಟು ಮೂವರು ಮಕ್ಕಳು ಮೊದಲನೆಯವನು ಸಿದ್ದರಾಜು, ಎರಡನೆಯವನು ತಮ್ಮನನ್ನೆ ಕೊಂದ ಹಂತಕ ಆರೋಪಿ ಮಹೇಶ ಮಾದೇಶ ಬದಿರಂಗ, ಮೂರನೆಯವನು ಅಣ್ಣನಿಂದಲೆ ಕ್ಷುಲ್ಲಕ ವಿಚಾರಕ್ಕೆ ನಿಕೃಷ್ಟವಾಗಿ ಕೊಲೆಯಾದ ಮೃತ ನಾಗಯ್ಯ. ಹಿರಿಯ ಮಗ ಸಿದ್ದರಾಜು ಪಾಳ್ಯ ಗ್ರಾಮದ ರಾಜಮ್ಮ ಎಂಬುವವರನ್ನು ಮದುವೆಯಾಗಿದ್ದು ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಎರಡನೆಯ ಮಗ ಆರೋಪಿ ಮಹೇಶ ಮಾದೇಶ ಓದುಬರಹ ಇಲ್ಲದವ ಕೂಲಿ ಕೆಲಸದ ಜೊತೆಗೆ ತೆಂಗಿನ ಮರ ಹತ್ತಿ ಎಳನೀರು ಕೀಳುವ ಕೂಲಿ ಕೆಲಸವನ್ನೂ ಮಾಡಿಕೊಂಡಿದ್ದ. ಈಗ್ಗೆ 14-15 ವರ್ಷದ ಹಿಂದೆ ಹೊಂಗನೂರು ಗ್ರಾಮದ ಸಿದ್ದಶೆಟ್ಟಿಯ ಮಗಳಾದ ಮಹದೇವಮ್ಮ ಎಂಬುವವಳನ್ನು ಮದುವೆಯಾಗಿದ್ದು 12 ವರ್ಷದ ಸಿಂಧು ಹಾಗೂ 8 ವರ್ಷದ ಸಿಂಚನ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕಿರಿಯವನು ಮೃತ ನಾಗಯ್ಯ(35) ಉಪ್ಪಿನಮೋಳೆ ಗ್ರಾಮದ ಮಂಗಳ ಎಂಬುವವಳನ್ನು ಮದುವೆಯಾಗಿದ್ದು ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

ಆರೋಪಿ ಮಹೇಶ ಮದುವೆಯಾದ ನಂತರದ ದಿನಗಳಿಂದಲೂ ವಿಪರೀತ ಮದ್ಯ ಪಾನ ಮಾಡುವ ಚಟ ಮೈಗೂಡಿಸಿಕೊಂಡಿದ್ದ. ಕೂಲಿ ಮಾಡಿದ ಹಣವನ್ನೆಲ್ಲಾ ಕುಡಿಯಲು ಬಳಸಿಕೊಳ್ಳುತ್ತಿದ್ದ. ಮನೆಯವರಿಗೆ ನಯಾ ಪೈಸೆ ನೀಡುತ್ತಿರಲಿಲ್ಲ. ಕೆಲವೊಮ್ಮೆ ಕುಡಿಯಲು ಹಣಕಾಸು ಸಿಗದಿದ್ದಾಗ ಯಾರದಾದರೂ ತೋಟದಲ್ಲಿ ಎಳನೀರು ಅಥವಾ ತೆಂಗಿನ ಕಾಯಿಯನ್ನು ಕದ್ದು ಕಿತ್ತು ತಂದು ಯಾರಿಗಾದರೂ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಕುಡಿದು ಚಟ ತೀರಿಸಿಕೊಳ್ಳುತ್ತಿದ್ದ. ಈತನ ಜೊತೆ ಕುಡಿಯಲು ಅದೇ ಊರಿನ ಕಾಮರಾಜು ಬಿನ್ ಕುಂಡಯ್ಯ, ನಿಂಗರಾಜು ಬಿನ್ ಕುಂಚ ನಂಜುಂಡಶೆಟ್ಟಿ ಮತ್ತು ನಂಜ ಶೆಟ್ಟರವರು ಆಗಾಗ್ಗೆ ಬರುತ್ತಿದ್ದರು. ಈತ ಎಂತಹ ಕುಡುಕ ಎಂದರೆ ವಿಪರೀತ ಕುಡಿಯುತ್ತಿದ್ದರಿಂದ ಬೇಸತ್ತ ಹೆಂಡತಿಯು ಈತನನ್ನು ಬಿಟ್ಟು ತನ್ನ ಮಕ್ಕಳನ್ನು ಕರೆದುಕೊಂಡು ತನ್ನ ತವರು ಮನೆ ಹೊಂಗನೂರಿಗೆ ಹೋಗಿ ಸುಮಾರು 7-8 ವರ್ಷದಿಂದ ಅಲ್ಲಿಯೇ ಇದ್ದಳು. ಈಗ್ಗೆ 2 ವರ್ಷದ ಹಿಂದೆ ಹೆಂಡತಿಯನ್ನು ಕರೆಯಲು ಹೋದಾಗ ಆಕೆಯ ಮನೆಯವರು ಹೊಡೆದಿದ್ದು ಎಡ ರುಂಡಿಗೆ ಪೆಟ್ಟಾಗಿ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿ ರಾಡ್ ಹಾಕಿದ್ದಾರೆ. ಈಗ್ಗೆ ನಾಲ್ಕು ವರ್ಷದ ಹಿಂದೆ ತನ್ನ ಅತ್ತಿಗೆಯನ್ನು ಬೈಯ್ಯುತ್ತಿದ್ದ ವಿಚಾರವಾಗಿ ಅವರು ರಾಮಸಮುದ್ರದಲ್ಲಿರುವ ಪೊಲೀಸ್ ಸ್ಟೇಷನ್‌ಗೆ ಕಂಪ್ಲೆಂಟ್ ಕೊಟ್ಟಿದ್ದರು. ಆಗ ಪೊಲೀಸರು ಈತನನ್ನು ಕರೆದು ಬುದ್ಧಿವಾದ ಹೇಳಿ ಕಳುಹಿಸಿದ್ದರು ಅಂತಹ ಭೂಪ ಈತ.



ಎಸ್ಪಿ ಡಾ. ಬಿ.ಟಿ. ಕವಿತಾ

ಅಂದು 01-03-2025ನೇ ಶನಿವಾರ ರಾತ್ರಿ ಸುಮಾರು 9-30 ಗಂಟೆ ಸಮಯದಲ್ಲಿ ಇರಸವಾಡಿ ಗ್ರಾಮದ ಕುರುಬರ ಬೀದಿಯಲ್ಲಿರುವ ಶೇಖರ್ ಎಂಬುವವರ ಚಿಲ್ಲರೆ ಅಂಗಡಿಯ ಬಳಿ ಆರೋಪಿ ಮಹೇಶ, ಆತನ ತಮ್ಮ ನಾಗ, ಕಾಮರಾಜು, ನಿಂಗರಾಜು, ಈ ನಾಲ್ವರು ಮಾತನಾಡುತ್ತಾ ಕುಳಿತ್ತಿದ್ದರು. ಈ ವೇಳೆ ನಿಂಗರಾಜು ಮಾದೇಶನನ್ನು ಮಾತನಾಡಿಸುತ್ತಾ ಕುಡಿದ ಅಮಲಿನಲ್ಲಿ ವಡೋ (ವ್ಯಕ್ತಿಯನ್ನು ಏಕವಚನದಲ್ಲಿ ಸಂಭೋಧಿಸುವುದು) ಎಂದು ಕರೆದಿದ್ದಾನೆ. ಇದರಿಂದ ಸಿಟ್ಟಾದ ಮಾದೇಶ ನೀನು ವಯಸ್ಸಿನಲ್ಲಿ ನನಗಿಂತಲೂ ಚಿಕ್ಕವನು ನನ್ನನ್ನೇ ವಡೋ ಅಂತೀಯಲ್ಲಾ.. ಮರ್ಯಾದೆಯಿಂದ ಮಾತನಾಡು ಎಂದು ಆತನ ವಿರುದ್ಧ ಮುಗಿಬಿದ್ದಿದ್ದಾನೆ. ಈ ವಿಚಾರವಾಗಿ ಈ ಇಬ್ಬರಿಗೂ ಏರುಧ್ವನಿಯಲ್ಲಿ ಮಾತುಕತೆ ನಡೆಯುತ್ತಿತ್ತು. ಈ ವೇಳೆ ಅಲ್ಲೇ ಇದ್ದ ಆರೋಪಿಯ ತಮ್ಮ ನಾಗಯ್ಯ ಅಣ್ಣನಿಗೆ ಬುದ್ಧಿವಾದ ಹೇಳಲು ಬಂದಿದ್ದಾನೆ. ಇದರಿಂದ ಕುಪಿತಗೊಂಡ ಮಾದೇಶ ನೀನ್ಯಾರು ನನಗೆ ಬುದ್ಧಿವಾದ ಹೇಳಲು ಎಂದು ತಮ್ಮನ ವಿರುದ್ಧ ತಿರುಗಿ ಬಿದ್ದಿದ್ದಾನೆ. ಇಬ್ಬರಿಗೂ ಜಗಳವಾಗಿ ಪರಸ್ಪರ ನುಲಿದುಕೊಂಡು ಉರುಳಾಡಿದ್ದಾರೆ. ಆಗ ಅಲ್ಲಿದ್ದ ಕಾಮರಾಜು, ನಿಂಗರಾಜು, ಆಟೋ ನಾಗರವರು ಜಗಳ ಬಿಡಿಸಿದ್ದಾರೆ. ನಂತರ ಎಲ್ಲರೂ ಅಲ್ಲಿಂದ ಕದಡಿದ್ದಾರೆ. ಆಟೋ ನಾಗ ತನ್ನ ಮನೆ ಕಡೆ ಹೋದರೆ. ನಾಗಯ್ಯ ಕುರುಬರ ಬೀದಿಯ ಆರ್ಚ್ ಬಳಿ ಹೋಗಿ ಕುಳಿತಿದ್ದನು. ಆಗ ಅಲ್ಲಿಗೆ ಬಂದ ಅಣ್ಣ ಮಾದೇಶ ನೀನು ನನಗಿಂತ ಚಿಕ್ಕವನು ನನಗೇ ಬುದ್ಧಿವಾದ ಹೇಳುತ್ತೀಯ ಎಂದು ಹೇಳಿ ಕುಳಿತಿದ್ದ ತಮ್ಮನಿಗೆ ತನ್ನ ಕಾಲಿನಿಂದ ಒದ್ದಿದ್ದಾನೆ. ಆಗ ಅವನೂ ಕೂಡ ತನ್ನ ಕೈಯಿಂದ ಮಾದೇಶನ ಮೈ ಕೈಗೆ ಹೊಡೆದಿದ್ದಾನೆ. ಉಗುರಿನಿಂದ ಕುತ್ತಿಗೆಯನ್ನು ಗೀರಿ, ಕೈಯಿಂದ ಬಾಯಿಗೆ ಹೊಡೆದು ಗಲಾಟೆಯಲ್ಲಿ ಇಬ್ಬರು ಮತ್ತೆ ಉರುಳಾಡುವಾಗ ಮಾದೇಶನ ಎಡಗೈ ತೋಳಿಗೆ ಗಾಯವಾಗಿದೆ. ಇದರಿಂದ ಕುಪಿತನಾದ ಅಣ್ಣ ಮಾದೇಶ ನಾಗಯ್ಯನ ಮರ್ಮಾಂಗ ಹಾಗೂ ಇತರೆ ಕಡೆ ಕಾಲಿನಿಂದ ಒದ್ದು ಅವನನ್ನು ಕೆಳಗಡೆ ಕೆಡವಿಕೊಂಡು ಎದೆಯ ಮೇಲೆ ಕುಳಿತುಕೊಂಡು ಕೈಯಿಂದ ಮನಸೋ ಇಚ್ಛೆ ಹೊಡೆದಿದ್ದಾನೆ. ಆತನ ಬಾಯಿಗೆ ಹೊಡೆದಾಗ ಅವನ ನಾಲಿಗೆಗೆ ಏಟಾಗಿ ರಕ್ತ ಬಂದು ಪ್ರಜ್ಞೆತಪ್ಪಿ ಬಿದ್ದಿದ್ದಾನೆ. ಅಷ್ಟೊತ್ತಿಗೆ ವಿಚಾರ ತಿಳಿದು ತಂದೆ-ತಾಯಿ, ಅಣ್ಣ ಓಡೋಡಿ ಬಂದಿದ್ದಾರೆ. ಅವರು ಬರುವುದನ್ನು ನೋಡಿದ ಮಾದೇಶ ಕೂಡಲೆ ಅಲ್ಲಿಂದ ಪೇರಿಕಿತ್ತಿದ್ದಾನೆ.



ಸಿಪಿಐ ಶ್ರೀಕಾಂತ್

ಈತನಿಂದ ಹಲ್ಲೆಗೊಳಗಾಗಿ ಗಂಭೀರವಾಗಿ ಗಾಯಗೊಂಡು ಪ್ರಜ್ಞೆತಪ್ಪಿ ಬಿದ್ದಿದ್ದನಾಗಯ್ಯನನ್ನು ನೋಡಿ ಆತಂಕಕ್ಕೊಳಗಾದ ಸಂಬಂಧಿಕರು ಕೂಡಲೆ 108 ಆಂಬುಲೆನ್ಸ್‌ನಲ್ಲಿ ಯಳಂದೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ರಾತ್ರಿ 11-00 ಗಂಟೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಚಿಕಿತ್ಸೆ ನೀಡಿದ ನಂತರ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದಾಗ ಅಲ್ಲಿ ಚಿಕಿತ್ಸೆ ನೀಡಿದ ವೈದ್ಯರು ಸಹ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆತಂದು ದಾಖಲಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಾಗಯ್ಯ ಮಾ.3ರಂದು ಬೆಳಗಿನ ಜಾವ 6. 45 ರ ಸಮಯದಲ್ಲಿ ಮೃತಪಟ್ಟಿದ್ದಾನೆ.

ಈ ಸಂಬಂಧ ಮೃತನ ಪತ್ನಿಯ ಚಿಕ್ಕಪ್ಪ ಉಪ್ಪಿನ ಮೋಳೆ ಗ್ರಾಮದ ಗೋವಿಂದ ಎಂಬುವವರು ಮಾ. 3ರಂದು ಬೆಳಿಗ್ಗೆ 10.45ರ ಸಮಯದಲ್ಲಿ ಯಳಂದೂರು ಠಾಣೆಗೆ ದೂರು ನೀಡುತ್ತಾರೆ. ಪಿರ್ಯಾದು ಗೋವಿಂದರವರು ಕೊಟ್ಟ ದೂರಿನ ಮೇರೆಗೆ ಪೊಲೀಸರು ಠಾಣಾ ಮೊಕದ್ದಮೆ ಸಂಖ್ಯೆ 41/2025 ಬಿಎನ್‌ಎಸ್ ಕಾಯ್ದೆ 2023 (ಯು/ಎಸ್ 103 (1)) ರಡಿ ಪ್ರಕರಣ ದಾಖಲಿಸಿಕೊಳ್ಳುತ್ತಾರೆ. ಕೂಡಲೇ ಕಾರ್ಯಪ್ರವೃತ್ತರಾದ ಯಳಂದೂರು ಠಾಣೆ ವೃತ್ತ ನಿರೀಕ್ಷಕರಾದ ಶ್ರೀಕಾಂತ್ ರವರು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತರವರ ಮಾರ್ಗದರ್ಶನದಲ್ಲಿ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರರವರ ನೇತೃತ್ವದಲ್ಲಿ ಯಳಂದೂರು ಠಾಣೆ ಪಿಎಸ್‌ಐ ಹನುಮಂತ ಉಪ್ಪಾರರವರನ್ನೊಳಗೊಂಡ ಮುಖ್ಯ ಪೇದೆ ಇಲಿಯಾಸ್ ಪಾಷ, ಠಾಣೆ ಗುಪ್ತ ಮಾಹಿತಿದಾರ ಜಡೇಸ್ವಾಮಿ ಹಾಗೂ ಅಪರಾಧ ವಿಭಾಗದ ರಾಮಶೆಟ್ಟಿರವರ ತಂಡ ರಚಿಸಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯ ಪತ್ತೆಗೆ ಬಲೆ ಬೀಸುತ್ತಾರೆ.

ಅಂದು ತಮ್ಮ ನಾಗಯ್ಯನ ಮೇಲೆ ಮಾರಣಾಂತಿಕ ಹಲ್ಲೆಮಾಡಿ ಗಂಭೀರವಾಗಿ ಗಾಯಗೊಳಿಸಿ ಪ್ರಜ್ಞೆತಪ್ಪುವಂತೆ ಮಾಡಿ ಓಡಿ ಹೋಗಿದ್ದ ಮಾದೇಶ ಗ್ರಾಮದ ಭಗೀರಥ ಬೋರ್ಡ್ ಬಳಿ ಇರುವ ಶೀನ ಎಂಬುವರ ಮನೆಯ ಜಗುಲಿಯಲ್ಲಿ ಮಲಗಿಕೊಂಡಿದ್ದಾನೆ. ಮಾರನೆ ದಿನ ಬೆಳಿಗ್ಗೆ ಎದ್ದು ಚಾಮರಾಜನಗರಕ್ಕೆ ಹೋಗಿ ಅಲ್ಲಿಯೇ ಸುತ್ತಾಡಿ

☞ 12

# ಮಿಂಡನೇ ಬೇಕು ಎಂದು ಹಟ ಹಿಡಿದವಳ ಕೊಚ್ಚಿ ಕೊಂದ ಗಂಡ!

2 ☞

ಹೆಣ್ಣು ಇಬ್ಬರು ಮಕ್ಕಳಿದ್ದು ಅವರನ್ನು ಶಾಲೆಗೆ ಸೇರಿಸಲು ಆಧಾರ್ ಕಾರ್ಡ್ ಬೇಕಿತ್ತು. ಆಧಾರ್ ಸಂಖ್ಯೆಗೆ ವಿದ್ಯಾಳ ಬಳಿಯಿದ್ದ ಮೊಬೈಲ್ ಸಂಖ್ಯೆ ಲಿಂಕ್ ಮಾಡಲಾಗಿತ್ತು. ಹಾಗಾಗಿ ಆಕೆಯ ಬಳಿಯಿದ್ದ ಮೊಬೈಲ್ ವಾಪಸ್ಸು ಪಡೆಯುವ ಸಲುವಾಗಿ ಚಾಮರಾಜನಗರದ ಪಟ್ಟಣದ ಪೊಲೀಸ್ ಠಾಣೆಗೆ ಗಂಡ ಮನವಿ ಮಾಡಿದ್ದ. ಇತ್ತ ಹಾಗಾಗ ಗಿರೀಶ ಸ್ವಾಧಾರಕೇಂದ್ರದ ಬಳಿ ಹೋಗಿ ಗಲಾಟೆ ಮಾಡುತಿದ್ದರಿಂದ ವಿದ್ಯಾಳು ಸೂಕ್ತ ಬಂದೋಬಸ್ತು ಮಾಡಿಕೊಡುವಂತೆ ಪೊಲೀಸರನ್ನು ಕೇಳಿಕೊಂಡಿದ್ದಳು. ಈ ಹಿನ್ನೆಲೆಯಲ್ಲಿ ಪೊಲೀಸರು ಸೋಮವಾರಪೇಟೆಯಲ್ಲಿದ್ದ ಗಂಡ ರೀಶನನ್ನು ಹಾಗೂ ಸ್ವಾಧಾರ 'ಕೇಂದ್ರದಲ್ಲಿದ್ದ ವಿದ್ಯಾಳನ್ನು ಪಟ್ಟಣ ಠಾಣೆಗೆ ಕರೆಸಿ ಇಬ್ಬರ ಸಮಕ್ಷಮದಲ್ಲಿ ಬುದ್ಧಿವಾದ ಹೇಳಿದ್ದರು. ನಂತರ ನನ್ನ ಮೊಬೈಲ್ ವಾಪಸ್ಸು ಕೊಡಿಸಿ ಕೊಡಿ. ಮಕ್ಕಳನ್ನ ಶಾಲೆಗೆ ಕಳುಹಿಸಲು ಓಟಿಪಿ ಬರುತ್ತೆ ಎಂದು ಕೇಳಿಕೊಂಡಿದ್ದಾನೆ. ಅದರಂತೆ ಮೊಬೈಲನ್ನು ಕೊಡಿಸಿಕೊಟ್ಟಿದ್ದಾರೆ. ಠಾಣೆಯಲ್ಲಿ ಮುಚ್ಚಳಿಕೆ ಮಾಡಿಸಿ ಬುದ್ದಿವಾದ ಹೇಳಿ ಮೊದಲು ಗಂಡನನ್ನ ಕಳುಹಿಸಿದ್ದಾರೆ. ವಿದ್ಯಾಳನ್ನ ಸ್ವಾಧಾರ ಕೇಂದ್ರಕ್ಕೆ ಮಹಿಳಾ ಪೇದೆ ಜೊತೆ ಮಾಡಿ ಕಳುಹಿಸದೆ ಒಬ್ಬಳನ್ನೆ ಕಳುಹಿಸಿದ್ದಾರೆ.

**ಸಾಂತ್ವನ ಕೇಂದ್ರಕ್ಕೆ ತೆರಳುವಾಗ ಕೊಲೆ**

ಪೊಲೀಸ್ ಠಾಣೆಯಿಂದ ಮೊದಲೇ ಹೊರ ಬಂದಿದ್ದ ಗಂಡಗಿ ರೀಶ್ ಹೆಂಡತಿ ವಿಧ್ಯಾಳನ್ನು ಕೊಂದೆ ತೀರಬೇಕೆಂದು ತೀರ್ಮಾನಿಸಿದ್ದ ಪಟ್ಟಣ ಠಾಣೆಯ ಹತ್ತಿರದಲ್ಲೆ ಇರುವ ಸ್ವಾಧಾರ ಕೇಂದ್ರಕ್ಕೆ ತೆರಳುವ ರಸ್ತೆಯಲ್ಲಿರುವ ಟೀ ಅಂಗಡಿಯೊಂದರ ಬಳಿ ಹೆಂಡತಿ ಬರುವಿಕೆಗಾಗಿ ಕಾಯುತ್ತಾ ನಿಂತಿದ್ದ. ಸ್ವಲ್ಪ ಸಮಯದ ನಂತರ ಅದೇ ರಸ್ತೆಯಲ್ಲೇ ಸ್ವಾಧಾರ ಕೇಂದ್ರಕ್ಕೆ ತೆರಳಲು ಬರುತ್ತಿದ್ದ ಹೆಂಡತಿಯನ್ನು ತಡೆದು ಮನೆಗೆ ಬರುವಂತೆ ಕೇಳಿ ಕೊಂಡಿದ್ದಾನೆ. ಆದರೆ ವಿದ್ಯಾ ಮನೆಗೆ ಬರಲು ನಿರಾಕರಿಸಿದ್ದಾಳೆ. ಇದರಿಂದ ಸಿಟ್ಟಿಗೆದ್ದ ಗಿರೀಶ್ ಮೊದಲೇ ಪೂರ್ವನಿಯೋಜಿತವಾಗಿ ತಂದಿದ್ದ ಕಾಡುಗೋಲಿನಿಂದ ಹೆಂಡತಿಯ ಕುತ್ತಿಗೆಗೆ ಮನಬಂದಂತೆ ಹಲ್ಲೆ ಮಾಡಿ ಪರಾರಿಯಾಗಿದ್ದಾನೆ.

ಘಟನೆಯಿಂದ ತೀವ್ರವಾಗಿ ಗಾಯ ಗೊಂಡ ವಿದ್ಯಾ ಸ್ಥಳದಲ್ಲೆ ಕುಸಿದು ಬಿದ್ದಿದ್ದಾಳೆ. ಕೂಡಲೆ ಆಕೆಯನ್ನು ಆಸ್ಪತ್ರೆಗೆ ರವಾನೆ ಮಾಡಿತಾ ರಾದರೂ ಚಿಕಿತ್ಸೆ ಫಲಿಸದೇ ಅಸುನೀಗಿದ್ದಾಳೆ. ವಿಷಯ ತಿಳಿದ ಕೂಡಲೇ ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಡಾ. ಬಿ.ಟಿ. ಕವಿತಾ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಪೋಲಿಸ್ ಠಾಣೆಯ ಸಮೀಪವೇ ನೆತ್ತರು ಹರಿದದ್ದರಿಂದ ಈ ನಡುವೆ ಘಟನೆಯಲ್ಲಿ ಇಲ್ಲಿ ಪೊಲೀಸ್ ಠಾಣಾಧಿಕಾರಿಗಳ ಕರ್ತವ್ಯ ಲೋಪವಾಗಿದೆ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ರಾಜೇಶ್ ಎ.ಎಸ್., ವಿಶ್ವ ಎಂಬುವವರನ್ನ ಅಮಾನತ್ತು ಮಾಡಲಾಗಿತ್ತು. ಅಮಾನತ್ತಾದ ಕೆಲವೇ ಗಂಟೆಯೊಳಗೆ ಅಮಾನತ್ತು ಪಡಿಸುವ ಘೋರ ಅಪರಾಧದಂತೆ ಈ ಪ್ರಕರಣ ಕಂಡು ಬರುತ್ತಿಲ್ಲ ಎಂದು ರಾಜ್ಯ ಮಟ್ಟದ ಹಿರಿಯ ಪೊಲೀಸ್ ಅಧಿಕಾರಿಗಳ ಸೂಚನೆಯಂತೆ ಅಮಾನತ್ತು ಆದೇಶ ವಾಪಸ್ಸು ಪಡೆಯಲಾಯಿತಾದರೂ ಇನ್ಸ್‌ಪೆಕ್ಟರ್ ರಾಜೇಶ್ ರಜೆಯ ಮೇಲೆ ತೆರಳಿದ್ದಾರೆ.

ಈ ಸಂಬಂಧ ಸಾಂತ್ವನ ಕೇಂದ್ರದ ಮೇಲ್ವಿಚಾರಕಿ


ಕೊಲೆಯಾಗಿ ಬಿದ್ದಿರುವ ವಿದ್ಯಾ

ರಾಜಮ್ಮರವರು ನೀಡಿರುವ ದೂರಿನ ಮೇರೆಗೆ ಚಾಮರಾಜನಗರ ಪಟ್ಟಣ ಠಾಣೆ ಪೊಲೀಸರು ಠಾಣಾ ಮೊಕದ್ದಮೆ ಸಂಖ್ಯೆ 99/2025, ಕಲಂ 352, 103 ಬಿಎನ್ಎಸ್ ಕಾಯ್ದೆಡಿ ಪ್ರಕರಣ ದಾಖಲಿಸಿಕೊಂಡು ನಂತರ ಪಟ್ಟಣ ಠಾಣೆಯನ್ನು ಪೊಲೀಸ್ ಇನ್ಸ್‌ಪೆಕ್ಟರ್ ಸಾಗರ್‌ರವರ ಸುಪರ್ಧಿಗೆ (ಪ್ರಭಾರ) ಒಪ್ಪಿಸಿ ಹೆಣ ಕೆಡವಿದ ಹಂತಕ ಗಿರೀಶನ ಪತ್ತೆಯ ಕಾರ್ಯಾಚರಣೆ ಶುರುವಾಗಿತ್ತು. ಅದಕ್ಕಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಡಾ. ಬಿ.ಟಿ. ಕವಿತಾ ಮಾರ್ಗದರ್ಶನದಲ್ಲಿ ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯರವರ ನೇತೃತ್ವದಲ್ಲಿ ಠಾಣೆ ಪಿಐ ಸಾಗರ್, ಪಿಎಸ್ಐ ಮಂಜುನಾಥ್ ಹಾಗೂ ಪಿಸಿಗಳಾದ ಮಹೇಶ, 447, 76 ಮೋಹನ್, 208 ಮೋಹನ್, ಎಎಸ್ಐ ಲಿಂಗರಾಜು, ಮುಖ್ಯಪೇದೆ ಬಸವಣ್ಣ, ಕೊಮರೇಶ್, ನಿಖಿಲ್‌ರವರನ್ನೊಳಗೊಂಡ ಎರಡು ತಂಡಗಳನ್ನು ರಚಿಸಿ ಹೆಂಡತಿಯ ಹೆಣ ಉರುಳಿಸಿ ತಲೆಮರೆಸಿಕೊಂಡಿದ್ದ ಹಂತಕನ ಪತ್ತೆಗೆ ಪೊಲೀಸರು ಬಲೆ ಬೀಸಿ ಹುಡುಕಾಟ ನಡೆಸಿದ್ದರು.

ಅಂದು ಪರಾರಿಯಾಗಿದ್ದ ಹಂತಕ ಗಿರೀಶನ ಪತ್ತೆಗಾಗಿ ಹಲವು ಊರುಗಳಿಗೆ ಪೊಲೀಸರು ಅಡ್ಡಾಡಿದ್ದಾರೆ. ಏಕೆಂದರೆ ಆತ ಮೊಬೈಲ್ ಬಳಸದೆ ಬೇರೆಯರಿಂದ ತನ್ನ ತಾಯಿ ಹಾಗೂ ಇತರರಿಗೆ ಕರೆ ಮಾಡಿರುವುದನ್ನು ಅನುಸರಿಸುವ ಪೊಲಿಸರು ಸೋಮವಾರಪೇಟೆಯ ಮಠದ ಬಳಿ ಹಂತಕ ಗಿರೀಶ್‌ಇರುವುದರ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ. ಅದರಂತೆ ಇಂದು ಬೆಳಗ್ಗೆ ಪಿಐಗಳಾದ ಸಾಗರ್, ಪಿಎಸ್ಐ ಮಂಜುನಾಥ್ ಟೀಂ ಸೋಮವಾರಪೇಟೆಯ ಮಠದ ಬಳಿ ತೆರಳಿ ಹಂತಕನ ಜಾಡು ಹಿಡಿದಿದೆ. ಆತ ಬೆಳಗಿನ ವೇಳೆ ಜಮೀನಿಗೆ ತೆರಳುವ ವೇಳೆ ಬೈಪಾಸ್‌ನಲ್ಲಿ ಹೋಗಿ ಹಂತಕ ಗಿರೀಶನ ಹೆಡೆಮುರಿಕಟ್ಟಿದ್ದಾರೆ. ಅದರಂತೆ ಹಂತಕನನ್ನು ವಿಚಾರಣೆ ನಡೆಸಿದ ಬಳಿಕ ಜೈಲಿಗೆ ಬಿಟ್ಟು ಬಂದಿದ್ದಾರೆ. ಒಟ್ಟಿನಲ್ಲಿ ಹಾಡುಹಗಲೆ ಹೆಂಡತಿ ವಿದ್ಯಾಳನ್ನ ಸಾರ್ವಜನಿಕವಾಗಿ ಕುಡಗೋಲಿನಿಂದ ಕೊಚ್ಚಿ ಹೆಣ ಕೆಡವಿದ್ದ ಪ್ರಕರಣದಿಂದ ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿತ್ತು ಹಂತಕನ ಬಂಧನದಿಂದ ಸಧ್ಯಕ್ಕೆ ಪಟ್ಟಣ ಪ್ರದೇಶ ನಿಟ್ಟುಸಿರು ಬಿಟ್ಟಿದೆ. ☯

# ಭಾರತಕ್ಕೆ ಬಾಂಗ್ಲಾ-ನೇಪಾಳಿ ಹುಡ್ಗೀರ್ ಬರೋದ್ಯಾಕೆ?

10 ☞

ತಮ್ಮ ಹಿಡಿತದಲ್ಲಿಟ್ಟುಕೊಂಡು ಅವರ ಮೂಲಕವೇ ಎಲ್ಲವನ್ನು ಮಾಡಿಸುತ್ತಾರೆ.

ಇನ್ನು ಸ್ಪಾ ಕೇಂದ್ರಗಳಲ್ಲಿಯೂ ಹೆಚ್ಚು ಬಾಂಗ್ಲಾ ಹೆಣ್ಣುಮಕ್ಕಳೇ ಇರುತ್ತಾರೆ. ಇಲ್ಲಿ ಸಾವಿರಾರು ರೂಪಾಯಿ ಕೊಟ್ಟು ಮಸಾಜ್ ಮಾಡಿಸಿಕೊಳ್ಳಲು ವಯಸ್ಸಾದ ಗಂಡಸರೇ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅವರು ಯುವತಿಯರಿಂದ ಬಾಡಿ ಮಸಾಜ್ ಮಾಡಿಸಿಕೊಂಡು ಸುಖ ಪಡೆಯುತ್ತಾರೆ. ಹೀಗೆ ಸೆಕ್ಸ್‌ಗೆ ಸಂಬಂಧ ಪಟ್ಟ ದಂಧೆಗಳಿಗೆ ಸುಲಭವಾಗಿ ಬಾಂಗ್ಲಾ ಮತ್ತು ನೇಪಾಳಿ ಯುವತಿಯರೇ ಬಳಕೆಯಾಗುತ್ತಿರುವುದು ನಿಜಕ್ಕೂ ಅಚ್ಚರಿಯ ಸಂಗತಿಯಾಗಿದೆ.

ಸೆಕ್ಸ್ ದಂಧೆಗಳಿಗೆ ಹೊರಗಿನ ಅದರಲ್ಲೂ ಬಾಂಗ್ಲಾ, ನೇಪಾಳಿ ಯುವತಿಯರನ್ನೇ ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದೇಕೆ? ಎಂಬ ಪ್ರಶ್ನೆಗೆ ಬಡತನವೇ ಕಾರಣವಾಗಿರುತ್ತದೆ. ಜತೆಗೆ ಆಮಿಷವೊಡ್ಡಿ ಅವರಿಗೆ ತಿಂಗಳಿಷ್ಟು ಎಂಬಂತೆ ಹಣವನ್ನು ಫಿಕ್ಸ್ ಮಾಡಿ ರೆಸಾರ್ಟ್ ಅಥವಾ ಮಾಂಸದ ಮನೆಯಿಂದ ಹಣ ಪಡೆಯಲಾಗುತ್ತದೆ. ಇವರೆಲ್ಲರನ್ನು ಗಡಿದಾಟಿಸಿ ತಂದು ಬಳಿಕ ಮಾರಾಟ ಮಾಡಲಾಗುತ್ತದೆ.

ಹೀಗೆ ಬರುವ ಯುವತಿಯರನ್ನು ರಾಜ್ಯದಿಂದ ರಾಜ್ಯಕ್ಕೆ ಬದಲಾವಣೆ ಮಾಡಲಾಗುತ್ತಿರುತ್ತದೆ. ಇತ್ತೀಚೆಗೆ ತಂತ್ರಜ್ಞಾನ ಮುಂದುವರೆದು ಸೋಷಿಯಲ್ ಮೀಡಿಯಾಗಳು ಮುನ್ನಲೆಗೆ ಬಂದ ಹಿನ್ನಲೆಯಲ್ಲಿ ಪಟ್ಟಣ ಮಾತ್ರವಲ್ಲದೆ ಹೊರವಲಯದಲ್ಲಿಯೂ ದಂಧೆಗಳು ಶುರುವಾಗಿದ್ದು, ಕೆಲವು ದಂಧೆಗಳನ್ನು ತಲೆ ಮಾಸಿದ ಹೆಂಗಸರೇ ನಿರ್ವಹಿಸುತ್ತಿದ್ದಾರೆ.

ಬಾಂಗ್ಲಾ ಯುವತಿಯರು ಮಾತ್ರವಲ್ಲದೆ ಇತರೆ ಕಡೆಗಳ ಅಮಾಯಕ ಯುವತಿಯರನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ದಂಧೆಗೆ ಬಳಸಿಕೊಳ್ಳಲಾಗುತ್ತಿದೆ. ಈ ದಂಧೆಯ ಹಿಂದೆ ದೊಡ್ಡ ಮಟ್ಟದಲ್ಲಿ ಜಾಲ ವ್ಯಾಪಿಸಿದ್ದು, ಕಿಂಗ್‌ಪಿನ್‌ಗಳು ಯಾರು ಎಂಬುದನ್ನು ಹುಡುಕುವುದೇ ಕಷ್ಟವಾಗಿದೆ. ಹೀಗಾಗಿ ದಂಧೆ ಸದ್ದಿಲ್ಲದೆ ಮುಂದುವರೆಯುತ್ತಿರುತ್ತದೆ.



ಕೆಲವೊಮ್ಮೆ ಅನುಮಾನಗಳು ಬಂದು ಪಕ್ಕಾ ಮಾಹಿತಿ ದೊರೆತಾಗ ಮಾತ್ರ ದಾಳಿಗಳಾಗುತ್ತವೆ. ಈ ವೇಳೆ ಸಿಕ್ಕರೂ ಸಿಗಬಹುದು ಅಥವಾ ಸಿಗದೆಯೂ ಇರಬಹುದು. ಬಹಳಷ್ಟು ಪ್ರಕರಣಗಳಲ್ಲಿ ದಂಧೆಯ ಆಳಕ್ಕಿಳಿದು ತನಿಖೆಯೂ ನಡೆಯುವುದಿಲ್ಲ. ಹೀಗಾಗಿ ಮಾನವ ಕಳ್ಳಸಾಗಾಣಿಕೆ ಮಾಡಿಕೊಂಡು ಬದುಕು ಕಟ್ಟಿಕೊಂಡಿರುವ ಕಿಂಗ್‌ಪಿನ್‌ಗಳು ಸುಲಭವಾಗಿ ಜಾರಿಕೊಳ್ಳುತ್ತಾರೆ.

ಇದರಿಂದಾಗಿ ಬದುಕು ಕಟ್ಟಲೆಂದು ಬಂದ ಯುವತಿಯರು ಪಾಪಕೂಪದಲ್ಲಿ ಬಿದ್ದು ಅಲ್ಲಿಂದ ಹೊರಬರಲಾಗದೆ ತಮ್ಮ ಬದುಕನ್ನು ಕಳೆದುಕೊಳ್ಳುತ್ತಾರೆ. ಅವರು ಸ್ವತಂತ್ರವಾಗಿ ಓಡಾಡಲು ಸಾಧ್ಯವಾಗದೆ ಬಂಧನದಲ್ಲಿದ್ದುಕೊಂಡೇ ಬದುಕನ್ನು ಅಂತ್ಯಗೊಳಿಸಬೇಕಾದ ದುಸ್ಥಿತಿ ಇರುತ್ತದೆ. ಇಂತಹ ಪರಿಸ್ಥಿತಿ ಅದೆಷ್ಟು ಹೆಣ್ಣುಮಕ್ಕಳಿಗೆ ಒದಗಿ ಬಂದಿದೆಯೋ ಗೊತ್ತಿಲ್ಲ.

ಈ ಬಗ್ಗೆ ಯಾರೂ ಕೂಡ ತುಂಬಾ ಆಳವಾಗಿ ಯೋಚಿಸುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ದಾಳಿ ನಡೆಸಿ ಸಿಕ್ಕಿಬಿದ್ದಾಗ ಅವರು ಈ ವೃತ್ತಿಗೆ ಏಕೆ ಬಂದರು? ಕರೆತಂದವರು ಯಾರು? ಹೀಗೆ ಜಾಲಗಳ ಬಗ್ಗೆ ಆಳಕ್ಕಿಳಿದು ತನಿಖೆಯೂ ನಡೆಯಲ್ಲ. ಆದ್ದರಿಂದ ಅವರನ್ನು ಮತ್ತೆ ಬಿಡಿಸಿಕೊಂಡು ಹೋಗಿ ಮತ್ತೆ ಅದೇ ಕೂಪಕ್ಕೆ ತಳ್ಳುತ್ತಾರೆ.

ಸ್ವಯಂ ಪ್ರೇರಿತರಾಗಿ ವೇಶ್ಯಾವಾಟಿಕೆ ನಡೆಸುವವರು ಸ್ವತಂತ್ರವಾಗಿ ಹೇಗೆ ಬೇಕಾದರೂ ಬದುಕಬಹುದಾಗಿದೆ. ಆದರೆ ಲಾಡ್ಜ್ ಅಥವಾ ರೆಸಾರ್ಟ್ ಹೀಗೆ ಮಾರಾಟಗೊಂಡು ಮತ್ಯಾರದ್ದೋ ಕಪಿಮುಷ್ಠಿಯಲ್ಲಿ ಸಿಲುಕುವ ಯುವತಿಯರ ಬದುಕು ಮಾತ್ರ ಭಯಾನಕ ನರಕವಾಗಿ ಬಿಡುತ್ತದೆ.

ಸರ್ಕಾರ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕಿದೆ. ವೇಶ್ಯಾವಾಟಿಕೆ ದಾಳಿಯಲ್ಲಿ ಬಾಂಗ್ಲಾ ಮತ್ತು ನೇಪಾಳಿ ಯುವತಿಯರು ಸಿಕ್ಕಿಬಿದ್ದರೆ ಅವರ ಪೂರ್ವಾಪರದ ತನಿಖೆ ನಡೆಸುವುದು ಬಹಳ ಅಗತ್ಯವಿದೆ. ಇಲ್ಲದೆ ಹೋದರೆ ಇದು ಭದ್ರತೆ ಮೇಲೆಯೂ ಪರಿಣಾಮ ಬೀರಬಹುದು ಎನ್ನುವುದರಲ್ಲಿ ಎರಡು ಮಾತಿಲ್ಲ. ☯

# ಕುಡುಕ ಅಣ್ಣನಿಂದ ಹತನಾದ ನಾಗ!

11 ☞

ಕೊಂಡು ಸ್ಕೂಲ್ ಮನೆಯೊಂದರಲ್ಲಿ ಮಲಗಿದ್ದು. ಆ ದಿನ ರಾತ್ರಿ ಸುಮಾರು 8-00 ಗಂಟೆ ಸಮಯದಲ್ಲಿ ಚಾಮರಾಜ ನಗರದ ವಿಜಯ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಬಂದಿದ್ದಾನೆ.

ಇತ್ತ ಆರೋಪಿಯ ತಲಾಶ್ ನಡೆಸುತ್ತಿದ್ದ ಯಳಂದೂರು ಪೊಲೀಸರು ಚಾಮರಾಜನಗರದ ವಿಜಯ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಬಂದಾಗ ಅಲ್ಲಿ ಮಾದೇಶ್ ಬದಿರಂಗ ನಿಂತಿರುವುದನ್ನು ಕಂಡಿದ್ದಾರೆ. ಕೂಡಲೇ ಅಜ್ಜಮಾಯಿಸಿ ಆರೋಪಿಯನ್ನು ಜತನವಾಗಿ ಸೆರೆಹಿಡಿಯುತ್ತಾರೆ. ನಂತರ ಅಲ್ಲಿಗೆ ಪೊಲೀಸ್ ಜೀಪ್ ಬರಮಾಡಿಕೊಂಡು ಅಲ್ಲಿಂದ ರಾತ್ರಿ ಸುಮಾರು 10-00 ಗಂಟೆ ಸಮಯಕ್ಕೆ ಠಾಣೆಗೆ ಕರೆತರುವಲ್ಲಿ ತಂಡ ಯಶಸ್ವಿಯಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿ ಮಾದೇಶ್‌ನನ್ನು ಹಿಡಿದು ಠಾಣೆಗೆ ಕರೆತಂದ ಈ ತಂಡ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರ ಮುಂದೆ ತಂದು ನಿಲ್ಲಿಸುತ್ತದೆ. ಬಳಿಕ ವೃತ್ತ ನಿರೀಕ್ಷಕ ಶ್ರೀಕಾಂತ್‌ರವರು ಆರೋಪಿಯನ್ನು ಪೊಲೀಸ್ ಭಾಷೆಯಲ್ಲಿ ವಿಚಾರಣೆ ನಡೆಸಿದಾಗ ನಾನು ನನ್ನ ತಮ್ಮನಿಗೆ ಮನಸೋ ಇಚ್ಚೆ ಹೊಡೆದು ಕಾಲಿನಿಂದ ಒದ್ದಿದ್ದರಿಂದ ಆತನಿಗೆ ಪೆಟ್ಟಾಗಿ ಆತನಿಗೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾನೆ. ನಾನು ಆತನಿಗೆ ನನ್ನ ಕೈಯಿಂದ ಹೊಡೆದು ಕಾಲಿನಿಂದ ಒದ್ದು ಕೊಲೆ ಮಾಡಿರುವುದು ನನ್ನ ತಪ್ಪಾಗಿರುತ್ತದೆ ಎಂದು ಒಪ್ಪಿಕೊಂಡಿದ್ದಾನೆ. ನಂತರ ಆರೋಪಿಯ ಹೇಳಿಕೆ ದಾಖಲಿಸಿಕೊಂಡು ಬಂಧಿಸಿ ಜೈಲಿಗೆ ಬಿಟ್ಟು ಬಂದು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಸಲ್ಲಿಸಿದ್ದಾರೆ. ☯

### ಸಂಕೇಶ್ವರ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ನೇತೃತ್ವದಲ್ಲಿ ಸಿಬ್ಬಂದಿಗಳ ಕಾರ್ಯಾಚರಣೆ...

# ವಿವಿಧ ಕಂಪನಿಯ ಮೊಬೈಲ್‌ಗಳನ್ನು ಕಳ್ಳತನದಿಂದ ಸಾಗಿಸುತ್ತಿದ್ದ ಖತರ್‌ನಾಕ್ ಕಳ್ಳ!

**ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ತೆಲಂಗಾಣ ರಾಜ್ಯದ ಹರಾಮಿ ಖತರ್‌ನಾಕ್ ಕಳ್ಳನೊಬ್ಬನು ವಿವಿಧೆಡೆ ಕಳ್ಳತನ ಮಾಡಿದ್ದ 11.70 ಲಕ್ಷ ರೂ.ಗಳ ಮೌಲ್ಯದ 101 ಮೊಬೈಲ್‌ಗಳನ್ನು ಸಂಗ್ರಹಿಸಿ ಅಕ್ರಮವಾಗಿ ಸಾಗಾಟ ಮಾಡುವಾಗ ಸಿಕ್ಕು ಬಿದ್ದಿದ್ದಾನೆ. ಡಿವೈಎಸ್ಪಿ ರವಿ ನಾಯಕ, ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಅವರ ನಿರ್ದೇಶನದಲ್ಲಿ ಪಿಎಸ್‌ಐಗಳಾದ ರಾಘವೇಂದ್ರ ಖೋತ, ಎ.ಕೆ. ಸೊನ್ನದ ಮತ್ತು ಸಿಬ್ಬಂದಿಗಳ ವಿಶೇಷ ಕಾರ್ಯಾಚರಣೆಯಲ್ಲಿ ಮೊಬೈಲ್ ಕಳ್ಳ ಅಂದರ್ ಆಗಿದ್ದಾನೆ. ಕಳ್ಳತನದ ಕೃತ್ಯಕ್ಕೆ ಬಳಸಿದ ಬೆಂಗಳೂರು ಮೂಲದ 3 ಲಕ್ಷ ರೂ. ಮೌಲ್ಯದ ಕಾರನ್ನು ಜಪ್ತಿ ಮಾಡಿಕೊಂಡ ಪ್ರಕರಣ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

ಇಂದಿನ ಸಮಾಜದಲ್ಲಿ ನ್ಯಾಯಯುತವಾಗಿ ಬದುಕಲು ನೂರಾರು ದಾರಿಗಳಿದ್ದರೂ ಕೂಡಾ ಕೆಲವೊಂದು ವಿಕೃತ ಮನಸ್ಸಿನ ಐನಾತಿಗಳು ದಿಢೀರನೇ ಹಣ ಗಳಿಸಲು ಮುಂದಾಗುತ್ತಾರೆ. ಕೊನೆಗೆ ತಮ್ಮ ಪಾಪದ ಕೊಡ ತುಂಬಿದಾಗ 'ಕರ್ಮ'ದ ಹೊಡೆತಕ್ಕೆ ಸಿಕ್ಕು ಬೆತ್ತಲಾಗುತ್ತಾರೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಪರಿಣಾಮ ಜೈಲು ಸೇರಿ ತಂಗಳು ಮುರಿಯುತ್ತಲೇ ಕಂಬಿ ಎಣಿಸುತ್ತಾರೆ. ಇದಕ್ಕೆ ಒಂದು ನಿದರ್ಶನವೆಂಬಂತೆ ಕಂಡ... ಕಂಡವರ ಮಬೈಲ್‌ಗಳನ್ನು ಅವರಿಗೆ ಗೊತ್ತಾಗದಂತೆ ಎಗರಿಸುವ ತಂಡದ ವಂಚಕನೊಬ್ಬ ಸಂಕೇಶ್ವರ ಪೊಲೀಸರ


ಅಂತರರಾಜ್ಯ ಕುಖ್ಯಾತ ಕಳ್ಳ ನವೀನ ಸಂಪತ್‌ನಿಂದ ವಶಪಡಿಸಿಕೊಂಡ ವಿವಿಧ ಕಂಪನಿಯ 101 ಮೊಬೈಲ್‌ಗಳು

ಕೈಗೆ ಸಿಕ್ಕುಬಿದ್ದು ಕಾರಾಗೃಹ ಕಂಡಿರುವ ಸುದ್ದಿ ಇದಾಗಿದೆ.

**ವಾಹನ ತಪಾಸಣೆ ಮಾಡುವಾಗ...**

ಇತ್ತೀಚಿಗಷ್ಟೇ ಗೋಕಾಕ ಉಪವಿಭಾಗಕ್ಕೆ ನೂತನವಾಗಿ ಡಿವೈಎಸ್ಪಿ ಆಗಿ ರವಿ ನಾಯಕ ಅಧಿಕಾರ ವಹಿಸಿಕೊಂಡಿದ್ದರು. ತಮ್ಮ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಿಪಿಐಗಳ ಮತ್ತು ಪಿಎಸ್‌ಐಗಳ ಸಭೆ ಕರೆದು ಕಾನೂನು ಮತ್ತು ಸುವ್ಯವಸ್ಥೆ ಅಚ್ಚುಕಟ್ಟಾಗಿ ಇರಿಸಿ ಕೊಂಡು ಕಳ್ಳತನ, ಮಟಕಾ, ಜೂಜು, ಗುಂಡಾಗಿರಿ, ಕೊಲೆ, ಸುಲಿಗೆ ಮುಂತಾದ ಅಕ್ರಮ ಚಟುವಟಿಕೆಗಳನ್ನು ಮಟ್ಟಾ ಹಾಕಬೇಕೆಂದು ಸೂಕ್ತ ನಿರ್ದೇಶನಗಳನ್ನು ನೀಡಿದ್ದರು. ಕಾನೂನುಬಾಹಿರ ಕೃತ್ಯ, ತಡೆ ಗಟ್ಟುವ ನಿಟ್ಟಿನಲ್ಲಿ ವಾಹನಗಳ ತಪಾಸಣೆ ಕೂಡಾ ಕಟ್ಟುನಿಟ್ಟಾಗಿ



ಕಳ್ಳತನಕ್ಕೆ ಬಳಸಿದ ಹೊಂಡಾ ಕಾರು

ಮಾಡಬೇಕೆಂದು ಸೂಚಿಸಿದ್ದರು.

ಡಿವೈಎಸ್ಪಿ ರವಿ ನಾಯಕ ಅವರ ನಿರ್ದೇಶನದಂತೆ ಸಂಕೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಹದ್ದಿಯಲ್ಲಿ ಚತುರ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಅವರ ಸೂಕ್ತ ನಿರ್ದೇಶನ ಮತ್ತು ನೇತೃತ್ವದಲ್ಲಿ ಪಿಎಸ್‌ಐ ರಾಘವೇಂದ್ರ ಖೋತ ಮತ್ತು ಸಿಬ್ಬಂದಿಗಳು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಶ್ರಮಿಸುತ್ತಿದ್ದರು. ಅಂದು ದಿನಾಂಕ 05-06-2025ರಂದು ಗುರುವಾರ ಮಧ್ಯಾಹ್ನ 2.45 ಗಂಟೆಯ ಸುಮಾರಿಗೆ ರಾಷ್ಟ್ರೀಯ ಹೆದ್ದಾರಿ ನಂ. 4ರ ಮೇಲಿರುವ ಯುಪಿ ಧಾಬಾ ಹತ್ತಿರ ಪಿಎಸ್‌ಐ ಎ.ಕೆ. ಸೊನ್ನದ, ಸಿಬ್ಬಂದಿಗಳಾದ ಎಸ್.ಎಸ್. ಗಳತಗಿ, ಎಸ್.ಎ. ಕಾಂಬಳೆ, ವಿಠ್ಠಲ ಮುರಕಿಭಾವಿ, ಬಿ.ಟಿ. ಪಾಟೀಲ ಇವರುಗಳು ಹೋಗಿ ಬರುವ ವಾಹನಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ಕೈಗೊಂಡಿದ್ದರು.

**ಹೊಂಡಾ ಕಾರಿನಲ್ಲಿದ್ದವು 101 ಮೊಬೈಲ್...**

ಮರೂನ್ ಕಲರ್ ಹೊಂಡಾ ಬಿಆರ್‌ವಿ ಕಾರ್ ನಂ. ಕೆಎ-51 ಎಮ್-4494 ವೇಗವಾಗಿ ಬೆಳಗಾವಿ ಕಡೆಗೆ ಹೊರಟಿತ್ತು. ತಕ್ಷಣ ಪಿಎಸ್‌ಐ ಸೊನ್ನದ ಮತ್ತು ಸಿಬ್ಬಂದಿಗಳು ಕಾರನ್ನು ಲಗುಬಗೆಯಿಂದ ಅಡ್ಡಗಟ್ಟಿ ನಿಲ್ಲಿಸಿ ತಪಾಸಣೆಗೆ ಮುಂದಾದರು. ಹೊಂಡಾ ಕಾರಿನ ಬಾಗಿಲು ತೆರೆದು ಒಳಗಡೆ ತಪಾಸಣೆ ನಡೆಸಿದಾಗ ಪೊಲೀಸರೇ ಒಂದು ಕ್ಷಣ ದಂಗಾದರು. ವಿವಿಧ ಕಂಪನಿಗಳಿಗೆ ಸೇರಿದ್ದ 101 ಮೊಬೈಲ್‌ಗಳು ತಣ್ಣಗೆ ಒಂದೆಡೆ ಇದ್ದವು. ಇಷ್ಟೆಲ್ಲಾ ಮೊಬೈಲ್‌ಗಳನ್ನು ನೋಡಿದಾಗ ಕಳ್ಳತನ ಮಾಡಿದವುಗಳನ್ನು ಸಂಗ್ರಹಿಸಿಕೊಂಡು ಅಕ್ರಮವಾಗಿ ಸಾಗಿಸಲು ಹೊರಟಿದ್ದ ಕಾರು ಇದೆಂದು ಊಹಿಸಿ ತಕ್ಷಣ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿಯವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಕಾರನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಬರಲಾಯಿತು.

**ಸಿಕ್ಕವನು ಅಂತರರಾಜ್ಯ ಕಳ್ಳ ನವೀನ...**

ಪೊಲೀಸ್ ಠಾಣೆಯಲ್ಲಿ ತಂದು ಕಾರಿನಲ್ಲಿದ್ದವನನ್ನು ವಿಚಾರಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ, ಪಿಎಸ್‌ಐಗಳಾದ ರಾಘವೇಂದ್ರ ಖೋತ, ಎ.ಕೆ. ಸೊನ್ನದ ಅವರಿಗೆ ತನ್ನ ಹೆಸರು ನವೀನ ಸಂಪತ ತಂದೆ ಕೃಷ್ಣಾ ಸಂಪತ, ಸಾ। ಸಂಗಮೇಶ್ವರ ಕಾಲನಿ, ಬಾನಸವಾಡ, ಜಿ। ನಿಜಾಮಬಾದ್, ರಾಜ್ಯ ತೆಲಂಗಾಣ ಎಂದು ತಿಳಿಸಿದನು. ಈತನೊಬ್ಬ ಕಳ್ಳತನ ಮಾಡಿದ್ದ ಮೊಬೈಲ್‌ಗಳನ್ನು ಸಂಗ್ರಹಿಸಿ ವುಗಳನ್ನು ಪಾರ್ಮ್ಯಾಟ್ ಹೊಡೆಸಿ ಮಾರಾಟ ಮಾಡುವ ದಂಧೆಯಲ್ಲಿ ಪಳಗಿದ ಕುಳವಾಗಿದ್ದಾನೆ ಎಂದು ತಿಳಿದು ಬಂದಿದೆ.

ಇತ್ತೀಚಿಗೆ ಬೆಳಗಾವಿ ಜಿಲ್ಲೆಯಲ್ಲಿಯೇ ಇಷ್ಟೊಂದು ಪ್ರಮಾಣದ ಮೊಬೈಲ್‌ಗಳು ಒಮ್ಮೆಗೆ ಪತ್ತೆ ಆಗಿರುವುದು ಇದೇ ಮೊದಲು ಎನ್ನಲಾಗುತ್ತಿದೆ. ಪ್ರಕರಣ ಕುರಿತಾಗಿ ಬೆಳಗಾವಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. (ಕಾ.ಸು), ರಾಮನಗೌಡ ಬಸರಗಿ (ಕ್ರೈಂ), ಗೋಕಾಕ ಡಿವೈಎಸ್ಪಿ ರವಿ ನಾಯಕ ಅವರೊಂದಿಗೆ ಸಮಾಲೋಚಿಸಿ ಅವರಿಂದ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ಅದರಲ್ಲೂ ಮೊಬೈಲ್ ಕಳ್ಳರ ಜಾಲ ಭೇದಿಸಬೇಕು ಎಂದು ತಮ್ಮ ಸಿಬ್ಬಂದಿಗಳಿಗೆ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಸೂಚಿಸಿದರು.

ಬೆಳಗಾವಿ
ಮನ್ನಾಪೂರ

**11.70 ಲಕ್ಷ ರೂ.ಗಳ ಮೊಬೈಲ್...**

1) ವಿವೊ ಕಂಪನಿಯ 34 ಮೊಬೈಲ್, ಅಂದಾಜು ಮೌಲ್ಯ 4.65 ಲಕ್ಷ ರೂ. 2) ಒಪ್ಪೊ ಕಂಪನಿಯ 25 ಮೊಬೈಲ್, ಅಂದಾಜು ಮೌಲ್ಯ 2.66 ಲಕ್ಷ ರೂ. 3) ಒನ್ ಪ್ಲಸ್ ಕಂಪನಿಯ 6 ಮೊಬೈಲ್, ಅಂದಾಜು ಮೌಲ್ಯ 1.18 ಲಕ್ಷ ರೂ. 4) ರಿಯಲ್ ಮಿ ಕಂಪನಿಯ 7 ಮೊಬೈಲ್, ಅಂದಾಜು ಮೌಲ್ಯ 60 ಸಾವಿರ ರೂ. 5) ರೆಡ್ ಮಿ ಕಂಪನಿಯ 11 ಮೊಬೈಲ್, ಅಂದಾಜು ಮೌಲ್ಯ 83


ಡಿವೈಎಸ್ಪಿ ರವಿ ನಾಯಕ


ಇನ್ಸ್‌ಪೆಕ್ಟರ್ ಶಿವಶರಣ ಅವಜಿ


ಪಿಎಸ್‌ಐ ರಾಘವೇಂದ್ರ ಖೋತ

ಸಾವಿರ ರೂ. 6) ಸ್ಯಾಮ್‌ಸಂಗ್ ಕಂಪನಿಯ 6 ಮೊಬೈಲ್, ಅಂದಾಜು ಮೌಲ್ಯ 74 ಸಾವಿರ ರೂ. 7) ಇನ್ ಫಿನಿಕ್ಸ್ ಕಂಪನಿಯ 1 ಮೊಬೈಲ್, ಅಂದಾಜು ಮೌಲ್ಯ 5 ಸಾವಿರ ರೂ. 8) ಐಕ್ಯೂ ಕಂಪನಿಯ 2 ಮೊಬೈಲ್, ಅಂದಾಜು ಮೌಲ್ಯ 17 ಸಾವಿರ ರೂ. 9) ಐಟೇಲ್ ಕಂಪನಿಯ 1 ಮೊಬೈಲ್, ಅಂದಾಜು ಮೌಲ್ಯ ಮೊಬೈಲ್ 5 ಸಾವಿರ ರೂ. 10) ನಜರೊ ಕಂಪನಿಯ 1 ಮೊಬೈಲ್, ಅಂದಾಜು ಮೌಲ್ಯ 6 ಸಾವಿರ ರೂ. 11) ಪೋಕೊ ಕಂಪನಿಯ 1 ಮೊಬೈಲ್, ಅಂದಾಜು ಮೌಲ್ಯ 6 ಸಾವಿರ ರೂ. 12)


ಕುಖ್ಯಾತ ಮೊಬೈಲ್ ಕಳ್ಳ ನವೀನ ಸಂಪತ್

ಮೊಟರಾಲಾ ಕಂಪನಿಯ 6 ಮೊಬೈಲ್, ಅಂದಾಜು ಮೌಲ್ಯ 66 ಸಾವಿರ ರೂ. ಇವುಗಳನ್ನು ಸಾಗಿಸಲು ಬಳಸಿದ ಹೊಂಡಾ ಬಿಆರ್‌ವಿ ಕಾರ್ ಮೌಲ್ಯ 3 ಲಕ್ಷ ರೂ.ಗಳು ಒಟ್ಟು 14,71 ಲಕ್ಷ ರೂ.ಗಳ ಮೌಲ್ಯದ ಸ್ವತ್ತನ್ನು ಖತರ್‌ನಾಕ್ ಅಂತರರಾಜ್ಯ ಕಳ್ಳನಿಂದ ವಶಪಡಿಸಿಕೊಳ್ಳಲಾಗಿದೆ. ಬಂಧಿತ ಕಳ್ಳ ನವೀನ ಸಂಪತನನ್ನು ನ್ಯಾಯಾಂಗದ ವಶಕ್ಕೆ ಒಪ್ಪಿಸಲಾಗಿದೆ.

**ಹ್ಯಾಟ್ಸಫ್ ಸಂಕೇಶ್ವರ ಪೊಲೀಸ್...**

ಪೊಲೀಸ್ ಇನ್ಸ್‌ಪೆಕ್ಟರ್ ಶಿವಶರಣ ಅವಜಿ ಅವರ ದಕ್ಷ ಮಾರ್ಗದರ್ಶನದಲ್ಲಿ ಪಿಎಸ್‌ಐಗಳಾದ ರಾಘವೇಂದ್ರ ಖೋತ, ಎ.ಕೆ. ಸೊನ್ನದ, ಸಿಬ್ಬಂದಿಗಳಾದ ಎಸ್.ಎಲ್. ಗಳತಗಿ, ಆರ್.ಎಂ. ಕಡಲಾಸ್ಕರ, ಎಸ್.ಎ. ಕಾಂಬಳೆ, ವಿಠ್ಠಲ ಮುರಕಿಭಾವಿ, ಎಸ್.ಎಂ. ಯಕ್ಸಂಬಿ, ಬಿ.ಟಿ. ಪಾಟೀಲ, ಎಸ್‌ವಿ. ಮಠಪತಿ ಅವರುಗಳು ಯಶಸ್ವಿ ಕಾರ್ಯಾಚರಣೆ ಕೈಗೊಂಡಿದ್ದಾರೆ. ಇವರಿಗೆಲ್ಲ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ ಅಭಿನಂದಿಸಿದ್ದಾರೆ. ಸಾರ್ವಜನಿಕರು ಕೂಡಾ ಸಂಕೇಶ್ವರ ಪೊಲೀಸರ ಕರ್ತವ್ಯ ದಕ್ಷತೆಯನ್ನು ಶ್ಲಾಘಿಸಿದ್ದಾರೆ. ಇವರಿಗೆಲ್ಲ 'ಪೊಲೀಸ್ ನ್ಯೂಸ್'ನ ಹ್ಯಾಟ್ಸಫ್.

☯



ಅಂತರರಾಜ್ಯ ಕುಖ್ಯಾತ ಕಳ್ಳನನ್ನು ಬಂಧಿಸಿ ಆತನಿಂದ 11.70 ಲಕ್ಷ ರೂ.ಗಳ 101 ಮೊಬೈಲ್ ಮತ್ತು ಕೃತ್ಯಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಂಡಿರುವ ಸಂಕೇಶ್ವರದ ಪೊಲೀಸರು

# ಸೂಟ್‌ಕೇಸ್‌ನಲ್ಲಿ ತರುಣಿಯ ಶವ ರಹಸ್ಯ ಸ್ಫೋಟ!

3 ☜

**ಆರೇ ದಿನಕ್ಕೆ...ಕಗ್ಗೊಲೆ!**

**420** ಆಶಿಕ್ ಕುಮಾರ್ ಆ ಹುಡುಗಿ ರೀನಾಳನ್ನು ಹಾಗೆ ಏಮಾರಿಸಿ ಬೆಂಗಳೂರತ್ತ ಹಾರಿಸಿಕೊಂಡು ರೈಲು ಹತ್ತಿದ ಬಳಿಕ, ಅಲ್ಲಿ ಬಿಹಾರದಲ್ಲಿ ಹುಡುಗಿ ತಂದೆ ಲಭೋ



ಲಭೋ ಬಾಯಿ ಬಡುಕೊಂಡು ನವಾದನಗರದ ಪೊಲೀಸ್ ಸ್ಟೇಷನ್‌ನಲ್ಲಿ ಮಿಸ್ಸಿಂಗ್ ಕಂಪ್ಲೇಂಟ್ ದಾಖಲಿಸಿದ್ದ.

ಇತ್ತ ರೈಲಿನೊಳಗೆ ಆಸಾಮಿ ಆಶಿಕ್ ಕುಮಾರ ಈ ಎಳೆ ಹುಡುಗಿಯ ಮೈಕೈ ಸವುರಿಕೊಂಡು ಮುದ್ದಾಡಿಕೊಂಡು ಎರಡ್ಮೂರು ದಿವಸದಲ್ಲಿ ಬೆಂಗಳೂರು ತಲುಪಿದ್ದಾರೆ. ನಂತರ ಚಂದಾಪುರದ ಕಾಚನಾಯಕನ ಹಳ್ಳಿಯಲ್ಲಿ ತನಗೆ ಪರಿಚಯವಿದ್ದ ಮುಖೇಶ್ ಇಂದುಮತಿ ದಂಪತಿ ಬಳಿಗೆ ತೆರಳಿ, ಹೊಸದಾಗಿ ಮದುವೆಯಾಗಿದ್ದೇವೆ, ಮನೆ ಮಾಡಿಕೊಳ್ಳುವವರೆಗೆ ಒಂದೆರಡು ದಿನ ಇರಲು ಅವಕಾಶ ಕೊಡಿ ಎಂದು ವಿನಂತಿಸಿಕೊಂಡಿದ್ದ! ನಮ್ಮ ರಾಜ್ಯದವರೇ ಅಲ್ವಾ ಎಂಬ ಗೌರವದಿಂದ ಮುಖೇಶ್ ದಂಪತಿ ನವ ದಂಪತಿಗಳಿಗೆ ಇರಲು ಅವಕಾಶ ಮಾಡಿಕೊಟ್ಟಿದ್ದರು!

ಮುಖೇಶ್ ಇಂದುಮತಿ ಖಾಸಗಿ ಕಂಪನಿಯೊಂದರಲ್ಲಿ ದುಡಿಮೆ ಮಾಡುತ್ತಿದ್ದು, ಬೆಳಗಾಗೆದ್ದು ಅವರು ಮನೆ ಬಿಡುತ್ತಿದ್ದರು. ಆಶಿಕ್ ಬೊಮ್ಮಸಂದ್ರದ ಕಡೆ ಎಲ್ಲೋ ದುಡಿಯುತ್ತಿದ್ದ. ಈಗ ಈ ಹುಡುಗಿ ಹೊಡಕೊಂಡು ಬಂದಿದ್ದನಲ್ಲ... ಮುಖೇಶ್ ದಂಪತಿ ಮನೆ ಖಾಲಿ ಮಾಡುತ್ತಿದ್ದಂತೆಯೇ 'ರೊಮ್ಯಾನ್ಸ್' ಶುರು ಮಾಡಿಕೊಂಡಿದ್ದ! ಗಮನಿಯ ಅಂಶವೇನು ಅಂದ್ರೆ, ಈ ಹುಡುಗಿ ರೀನಾ ಇವನನ್ನೇ ನಂಬಿ ಬಂದಿದ್ದರೂ... ತಾಳಿ ಕಟ್ಟಿ ಮದುವೆ ಆಗುವ ತನಕ ರತಿಕ್ರೀಡೆ ಆಡಲು ಅವಕಾಶ ನೀಡಿರಲಿಲ್ಲ! ಇವನು ಏನೇ ಮುಟ್ಟಿ ಏನೇ ಪ್ರಚೋದಿಸಿದರೂ 'ಅದಕ್ಕೆ' ಮಾತ್ರ ಚಾನ್ಸ್ ಕೊಟ್ಟಿರಲಿಲ್ಲ! ಕಾಮುಕ **420** ಆಶಿಕ್ ಎರಡು ರಾತ್ರಿ ಎರಡು ಹಗಲು ತಿಪ್ಪರಲಾಗ ಹಾಕಿದ್ದಾನೆ. 'ಗೃಹಪ್ರವೇಶ' ಸಾಧ್ಯವಾಗಿಲ್ಲ! ಇದರಿಂದ ಸಿಟ್ಟಿಗೆದ್ದ ಕಾಮಾಂಧ ದಿನಾಂಕ **20-06-2025**ರಂದು ಮುಖೇಶ್ ದಂಪತಿ ಕೆಲಸಕ್ಕೆ ತೆರಳಿದ್ದಾಗ, ರೀನಾಳನ್ನು ವಿಧ ವಿಧವಾಗಿ ಕಾಡಿದ್ದಾನೆ.ಅವಳು ಕೊಟ್ಟಿಲ್ಲ! ಕಡೆಗೆ, ಕುತ್ತಿಗೆ ಹಿಸುಕಿ, ಮರ್ಮಾಂಗಕ್ಕೆ ರಾಡ್ ತುರುಕಿ ಹಿಂಸಿಸಿ ಕೊಂದು ಬಿಟ್ಟಿದ್ದಾನೆ!

**ಬಿಹಾರಕ್ಕೆ ಎಸ್ಕೇಪ್!**

ಸಾಮಾನ್ಯವಾಗಿ, ಪ್ರೇಮದ ಅಮಲಲ್ಲಿ ಬಿದ್ದ ಹೆಣ್ಮಕ್ಕಳು ಮುತ್ತು ಕೊಟ್ಟು ರಮಿಸಿದರೆ ಎಂಜಾಯ್ ಮಾಡುತ್ತಾರೆ. ಆದರೆ, ಅನೈಸರ್ಗಿಕವಾಗಿ ಹಿಂದೆ ಮುಂದೆ ಮುಟ್ಟಿದರೆ ಅಸಹ್ಯ ಪಟ್ಟುಕೊಂಡು ದೂರ ಸರಿಯುತ್ತಾರೆ. ಈ ಬಿಹಾರಿ ಕಾಮುಕ ಕಾಮಾತುರನಾಗಿ ಎಲ್ಲೆಲ್ಲಿಗೋ



ಆರೋಪಿಗಳಾದ ಮುಖೇಶ್ ರಾಜವಂಶಿ, ರಾಜಾರಾಮ್ ಕುಮಾರ್, ಪಿಂಟು ಕುಮಾರ್, ಕಾಲು ಕುಮಾರ್

ಹೆಟ್ಟಲು ಪ್ರಯತ್ನಿಸಿರಬೇಕು! ಹುಡುಗಿ ಛೀಮಾರಿ ಹಾಕಿ ಕಿರುಚಾಡಿರುತ್ತಾಳೆ. ವಿಕೃತಕಾಮಿ ಕಗ್ಗೊಲೆಗೈದು ಅಟ್ಟಹಾಸ ಮೆರೆದಿದ್ದಾನೆ!

ಆಮೇಲೆ ಮುಖೇಶ್ ದಂಪತಿಗಳು ಹಾಗೂ ತನ್ನ ಸ್ನೇಹಿತರಿಗೆ ಕರೆ ಮಾಡಿ ರೀನಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಸುಳ್ಳು ಹೇಳಿ ಅಲ್ಲಿಗೆ ಕರೆಸಿಕೊಂಡು, ಈ ಸುದ್ದಿ ಹಬ್ಬಿದರೆ ಎಲ್ಲರೂ ಜೈಲಿಗೆ ಹೋಗಬೇಕಾಗುತ್ತದೆ ಎಂದು ಹೆದರಿಸಿ, ಶವವನ್ನು ಸೂಟ್‌ಕೇಸ್‌ನಲ್ಲಿ ತುಂಬಿ ಎಲ್ಲರ ಸಹಾಯದಿಂದಲೇ ಹಳೇ ಚಂದಾಪುರ ರೈಲ್ವೆ ಬ್ರಿಡ್ಜ್ ಬಳಿ ಎಸೆದು... ನಂತರ ಎಲ್ಲರೂ ಬಿಹಾರ ಸೇರಿಕೊಂಡಿದ್ದಾರೆ!

ಎಸ್ಪಿ ಸಿ.ಕೆ. ಬಾಬಾ, ಎಎಸ್ಪಿ ನಾಗೇಶ್ ಮಾರ್ಗದರ್ಶನದಲ್ಲಿ ಹಾಗೂ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್ ನೇತೃತ್ವದಲ್ಲಿ ಈ ನಿಗೂಢ ಕೊಲೆ ಪ್ರಕರಣದ ತನಿಖೆ ನಡೆಸಿರುವ ಸೂರ್ಯನಗರ ಪಿಐ ಎಸ್.ಜೆ. ಮಹಾಜನ್ ಮತ್ತು ಟೀಮ್ ಬಿಹಾರಕ್ಕೆ ತೆರಳಿ ವಿಕೃತ ಕಾಮಿ ಹಂತಕ ಆಶಿಕ್ ಕುಮಾರ್ ಮತ್ತು ಇತರೆ ಆರೋಪಿಗಳಾದ ಮುಖೇಶ್, ಇಂದುಮತಿ, ಪಿಂಟು ಕುಮಾರ್, ಕಾಲು ಕುಮಾರ್, ಇನ್ನೊಬ್ಬ ಬಾಲಪರಾದಿಯನ್ನು ಬಂಧಿಸಿ ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ.

ವಿಚಾರಣೆ ವೇಳೆ, **420** ಆಶಿಕ್ ಕುಮಾರ್ ಬಿಹಾರಕ್ಕೆ ತನ್ನ ಸ್ವಗ್ರಾಮಕ್ಕೆ ತೆರಳಿದಾಗ ಬಡ ಹೆಣ್ಮಕ್ಕಳನ್ನೇ ಟಾರ್ಗೆಟ್ ಮಾಡಿ, ಅವರಿಗೆ ದುಡ್ಡಿನ ಆಸೆ ಹುಟ್ಟಿಸಿ ಏಮಾರಿಸುತ್ತಿದ್ದ ಅಂಶ ಬೆಳಕಿಗೆ ಬಂದಿದೆ! ಬೆಂಗಳೂರು ಸಿಟಿಯಲ್ಲಿ ನೌಕರಿ ಕೊಡಿಸ್ತೇನೆ, ಚೆನ್ನಾಗಿ ನೋಡ್ಕೋತೇನೆ ಅಂತೆಲ್ಲ ಹೇಳಿ ನಂಬಿಸಿ ತನ್ನ ಸ್ವಾರ್ಥ ಲಾಲಸೆಗೆ ಬಳಸಿಕೊಂಡಿದ್ದಾನೆ ಎನ್ನಲಾಗಿದೆ. ಈತನಿಗೆ ಕೊಲೆಯಾದ ತರುಣಿ ರೀನಾಳ ತಂದೆಯ ಪರಿಚಯವಿದ್ದು, ಅವಳು ಮನೆಯಿಂದ ನಾಪತ್ತೆಯಾದ ಕ್ಷಣದಿಂದಲೂ ಅವಳ ತಂದೆಗೆ ಅನುಮಾನ ಬಂದು ಈತನಿಗೆ ಕರೆ ಮಾಡುತ್ತಲೇ ಇದ್ದರಂತೆ.



ಹುಡುಗಿ ಕೊಲೆಯಾದ ಬಳಿಕವಷ್ಟೇ ಆಶಿಕ್‌ನ ಫೋನ್ ಸ್ವಿಚ್ ಆಫ್ ಆಗಿತ್ತು! ನಮ್ಮ ಪೊಲೀಸ್ ಸೂಟ್ ಕೇಸ್‌ನಲ್ಲಿದ್ದ ಶವವನ್ನು ನೋಡಿದಾಗಲೇ, ಇದು ಇಲ್ಲಿನ ಮುಖವಲ್ಲ, ಬಿಹಾರದ ಮುಖ ಎಂಬುದನ್ನ ಗ್ರಹಿಸಿ ಬಿಹಾರವು ಸೇರಿದಂತೆ ಎಲ್ಲಾ ರಾಜ್ಯಗಳಿಗೂ ಫೋಟೋ ಸಹಿತ ಮಾಹಿತಿ ರವಾನಿಸಲಾಗಿತ್ತು.ಇದನ್ನ ನವಾದ ಸಿಟಿಯ ಪೊಲೀಸರೂ ಗಮನಿಸಿ ಯುವತಿಯರು ತಂದೆ ತಾಯಿಗೆ ತೋರಿಸಿದ್ದರು! ಆಗಲೇ ತನಿಖೆ ಶರವೇಗ ಪಡೆದದ್ದು!

ಅಂತೂ, ಚಂದಾಪುರದ ಜನರ ನಿದ್ದೆಕಸಿದಿದ್ದ ಈ ನಿಗೂಢ ಕೊಲೆ ಕೇಸ್ ಸೀಕ್ರೆಟ್ ಇದೀಗ ಬಯಲಾಗಿ ನಿಟ್ಟುಸಿರು ಬಿಡುವಂತಾಯಿತು. ಇದಕ್ಕಾಗಿ, ಆನೇಕಲ್ ಉಪ ವಿಭಾಗದ ಡಿವೈ ಎಸ್ಪಿ ಮೋಹನ್‌ಕುಮಾರ್ ಮತ್ತು ಸಿಬ್ಬಂದಿ ವರ್ಗಕ್ಕೆ ಹ್ಯಾಟ್ಸ್ ಆಫ್.... ☯

# ಚಿಕ್ಕಬಳ್ಳಾಪುರ: ಮಸೀದಿ ಕೊಠಡಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ!

**ಬೆ**ಳಗಾವಿಯಲ್ಲಿ ಎರಡೆರಡು ಸಾಮೂಹಿಕ ಅತ್ಯಾಚಾರ ಪ್ರಕರಣಗಳು ವರದಿಯಾದ ಬೆನ್ನಲ್ಲೇ ಇತ್ತ ಚಿಕ್ಕಬಳ್ಳಾಪುರದಲ್ಲೂ ಬಾಲಕಿ ಮೇಲೆ ಅತ್ಯಾಚಾರ ಎಸಗಲಾಗಿದೆ. ಮಸೀದಿಯೊಂದರ ಮೌಲ್ವಿಯ ತಂದೆಯೇ ಮತ್ತೊಂದು ಮಸೀದಿಯ ಕೊಠಡಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ. ಚಾಕೊಲೇಟ್ ಕೊಡಿಸುವುದಾಗಿ ಪುಸಲಾಯಿಸಿ ಕರೆದೊಯ್ದು ಕೃತ್ಯ ಎಸಗಿದಾತ ಸದ್ಯ ಪೊಲೀಸರ ಅತಿಥಿಯಾಗಿದ್ದಾನೆ.

ಆರು ವರ್ಷ ವಯಸ್ಸಿನ ಬಾಲಕಿ ಮೇಲೆ 55 ವರ್ಷದ ವ್ಯಕ್ತಿ ಅತ್ಯಾಚಾರ ಎಸಗಿರುವ ಆರೋಪ ಚಿಕ್ಕಬಳ್ಳಾಪುರದಲ್ಲಿ ಕೇಳಿಬಂದಿದೆ. ಚಿಕ್ಕಬಳ್ಳಾಪುರ ನಗರದ ಶಮ್ಸ್ ಮಸೀದಿ ಕೊಠಡಿಯಲ್ಲಿ ಅತ್ಯಾಚಾರ ಎಸಗಲಾಗಿದೆ ಎಂದು ಸಂತ್ರಸ್ತೆ ಬಾಲಕಿಯ ತಾಯಿ ಆರೋಪಿಸಿದ್ದು, ಅವರು ನೀಡಿದ ದೂರಿನ ಆಧಾರದಲ್ಲಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿ ಮಹಫ್ಯೂಸ್ ಎಂಬಾತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಯು ಬೇರೊಂದು ಮಸೀದಿಯಲ್ಲಿ ಮೌಲ್ವಿಯಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ತಂದೆಯಾಗಿದ್ದಾನೆ.

**ಮಸೀದಿ ಕೊಠಡಿ ದುರುಪಯೋಗಪಡಿಸಿಕೊಂಡು ಕೃತ್ಯ**

ಆರೋಪಿಯ ಮಗ ಬೇರೊಂದು ಮಸೀದಿಯಲ್ಲಿ ಮೌಲ್ವಿಯಾಗಿ ಕೆಲಸ ಮಾಡುತ್ತಿದ್ದುದರಿಂದ ಮೌಲ್ವಿಯ ಆಶ್ರಯಕ್ಕೆ ಮಸಿದಿಯ ಕೊಠಡಿಯನ್ನು ಜಮಾತ್ ನೀಡಿತ್ತು. ಅದೇ ಕೊಠಡಿಯನ್ನು ಆರೋಪಿ ದುರುಪಯೋಗಪಡಿಸಿಕೊಂಡಿದ್ದಾನೆ. ಚಾಕೊಲೇಟ್ ಕೊಡಿಸುವ ಆಮಿಷವೊಡ್ಡಿ ಬಾಲಕಿಯನ್ನು ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ.

ಆರೋಪಿ ಮಹಫ್ಯೂಸ್ ಮೂಲತಃ ಉತ್ತರ ಪ್ರದೇಶ ಮೂಲದವನಾಗಿದ್ದಾನೆ. 20 ವರ್ಷಗಳ ಹಿಂದೆ ಚಿಕ್ಕಬಳ್ಳಾಪುರಕ್ಕೆ ಬಂದು ವಾಸ್ತವ್ಯ ಹೂಡಿದ್ದ. ಬೀದಿ ಬದಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದಾನೆ.

**ಮೌಲ್ವಿಯನ್ನು ತರಾಟೆಗೆ ತೆಗೆದುಕೊಂಡ ಸ್ಥಳೀಯರು**

ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಮಸೀದಿಯ ಮೌಲ್ವಿ ಸುಹೇಬ್‌ನನ್ನು ಸ್ಥಳೀಯರು ತರಾಟೆಗೆ ತೆಗೆದುಕೊಂಡಿದ್ದಾರೆ.



ಮೌಲ್ವಿಯ ಆಶ್ರಯಕ್ಕೆಂದು ಪಡೆದ ಕೊಠಡಿಯನ್ನು ತಂದೆಗೆ ಯಾಕೆ ನೀಡಿದ್ದು ಸ್ಥಳೀಯರು ತರಾಟೆಗೆ ತೆಗೆದುಕೊಂಡಿದ್ದಾರೆ. ಮತ್ತೊಂದೆಡೆ, ಸಂತ್ರಸ್ತೆ ಬಾಲಕಿಯ ತಾಯಿ ಆರೋಪಿಗೆ ಹಿಗ್ಗಾಮುಗ್ಗ ಥಳಿಸಿದ್ದಾರೆ ಎನ್ನಲಾಗಿದೆ.

ಇತ್ತೀಚೆಗೆ ರಾಜ್ಯದಲ್ಲಿ ಅತ್ಯಾಚಾರದಂಥ ಕೃತ್ಯಗಳು ಹೆಚ್ಚಾಗುತ್ತಿರುವುದು ಬೆಳಕಿಗೆ ಬರುತ್ತಿದೆ. ಬೆಳಗಾವಿಯ ಹೊರವಲಯದ ರೆಸಾರ್ಟ್‌ವೊಂದರಲ್ಲಿ ಅಪ್ರಾಪ್ತೆ ಮೇಲೆ ಗ್ಯಾಂಗ್ ರೇಪ್ ಎಸಗಿದ ಘಟನೆ ಬಗ್ಗೆ ಕೆಲವು ದಿನಗಳ ಹಿಂದೆ ವರದಿಯಾಗಿತ್ತು. ಅದರ ಬೆನ್ನಲ್ಲೇ, ಅಪ್ರಾಪ್ತೆ ಮೇಲೆ ಆರು ಜನ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆ ಬೆಳಗಾವಿ ನಗರದ ಹೊರವಲಯದ ಕಾಕತಿ ಠಾಣಾ ವ್ಯಾಪ್ತಿಯ ಗುಡ್ಡದಲ್ಲಿ ನಡೆದಿತ್ತು. ಇದೀಗ ಚಿಕ್ಕಬಳ್ಳಾಪುರದ ಮಸೀದಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆದಿದೆ. ☯



# ಕನ್ವರ್ ಲಾಲ್ ಗೆಟಪ್‌ನಲ್ಲಿ ನಟ ದರ್ಶನ್!

ಸ್ಯಾಂಡಲ್‌ವುಡ್‌ನ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮುಖ್ಯಭೂಮಿಕೆಯ ಮುಂದಿನ ಬಹುನಿರೀಕ್ಷಿತ ದಿ ಡೆವಿಲ್ ಪೋಸ್ಟರ್, ಟೀಸರ್‌ನಿಂದಲೇ ಸಖತ್ ಸದ್ದು ಮಾಡುತ್ತಿದೆ. ಶ್ರೀ ಜೈ ಮಾತಾ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಭರ್ಜರಿಯಾಗಿ ತಯಾರಾಗುತ್ತಿರುವ ಚಿತ್ರದ ಮಾತಿನ ಭಾಗದ ಶೂಟಿಂಗ್ ಪೂರ್ಣಗೊಂಡಿದೆ.



ನಿರ್ಮಾಪಕರು ಹೊಸ ಪೋಸ್ಟರ್ ಬಿಡುಗಡೆ ಮಾಡಿದ್ದಾರೆ, ಇದು ದರ್ಶನ್ ಅಭಿಮಾನಿಗಳನ್ನು ಹುಚ್ಚೆಬ್ಬಿಸಿದೆ. ನಟ ಅಂಬರೀಶ್ ಅವರ 'ಅಂತ' ಚಿತ್ರದ 'ಕನ್ವರ್‌ಲಾಲ್' ನೆನಪಿಸುವ ಲುಕ್‌ನಲ್ಲಿ ದರ್ಶನ್ ಕಾಣಿಸಿಕೊಂಡಿದ್ದಾರೆ.

ಪ್ರಕಾಶ್ ವೀರ್ ನಿರ್ದೇಶಿಸಿ ಬರೆದಿರುವ 'ಡೆವಿಲ್' ಚಿತ್ರವನ್ನು ಬೆಂಗಳೂರು ಮತ್ತು ರಾಜಸ್ಥಾನದಾದ್ಯಂತ ಚಿತ್ರೀಕರಿಸಲಾಗಿದೆ. ನಗರ ವೈಭವ ಮತ್ತು ಹಳ್ಳಿಗಾಡಿನ ಸೊಬಗನ್ನು ಸೆರೆಹಿಡಿಯಲಾಗಿದೆ. ನಿರ್ಣಾಯಕ ಭಾಗಗಳನ್ನು ಚಿತ್ರೀಕರಿಸಲು ತಂಡವು ವಿದೇಶಕ್ಕೆ ತೆರಳಲಿದೆ ಮತ್ತು ಶೀಘ್ರದಲ್ಲೇ ಡಬ್ಬಿಂಗ್ ಪ್ರಾರಂಭಿಸಲಿದೆ. ಈ ಚಿತ್ರದಲ್ಲಿ ದರ್ಶನ್‌ಗೆ ರಚನಾ ರೈ ಜೋಡಿಯಾಗಿದ್ದಾರೆ, ಮಹೇಶ್ ಮಂಜ್ರೇಕರ್ ಖಳನಾಯಕನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ತುಳಸಿ, ಅಚ್ಯುತ್‌ಕುಮಾರ್, ಶ್ರೀನಿವಾಸ್ ಪ್ರಭು ಮತ್ತು ಶೋಭ್‌ರಾಜ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಸುಧಾಕರ್ ಎಸ್. ರಾಜ್ ಛಾಯಾಗ್ರಹಣದೊಂದಿಗೆ, ಬಿ. ಅಜನೀಶ್ ಲೋಕನಾಥ್ ಡೆವಿಲ್ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ, ಮೋಹನ್ ಬಿ. ಕೆರೆ ಕಲಾ ನಿರ್ದೇಶನ ಮತ್ತು ರಾವ್-ಲಕ್ಷ್ಮಣ್ ಸಾಹಸ ನೃತ್ಯ ನಿರ್ದೇಶನ ಮಾಡಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟರ್‌ಗೆ ದರ್ಶನ್ ಫ್ಯಾನ್ಸ್ ಮೆಚ್ಚುಗೆ ಸೂಚಿಸುತ್ತಿದ್ದಾರೆ.

# ಒಳ್ಳೆಯತನಕ್ಕೆ ಸಿಕ್ಕ ಪ್ರತಿಫಲ?

ಇದು ಚೆನ್ನೈನಲ್ಲಿ ನಡೆದ ಘಟನೆ. ಯಾಸಿನ್ ಎಂಬ ಬಡ ಕುಟುಂಬದ ಬಾಲಕನಿಗೆ 50 ಸಾವಿರ ರೂ . ಕೈ ಚೀಲವಿದ್ದ ಬ್ಯಾಗ್ ಸಿಕ್ಕಿತ್ತು. ಅದು ಹಣ ಅಂತ ಗೊತ್ತಾದ ಮೇಲೂ ಹುಡುಗ ತನಗೆ ಸಿಕ್ಕ 50 ಸಾವಿರ ಹಣವಿದ್ದ ಬ್ಯಾಗ್ ಅನ್ನು ಪೊಲೀಸ್ ಸ್ಟೇಷನ್‌ಗೆ ಒಪ್ಪಿಸಿದ. ಅಲ್ಲಿದ್ದ ಪೊಲೀಸ್ ಆಫೀರ್ಸ್, ನೀನು ಯಾಕೆ ಈ ಹಣವನ್ನು ನೀನೇ ಉಪಯೋಗಿಸಿಕೊಳ್ಳದೆ ತಂದುಕೊಟ್ಟೆ? ಎಂದು ಕೇಳಿದರು.

ಅದಕ್ಕೆ ಆ ಹುಡುಗ, ಯಾರೋ ಕಷ್ಟಪಟ್ಟು ಸಂಪಾದನೆ ಮಾಡಿರುವ ಹಣವನ್ನು ನಾನು ತೆಗೆದುಕೊಳ್ಳುವುದು ಸರೀನಾ? ಎಂದು ಪ್ರಾಮಾಣಿಕವಾಗಿ ಉತ್ತರಿಸಿದ. ಅದಕ್ಕೆ ಆ ಆಫೀರ್ಸ್ ತುಂಬಾ ಖುಷಿಯಾಗಿ, ಆತನ ಬೆನ್ನು ತಟ್ಟುತ್ತಾ.... ನಿನಗೆ ಏನು ಬೇಕು... ನಿನ್ನ ಆಸೆ ಏನು ಎಂದು ಕೇಳಿದರು. ಅದಕ್ಕೆ ಆ ಹುಡುಗ ನಾನು ರಜನಿಕಾಂತ್ ಅವರನ್ನು ನೋಡಬೇಕು ಎಂದ! ಕ್ಷಣ ಕಾಲ ಮೌನವಾದ ಆ ಅಧಿಕಾರಿ, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದರು.

ಒಂದೆರಡು ದಿನದಲ್ಲಿ ಆ ಹುಡುಗ ರಜನಿಕಾಂತ್ ಅವರ ತೊಡೆಯ ಮೇಲೆ ಕುಳಿತಿದ್ದ! ರಜನಿ ಆ ಹುಡುಗನ ಸಂಪೂರ್ಣ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡರು! ಮಾತ್ರವಲ್ಲ, ಅವನನ್ನು ತನ್ನ ಸ್ವಂತ ಮಗನಂತೆ ನೋಡಿಕೊಳ್ಳುತ್ತೇನೆ ಎಂದು ಪ್ರಾಮಿಸ್ ಮಾಡಿದರು!!

**That is rajani...**

# 500 ವರ್ಷಗಳ ಹಿಂದಿನ ಪಿನಾಕಾ ದೇವಗಿರಿ ರಾಜನ ಕಥೆ







ಗೋಲ್ಡನ್‌ಸ್ಟಾರ್ ಗಣೇಶ್ ಅಭಿನಯದ ಬಹುನಿರೀಕ್ಷಿತ ಚಿತ್ರ ಪಿನಾಕಾ, ಪೀಪಲ್ ಮಿಡಿಯಾ ಫ್ಯಾಕ್ಟರಿ ಬ್ಯಾನರ್ ಅಡಿ ಟಿಜಿ ವಿಶ್ವಪ್ರಸಾದ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನೃತ್ಯನಿರ್ದೇಶಕ ಧನು ಮಾಸ್ಟರ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸದ್ಯ ಬೆಂಗಳೂರಿನ ಹೊರವಲಯದಲ್ಲಿ ಹಾಕಲಾಗಿರುವ ಬೃಹತ್ ಸೆಟ್‌ನಲ್ಲಿ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಸುಮಾರು 6 ಎಕರೆ ಜಾಗದಲ್ಲಿ ಹಾಕಲಾಗಿರುವ ಬೃಹತ್ ಸೆಟ್‌ನಲ್ಲಿ ಅರಮನೆ, ದ್ವಾರ, ಸೈನಿಕರ ಮನೆ, ಯುದ್ಧದ ಸ್ಥಳ, ದೇವಸ್ಥಾನ, ಶಿವ-ನಂದಿ, ಗುಹೆಗಳನ್ನು ನಿರ್ಮಿಸಲಾಗಿದೆ, ಕಳೆದ 30 ದಿನಗಳಿಂದ ಇಲ್ಲೇ ಶೂಟಿಂಗ್ ಮಾಡಲಾಗುತ್ತಿದ್ದು, ಇನ್ನೂ 10 ದಿನಗಳ ಚಿತ್ರೀಕರಣ ಬಾಕಿಯಿದೆ ಎಂದ ನಿರ್ದೇಶಕ ಧನುಕುಮಾರ್, ಸೆಟ್ ವಿಶೇಷತೆ ಬಗ್ಗೆ ಹೇಳುತ್ತಾ, ಈ ಸೆಟ್ ಮೂಲಕ 500 ವರ್ಷಗಳ ಹಿಂದಿನ ಇತಿಹಾಸ ಹೇಳುತ್ತೇವೆ. ಸದ್ಯ ಒಂದು ಮಹಡಿಯ ಸೆಟ್ ಹಾಕಿದ್ದು, ಗ್ರಾಫಿಕ್ಸ್‌ನಲ್ಲಿ ಮೂರು ಮಹಡಿಯವರೆಗೆ ಬೆಳೆಸಲಾಗುತ್ತಿದ್ದು, ಇದರಲ್ಲಿ ಸಿಜಿ ವರ್ಕ್ ತುಂಬಾ ಇದೆ ಎಂದರು.

ಇದೇ ಸೆಟ್‌ನಲ್ಲಿ ಕಳೆದ 30 ದಿನದಿಂದ ಎರಡನೇ ಹಂತದ ಶೂಟಿಂಗ್ ನಡೆಯುತ್ತಿದ್ದು, ಮಳೆ ಗಾಳಿಯಿಂದ ಸಾಕಷ್ಟು ತೊಂದರೆಯಾದರೂ, ಚಿತ್ರತಂಡ ತುಂಬಾ ಸಪೋರ್ಟ್ ಮಾಡಿದೆ. 500 ವರ್ಷಗಳ ಹಿಂದಿನ ದೇವಗಿರಿ ಎಂಬ ಸಾಮ್ರಾಜ್ಯದ ರಾಜನ ಕಥೆ ಇದರಲ್ಲಿದೆ. ಪ್ರತಿದಿನ 800 ರಿಂದ 900 ಜೂನಿಯರ್ ಕಲಾವಿದರನ್ನು ಬಳಸಿಕೊಳ್ಳಲಾಗುತ್ತಿದೆ. ಈ ಸೆಟ್ ಹಾಕಲು ಕಲಾನಿರ್ದೇಶಕ ಸಂತೋಷ 4 ತಿಂಗಳು ಶ್ರಮಪಟ್ಟಿದ್ದಾರೆ. 'ಪಿನಾಕ' ಒಬ್ಬ ರಾಜನ ಹೆಸರು. ಚಿತ್ರದಲ್ಲಿ ನಯನ, ಅರ್ಚನಾ ನಾಯಕಿಯರು. ಸಿಜಿ ವರ್ಕ್‌ಗೇ ಜಾಸ್ತಿ ಸಮಯ ಬೇಕಾಗಿದ್ದು, ಚಿತ್ರವನ್ನು ಮುಂದಿನ ವರ್ಷ ರಿಲೀಸ್ ಮಾಡೋ ಯೋಜನೆಯಿದೆ. ಸದ್ಯ ಮಾಂಟೆಜ್ ಸಾಂಗ್ ಮಾತ್ರ ಶೂಟ್ ಮಾಡಿದ್ದೇವೆ. ಇನ್ನೂ ಮೂರು ಹಾಡುಗಳ ಚಿತ್ರೀಕರಣ ಬಾಕಿ ಇದೆ. ಈ ಮೊದಲು ಗಣೇಶ ಅವರ ಜೊತೆ ಕೆಲಸ ಮಾಡಿದ್ದರಿಂದ, ಈ ಚಿತ್ರದಲ್ಲಿ ಮತ್ತಷ್ಟು ಸುಲಭವಾಯ್ತು ಎಂದೂ ನಿರ್ದೇಶಕ ಧನು ಮಾಹಿತಿ ನೀಡಿದರು. ನಂತರ ಚಿತ್ರದ ನಾಯಕ ಗಣೇಶ್ ಮಾತನಾಡುತ್ತ, ಪಿನಾಕಾ ರಾಜನಾಗಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ, ಮುಖ್ಯವಾಗಿ ಈ ಚಿತ್ರಕ್ಕೆ ನಿರ್ದೇಶಕರು, ನಿರ್ಮಾಪಕರು ಹಾಕುತ್ತಿರುವ ಶ್ರಮ ತುಂಬಾ ದೊಡ್ಡದು. ಈ ಸೆಟ್‌ನಲ್ಲಿ ಪ್ರತಿದಿನ 4 ಕ್ಯಾಮರಾಗಳು ಓಡಾಡುತ್ತಾ ಇರುತ್ತವೆ. ಪಿನಾಕನ ಪಾತ್ರಧಾರಿಯಾಗಿ ನನಗೆ ತುಂಬಾ ಖುಷಿ ಕೊಟ್ಟ ಚಿತ್ರವಿದು. ನನಗೆ ಇದೊಂದು ಬೇರೆ ಥರದ ಚಿತ್ರವಾಗಲಿದೆ. ಈ ಚಿತ್ರದಲ್ಲಿ ಹಲವಾರು ಹಿರಿಯ ನಟರೊಂದಿಗೆ ನಟಿಸುತ್ತಿರುವುದು ನನ್ನ ಭಾಗ್ಯ ಎನ್ನಬಹುದು. ಪಿನಾಕಾ ಪಾತ್ರದಲ್ಲಿ ದೊಡ್ಡ ವೈಬ್ರೇಷನ್ ಇದೆ' ಎಂದು ಹೇಳಿದರು.

ಹಿರಿಯ ನಟ ಶ್ರೀನಿವಾಸಮೂರ್ತಿ ಮಾತನಾಡಿ ಇದು ಗಣೇಶ್‌ಗೆ ಐತಿಹಾಸಿಕವಾಗಿ ನಿಲ್ಲುವ ಚಿತ್ರ. ಮಯೂರ ಸಿನಿಮಾ ಲೆವೆಲ್‌ಗೆ ಹೋಲಿಸುವುದಾದರೆ, ಅದಕ್ಕಿಂತ ದೊಡ್ಡಮಟ್ಟದಲ್ಲಿ ಈ ಚಿತ್ರ ಮೂಡಿಬರಲಿದೆ ಎಂದು ಹೇಳಬಲ್ಲೆ. ಗಣೇಶ್ ಅವರಿಗೆ ಭಾಷೆಯ ಮೇಲೆ ತುಂಬಾ ಹಿಡಿತವಿದೆ. ಪಿನಾಕ ಎಂಬುದು ರಾಜನ ವಂಶದ ಹೆಸರು. ನಾನಿಲ್ಲಿ ಗುರುವಿನ ಪಾತ್ರ ಮಾಡುತ್ತಿದ್ದೇನೆ' ಎಂದರು. ವೇದಿಕೆಯಲ್ಲಿ ನಟರಾದ ಹೊನ್ನವಳ್ಳಿ ಕೃಷ್ಣ, ರವೀಂದ್ರ ಹಾಗೂ ಛಾಯಾಗ್ರಾಹಕ ಕರಮ್ ಚಾವ್ಲಾ ತಮ್ಮ ಅನುಭವ ಹಂಚಿಕೊಂಡರು.

# 'ಸಿಕಂದರ್' ಸೋಲಿನ ಬಳಿಕ ಸಖತ್ ಬೋಲ್ಡ್ ಪಾತ್ರದಲ್ಲಿ ರಶ್ಮಿಕಾ ಮಂದಣ್ಣಾ...




ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಬ್ಯೂಸಿ ಇರುವ ಬಹುಭಾಷಾ ನಟಿ ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರು ಬಾಲಿವುಡ್‌ನಲ್ಲಿ ನೆಲೆಯೂರಿದ್ದಾರೆ. ಹಿಂದಿಯ 'ಕಾಕ್‌ಟೈಲ್ 2' ಸಿನಿಮಾಗೆ ನಟ ಶಾಹಿದ್ ಕಪೂರ್ ಅವರಿಗೆ ಜೋಡಿಯಾಗಿದ್ದಾರೆ. ಒಂದರ ಹಿಂದೊಂದರಂತೆ ಹಿಂದಿ ಸಿನಿಮಾಗಳಲ್ಲಿ ಬ್ಯೂಸಿಯಾಗುತ್ತಿರುವ ನಟಿ, ಇದೀಗ ಬೋಲ್ಡ್ ಪಾತ್ರ ಮಾಡಲಿದ್ದಾರೆ.

ಬಾಲಿವುಡ್ ನಟ ಸಲ್ಮಾನ್ ಖಾನ್ ಜೊತೆ ನಟಿಸಿದ್ದ 'ಸಿಕಂದರ್' ಸಿನಿಮಾ ಬಾಕ್ಸಾಫೀಸ್‌ನಲ್ಲಿ ಸುದ್ದಿ ಮಾಡಲಿಲ್ಲ, ನಿರಾಸೆ ಮೂಡಿಸಿತು. ಅದರ ಬೆನ್ನಲ್ಲೆ ಮತ್ತೊಂದು ಬಾಲಿವುಡ್ ಸಿನಿಮಾಗೆ ನಟಿ ರಶ್ಮಿಕಾ ಆಯ್ಕೆ ಆಗಿದ್ದಾರೆ. ಹೀಗಾಗುತ್ತೆ ಎಂದುಕೊಂಡಿರಲಿಲ್ಲ ಎಂದು ಸಂದರ್ಶನವೊಂದರಲ್ಲಿ ನಟಿ ಪ್ರತಿಕ್ರಿಯಿಸಿದ್ದರು. 'ಸಿಕಂದರ್' ಸಿನಿಮಾ ಸೋಲಿನಿಂದ ಪಾಠ ಕಲಿತಂತೆ ಕಾಣುವ ನಟಿ ರಶ್ಮಿಕಾ ಬಾಲಿವುಡ್‌ನಲ್ಲಿ ಹಿಟ್ ಬಾರಿಸಲು ಮತ್ತೊಂದು ಹೊಸ ರೀತಿಯ ಪಾತ್ರ ಮಾಡಲು ಮುಂದಾಗಿದ್ದಾರೆ.

ಕಾಕ್‌ಟೈಲ್ 2 ಚಿತ್ರದಲ್ಲಿ ನಟಿ ರಶ್ಮಿಕಾ ಜೊತೆಗೆ, ಕೃತಿ ಸನೂನ್ ಸಹ ಬಣ್ಣ ಹಚ್ಚಲಿದ್ದಾರೆ. ಈ ಬಾರಿ ತಾನು ಹೊಸ ರೀತಿಯ ಸವಾಲಿನ, ಪಾತ್ರಗಳನ್ನು ಮಾಡುವ ಉದ್ದೇಶ ರಶ್ಮಿಕಾ ಹೊಂದಿದ್ದಾರೆ. ಹೀಗಾಗಿ ಈ ಸಿನಿಮಾದಲ್ಲಿನ ಅವರ ಪಾತ್ರ ತುಂಬಾ ಬೋಲ್ಡ್ ಆಗಿರಲಿದೆ. ಸಖತ್ ಗ್ಲಾಮರಸ್ ಆಗಿ ರಶ್ಮಿಕಾ ಬೆಳ್ಳಿ ಪರದೆಯಲ್ಲಿ ಮಿಂಚಲಿದ್ದಾರೆ. ಇದು ರಶ್ಮಿಕಾ ಫ್ಯಾನ್ಸ್ ಹಬ್ಬದೂಟ ನೀಡಲಿದೆ ಎನ್ನಲಾಗುತ್ತಿದೆ.

ಈ ಹಿಂದೆ ಹಿಂದಿಯ 'ಮಿಷನ್ ಮಜ್ನು', 'ಗುಡ್ ಬೈ' ಸಿನಿಮಾಗಳಲ್ಲಿ ನಟಿಸಿದ್ದರು. ಅವು ಅಷ್ಟಾಗಿ ಸುದ್ದು ಮಾಡಿರಲಿಲ್ಲ. ನಂತರ 'ಅನಿಮಲ್'ನಲ್ಲಿ ನಟಿಸಿದರು. ಇದು ಬಾಲಿವುಡ್‌ನಲ್ಲಿ ಸಖತ್ ಸೌಂಡ್ ಮಾಡಿತ್ತು. ಕೋಟಿ ಕೋಟಿ ಕಲೆಕ್ಷನ್ ಮಾಡಿತ್ತು. ಪ್ರಶಸ್ತಿಯನ್ನು ಗಿಟ್ಟಿಸಿಕೊಂಡಿತ್ತು. ನಂತರ ಐತಿಹಾಸಿಕ ಪಾತ್ರವನ್ನು 'ಛಾವಾ' ಮಾಡಿದರು. ನಟಿಗೆ ಈ ಸಿನಿಮಾ ಸಹ ಹೆಸರು ತಂದು ಕೊಟ್ಟಿತು. ಆದರೆ ಕೈ ಕೊಟ್ಟಿದ್ದು 'ಸಿಕಂದರ್' ಸಿನಿಮಾ. ಹೀಗಾಗಿಯೇ ಬೋಲ್ಡ್ ಮತ್ತು ಹೊಸ ಬಗೆಯ ಪಾತ್ರ ಮಾಡಲು ಸಜ್ಜಾಗಿದ್ದಾರೆ. ಇದು ಎಷ್ಟರಮಟ್ಟಿಗೆ ಗ್ಲಾಮರಸ್ ಆಗಿರಲಿದೆ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ.

ದಿನೇಶ್ ವಿಜನ್ ಹಾಗೂ ಲವ್ ರಂಜನ್ ಅವರು ಈ 'ಕಾಕ್‌ಟೈಲ್ 2' ಅನ್ನು ನಿರ್ಮಿಸುತ್ತಿದ್ದಾರೆ. ನಟಿ ರಶ್ಮಿಕಾ, ಶಾಹಿರ್ ಕಪೂರ್, ಕೃತಿ ಸನೂನ್‌ಗೆ ಲೀಡ್ ಪಾತ್ರ ಸಿಕ್ಕಿದೆ. ದೊಡ್ಡ ತಾರಾಬಳಗ ಇರುವ ಈ ಸಿನಿಮಾ ಚಿತ್ರೀಕರಣ ಆರಂಭವಾಗಬೇಕಿದೆ. ಚಿತ್ರತಂಡ ಸಕಲ ರೀತಿಯಲ್ಲಿ ಸಿದ್ಧವಾಗುತ್ತಿದೆ. ರಶ್ಮಿಕಾ ನಟನೆ ತಮಿಳಿನ ನಟ ಧನುಷ್ ಅವರೊಂದಿಗೆ ಸಿದ್ಧವಾದ 'ಕುಬೇರ' ಸಿನಿಮಾ ರಿಲೀಸ್ ರೆಡಿಯಾಗಿದೆ. 'ದಿ ಗರ್ಲ್ ಫ್ರೆಂಡ್', 'ಥಾಮಾ' ಸೇರಿ ಕೆಲವು ಪ್ರಾಜೆಕ್ಟ್ ಗಳಲ್ಲಿ, ಜಾಹೀರಾತುಗಳಲ್ಲಿ ನಟಿ ಬ್ಯೂಸಿ ಇದ್ದಾರೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 8.6.2025

# ರಾಜ್ ಬಗ್ಗೆ ಸುಳ್ಳು ಬೊಗಳಿದ ವರ್ಮ!



ಸದಾ ಸುದ್ದಿಯಲ್ಲಿರಬೇಕು ಎಂಬ ಚಟದಿಂದಾಗಿ ಕೆಲವರು ಏನಾದರೊಂದು ಮಾತಾಡಿ ಕಾಂಟ್ರೊವರ್ಸಿ ಎಬ್ಬಿಸುತ್ತಾರೆ. ಈ ವಿಚಾರದಲ್ಲಿ ರಾಮ್‌ಗೋಪಾಲ್ ವರ್ಮ ಎತ್ತಿದ ಕೈ. ಥಗ್ ಲೈಫ್ ಸಿನಿಮಾ ಆಡಿಯೋ ರಿಲೀಸ್ ಕಾರ್ಯಕ್ರಮದ ವೇಳೆ ನಟ ಕಮಲ್ ಹಾಸನ್ ಕನ್ನಡದ ಬಗ್ಗೆ ನೀಡಿದ ವಿವಾದಾತ್ಮಕ ಹೇಳಿಕೆಯಿಂದ ಅವರ ಸಿನಿಮಾ ಕರ್ನಾಟಕದಲ್ಲಿ ಎಲ್ಲಿಯೂ ಬಿಡುಗಡೆಯಾಗಿಲ್ಲ. ಅಲ್ಲದೇ ಕಮಲ್ ಕನ್ನಡಿಗರ ಕ್ಷಮೆ ಸಹ ಕೇಳದೇ ಉದ್ಧಟತನ ಮೆರೆದು ಹೈಕೋರ್ಟ್‌ಗೂ ಹೋಗಿ ಛೀಮಾರಿ ಹಾಕಿಸಿಕೊಂಡು ಬಂದಿದ್ದಾರೆ. ಈ ವಿಚಾರದಲ್ಲಿ ವರ್ಮ ಕೂಡ ಮೂಗು ತೂರಿಸಿ, ಕನ್ನಡಿಗರದ್ದು ಹೊಸ ರೀತಿಯ ಗೂಂಡಾಗಿರಿ ಎಂದಿದ್ದ!



ಈಗ ನೋಡಿದರೆ, ಕನ್ನಡ ಅಸ್ಮಿತೆ, ವರನಟ ಡಾ. ರಾಜ್‌ಕುಮಾರ್ ಅವರ ಬಗ್ಗೆ ಮಾತನಾಡಿದ್ದು, ಸಮಸ್ತ ಕನ್ನಡಿಗರ ಕೋಪಕ್ಕೆ ಗುರಿಯಾಗಿದ್ದಾನೆ. ರಾಜ್ ಕುಮಾರ್ ಅವರು ಅಮಿತಾಭ್ ಬಚ್ಚನ್ ಅವರ ಚಿತ್ರಗಳನ್ನು ರಿಮೇಕ್ ಮಾಡುವ ಮೂಲಕ ಯಶಸ್ಸು ಕಂಡರು ಎಂದು ಹೇಳಿದ್ದಾನೆ! ಅಲ್ರಿ, ಈ ಬಡ್ಡಿ ಮಗನಿಗೆ ಬುದ್ಧಿ ಇದೆಯಾ... ಕುಡಿದು ಕುಡಿದು ತಲೆ ತುಂಬಾ ಲದ್ದಿ ತುಂಬಿಕೊಂಡಿರುವ ಈತ ರಾಜಕುಮಾರರ ಎಷ್ಟು ಸಿನಿಮಾಗಳನ್ನು ನೋಡಿದ್ದಾನೆ?

ರಾಜ್ ಅಭಿನಯಿಸಿರುವ ಇನ್ನೂರು ಸಿನಿಮಾಗಳು ಸ್ವಮೇಕ್. ಅಪೂರ್ವ ಸಂಗಮ ತಮಿಳ್ ರಿಮೇಕ್. ಅವರ ಪ್ರಪ್ರಥಮ ಚಿತ್ರ ಬೇಡರ ಕಣ್ಣಪ್ಪ ತೆಲುಗು ತಮಿಳಿನಲ್ಲಿ ಡಬ್ಬಿಂಗ್ ಆಗಿತ್ತು. ಅದು ನಿರ್ಮಾಪಕ ಮೇಯಪ್ಪನ್ ನಿರ್ಧಾರ. ಮಹಿಷಾಸುರ ಮರ್ದಿನಿ ಕೂಡ ತೆಲುಗಿನಲ್ಲಿದೆ. ಹೀಗೆ ನಾಲ್ಕು ಚಿತ್ರಗಳನ್ನು ಬಿಟ್ಟರೆ ಅವರ ಅಭಿನಯದ ಉಳಿದೆಲ್ಲ ಚಿತ್ರಗಳು ಅಪ್ಪಟ ಕನ್ನಡ ನೆಲದವು. ಈ ಅದ್ಭುತ ಕಲಾಕೃತಿಗಳನ್ನು ದಿಲೀಪ್ ಕುಮಾರ್, ಎಂಜಿಆರ್, ಶಿವಾಜಿ, ಎನ್‌ಟಿಆರ್... ಮುಂತಾದ ಮಹನೀಯರು ಅವರವರ ಭಾಷೆಯಲ್ಲಿ ರಿಮೇಕ್ ಮಾಡಿಸಿ ಮಿಂಚಿದ್ದಾರೆ! ಸತ್ಯ ಹೀಗಿರುವಾಗ, ತೀಟೆ ಸುಬ್ಬ ರಾಮ್‌ಗೋಪಾಲ್ ವರ್ಮ ರಾಜ್ ಬಗ್ಗೆ ಸುಳ್ಳು ಸುಳ್ಳೇ ಸುದ್ದಿ ಭಿತ್ತರಿಸಿದ್ದಾನೆ! ಈತ ಬೆಂಗಳೂರಿಗೆ ಬರಲಿ... ಎಂದು ರಾಜ್ ಅಭಿಮಾನಿಗಳು ಕಾಯುತ್ತಿದ್ದಾರೆ!! ☯



# ಜನ ಮೆಚ್ಚಿದ 'ಮಾದೇವ'ನಿಗೆ ಜೈ ಜೈ ಎನ್ನಿರೋ!!

ನಮ್ಮ ಜನರೇಶನ್‌ಗೆ ಕಮಾಂಡೋ, ಟರ್ಮಿನೇಟರ್, ರಾಂಬೊ... ಎಲ್ಲಾ ಆಗಿದ್ದವರು ಟೈಗರ್ ಪ್ರಭಾಕರ್! ಆಕ್ಷನ್ ಸಿನಿಮಾ ಅಂದ್ರೆ ಅದು ಟೈಗರ್ ಪ್ರಭಾಕರ್ ಸಿನಿಮಾ! ನಾನಂತು ಆಲ್‌ಮೋಸ್ಟ್ ಅವರ ಎಲ್ಲಾ ಸಿನಿಮಾಗಳನ್ನ ತಪ್ಪದೆ ನೋಡುತಿದ್ದೆ. ಈಗ ಅವರ ಮಗ ವಿನೋದ್ ಪ್ರಭಾಕರ್ 'ಮರಿ ಟೈಗರ್' ಅಂತನೇ ಖ್ಯಾತಿ ಆಗಿರೋರು. ವಿನೋದ್ ಅಪ್ಪನ ಹಾದಿಯಲ್ಲೇ ಹೋಗುತ್ತಿದ್ದಾರೆ. ಕಳೆದ ಜೂನ್ 6ರಂದು ಇವರ ಅಭಿನಯದ 'ಮಾದೇವ' ಸಿನಿಮಾ ಬಿಡುಗಡೆ ಆಗಿ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ಹೊಸ ತೆರನಾದ ಕತೆ. ವಿನೋದ್ ಇಲ್ಲಿ ಕಾರಾಗೃಹದಲ್ಲಿ ಖೈದಿಗಳಿಗೆ ನೇಣು ಜೇರುವ ವಿಕ್ಷಿಪ್ತ ಜೀವಿ!



ಇಡೀ ಸಿನಿಮಾದಲ್ಲಿ 4ರಿಂದ 5 ನಿಮಿಷ ಇವರ ಸಂಭಾಷಣೆ ಇರಬಹುದು, ಅಷ್ಟೇ. ಆದರೆ ಕಣ್ಣಲ್ಲೇ ಮಾತಾಡುವ ಅದ್ಭುತ ಪಾತ್ರ! ಮಾದೇವನ ವೀಕ್ಷಕರು ಮರಿ ಟೈಗರ್ ಅಭಿನಯ ತುಂಬಾ ಚೆನ್ನಾಗಿದೆ ಎಂದು ಹಾಡಿ ಹೊಗಳುತ್ತಿದ್ದಾರೆ. ಟೈಗರ್ ಪ್ರಭಾಕರ್‌ರವರ ಜಿದ್ದು ಸಿನಿಮಾ ಒಂದು ಕ್ಷಣಕ್ಕೆ ನೆನಪಾಗುತ್ತದೆ. ನಿರ್ದೇಶಕ ನವೀನ್ ರೆಡ್ಡಿರವರು ತುಂಬಾ ಚೆನ್ನಾಗಿ ಮೇಕಿಂಗ್ ಮಾಡಿದ್ದಾರೆ, ಸಿನಿಮಾ ಕಥೆಗೆ ಏನು ಕೇಳುತ್ತೋ, ಅದನ್ನ ಕೊಟ್ಟು ಅದ್ಭುತವಾಗಿ ಚಿತ್ರಿಸಿದ್ದಾರೆ.

ಹಾಗೇ ಕಲಾವಿದರಿಂದ ಒಳ್ಳೆ ಅಭಿನಯವನ್ನು ತೆಗೆಸಿದ್ದಾರೆ. ಇನ್ನು, ಹೀರೋಯಿನ್ ಸೋನಲ್ ಮೊಂಟೆರೋ ಅಂತೂ ಒಂದು ಮಾಸ್ ಸಿನಿಮಾದ ಕ್ಯೂಟ್ ಎಲಿಮೆಂಟ್ ಅಂತಾನೇ ಹೇಳಬಹುದು. ಅವರ ಮುದ್ದು ಮುಖ ಮತ್ತು ಸೌಂದರ್ಯ ಹಾಗೂ ಅಭಿನಯದಿಂದ ನೋಡುಗರ ಮನ ಗೆಲ್ಲೋದಂತೂ ಖಂಡಿತಾ. ಸಂಗೀತ ನಿರ್ದೇಶಕ ಪ್ರದ್ಯೋತ್ತಮ ಹಾಡುಗಳನ್ನ ಚೆನ್ನಾಗಿ ಕಂಪೋಸ್ ಮಾಡಿದ್ದಾರೆ. ಬ್ಯಾಕ್ ಗ್ರೌಂಡ್ ಸ್ಕೋರ್ ಸೂಪರ್. ಇದು ಸಿನಿಮಾದ ಹೈಲೈಟ್ ಗಳಲ್ಲಿ ಒಂದು ಅಂತ ಹೆಮ್ಮೆಯಿಂದ ಹೇಳಬಹುದು. ವಿಜಯ್ ಎಂ. ಕುಮಾರ್‌ರವರ ಎಡಿಟಿಂಗ್ ಕೈ ಚಳಕ ಎದ್ದು ಕಾಣುತ್ತದೆ. ಓವರ್ ಆಲ್ ಒಂದು ಒಳ್ಳೆ ಪ್ಯಾಕೇಜ್ ಇರುವಂತ ಪಕ್ಕ ಮಾಸ್ ಸಿನಿಮಾ ಮಾದೇವ ಎನ್ನಬಹುದು. ಒಳ್ಳೆ ಸಿನಿಮಾ ಕೊಟ್ಟರೆ ಕರ್ನಾಟಕದ ಸಿನಿ ರಸಿಕರು ಯಾವತ್ತೂ ತಿರಸ್ಕಾರ ಮಾಡಿಲ್ಲ. ಮಾದೇವನಿಗೆ ಅದ್ಧೂರಿ ಸ್ವಾಗತ ಕೋರಿ ಸ್ವೀಕರಿಸಿದ್ದಾರೆ. ನೀವೂ ನೋಡಿ, ಕನ್ನಡ ಸಿನಿಮಾ ಗೆಲ್ಲಿಸಿ ಉಳಿಸಿ ಬೆಳೆಸಿ. ☯


## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ - ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ಧವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666 policenewsreporter@gmail.com


Vol. 41 No. 01 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com